"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೈದನೆಯ ಅಧಿವೇಶನ

## ವಿಷಯಾನುಕ್ರಮಣಿಕೆ (Index)

ದಿನಾಂಕ:15ನೇ ಡಿಸೆಂಬರ್ 2021
ಬುಧವಾರ

1. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**"ಸರ್ಕಾರದಲ್ಲಿರುವ ಒಬ್ಬ ಹಾಲಿ ಮಂತ್ರಿ ಹಾಗೂ ಮಾಜಿ ಮಂತ್ರಿ ಇವರಿಬ್ಬರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬೇಕೆನ್ನುವ ಬಗ್ಗೆ.**

-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ

2. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**348- ಏಕವ್ಯಕ್ತಿ ದುರಸ್ತಿ ಹಾಗೂ ಆರ್.ಆರ್.ಟಿ. ಬಗ್ಗೆ ಮಾಹಿತಿ**
-ಶ್ರೀ ಮರಿತಿಬ್ಬೇಗೌಡ
-ಶ್ರೀ ಆರ್.ಅಶೋಕ(ಕಂದಾಯ ಸಚಿವರು)

**361-ಗೋಮಾಳ ಮತ್ತು ಸರ್ಕಾರಿ ಜಮೀನುಗಳ ಬಗ್ಗೆ**
-ಡಾ: ವೈ.ಎ.ನಾರಾಯಣಸ್ವಾಮಿ
-ಶ್ರೀ ಆರ್.ಅಶೋಕ(ಕಂದಾಯ ಸಚಿವರು)

**393+394- ತುಮಕೂರು-ನೆಲಮಂಗಲ ಟೋಲ್ ಅವಧಿ ಮುಗಿದಿರುವ ಬಗ್ಗೆ**
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಕಾಂತರಾಜ್(ಬಿಎಂಎಲ್)
-ಶ್ರೀ ಸಿ.ಸಿ.ಪಾಟೀಲ(ಲೋಕೋಪಯೋಗಿ ಸಚಿವರು)

**274-ಜಮೀನುಗಳ ಸರ್ವೆ ಸ್ಕೆಚ್ ಮಾಡಿಸುವಲ್ಲಿ ವಿಳಂಬ**
-ಶ್ರೀ ಎಸ್.ಎಲ್.ಭೋಜೇಗೌಡ
-ಶ್ರೀ ಆರ್.ಅಶೋಕ(ಕಂದಾಯ ಸಚಿವರು)

**359-ವಸತಿ ಯೋಜನೆಗಳ ಕುರಿತು**
-ಶ್ರೀ ಕೆ.ಹರೀಶ್‌ಕುಮಾರ್
-ಶ್ರೀ ವಿ.ಸೋಮಣ್ಣ(ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**305-ರಾಜ್ಯದ ಬುಡಕಟ್ಟು ಸಮುದಾಯದ ಅನೇಕ ಕುಟುಂಬಗಳಿಗೆ ಗ್ರಾಮ ಪಂಚಾಯತ್‌ಗಳಲ್ಲಿ ಮನೆ ಇಲ್ಲದ ಬಗ್ಗೆ**

-ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
-ಶ್ರೀ ವಿ.ಸೋಮಣ್ಣ(ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವರು)

**408-ರಾಜ್ಯದಲ್ಲಿರುವ ಪಶು ಚಿಕಿತ್ಸಾಲಯಗಳು ಮತ್ತು ಸಿಬ್ಬಂದಿಗಳ ಕೊರತೆ ಬಗ್ಗೆ**

-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನೆ ಸಚಿವರು)

**284-ವಿಜಯಪುರ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪಿಸುವುದರ ಬಗ್ಗೆ**

-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
(ಶ್ರೀ ಪ್ರಕಾಶ್ ಕೆ.ರಾಥೋಡ್‌ರವರ ಪರವಾಗಿ)
-ಶ್ರೀ ವಿ.ಸೋಮಣ್ಣ(ವಸತಿ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)

**316-ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸುವ ಬಗ್ಗೆ**

-ಶ್ರೀ ಎಸ್.ರುದ್ರೇಗೌಡ
-ಶ್ರೀ ಸಿ.ಸಿ.ಪಾಟೀಲ(ಲೋಕೋಪಯೋಗಿ ಸಚಿವರು)

**347-ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳು ಮಳೆಯಿಂದ ಹಾನಿಯಾಗಿರುವ ಕುರಿತು**

-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
(ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರ ಪರವಾಗಿ)

**ಆ)ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ಬೆಂಗಳೂರಿನ ಆರ್.ಟಿ.ಓ. ಕಚೇರಿಯಲ್ಲಿ ನಕಲಿ ನೋಂದಣಿ ಮಾಡುವ ಮೂಲಕ ತೆರಿಗೆ ವಂಚಿಸುತ್ತಿರುವ ಬಗ್ಗೆ.

-ಶ್ರೀ ಎನ್.ರವಿಕುಮಾರ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಆ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ಫಾಗಿಂಗ್ ಕೆಲಸಕ್ಕೆ ಟೆಂಡರ್ ಕರೆಯದೇ ಅವ್ಯವಹಾರ ನಡೆದಿರುವ ಬಗ್ಗೆ.

-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಇ) ಮಂಗಳೂರು ನಗರ ವ್ಯಾಪ್ತಿಯಲ್ಲಿ ಕಳ್ಳತನ, ದೌರ್ಜನ್ಯ, ಅನೈತಿಕ ಪ್ರಕರಣಗಳು ಬೆಳಕಿಗೆ ಬಂದಿರುವ ಬಗ್ಗೆ.

-ಶ್ರೀ ಕೆ.ಹರೀಶ್‌ಕುಮಾರ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪಿ.ಹೆಚ್.ಡಿ. ಸ್ಕಾಲರ್‌ಶಿಪ್‌ಗೆ ವಯಸ್ಸಿನ ಮಿತಿ ನಿಗದಿ ಮಾಡಿರುವ ಕುರಿತು.

-ಡಾ:ತಳವಾರ ಸಾಬಣ್ಣ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಸಭಾ ನಾಯಕರು)

ಉ) ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಒಳಪಡುವ ರಸ್ತೆಗಳಿಗೆ ಪದೇ ಪದೇ ಡಾಂಬರೀಕರಣ ಹಾಗೂ ಗುಂಡಿ ಮುಚ್ಚುವುದರಿಂದ ಸರ್ಕಾರದ ಹಣ ಪೋಲಾಗುತ್ತಿರುವ ಬಗ್ಗೆ.

-ಶ್ರೀ ಪಿ.ಆರ್.ರಮೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಊ) ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಿ.ಇ.ಟಿ.-೨೦೨೧ರ ಎಂಜಿನಿಯರಿಂಗ್ ೨ನೇ ಹಂತದ ಆಯ್ಕೆ ಪ್ರಕ್ರಿಯೆಯಲ್ಲಿ ವಿಧಿಸಿರುವ ಷರತ್ತುಗಳ ಬಗ್ಗೆ.

-ಶ್ರೀ ಶಶೀಲ್ ಜಿ.ನಮೋಶಿ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಋ) ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ257 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು 2021-22ನೇ ಶೈಕ್ಷಣಿಕ ವರ್ಷ ಪ್ರಾರಂಭಗೊಂಡ ನಂತರ ನೇಮಕಾತಿ ಮಾಡಲು ಆರ್ಥಿಕ ಇಲಾಖೆ ಅನುಮತಿಸಿರುವ ಬಗ್ಗೆ.

-ಶ್ರೀ ಹಣಮಂತ ರುದ್ರಪ್ಪ ನಿರಾಣಿ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**4. ವರದಿಯನ್ನೊಪ್ಪಿಸುವುದು**

**5. ಅಭಿನಂದನೆ**

**"ಸಭಾನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮರು ಆಯ್ಕೆ ಆಗಿರುವ ಬಗ್ಗೆ."**

-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಪುಟ್ಟಣ್ಣ
-ಶ್ರೀ ಬಿ.ಕೆ.ಹರಿಪ್ರಸಾದ್
-ಶ್ರೀ ಸಿ.ಎಂ.ಲಿಂಗಪ್ಪ
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)

**6. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಮುಂದುವರೆದ ಚರ್ಚೆ**

**"ಸರ್ಕಾರದಲ್ಲಿರುವ ಒಬ್ಬ ಹಾಲಿ ಮಂತ್ರಿ ಹಾಗೂ ಮಾಜಿ ಮಂತ್ರಿ ಇವರಿಬ್ಬರುಗಳ ವಿರುದ್ಧ ಕ್ರಿಮಿನಲ್** ಮೊಕದ್ದಮೆಯನ್ನು **ದಾಖಲಿಸಬೇಕೆನ್ನುವ ಬಗ್ಗೆ."**

-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

-ಶ್ರೀ ಬಿ.ಕೆ.ಹರಿಪ್ರಸಾದ್
-ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)
-ಶ್ರೀ ನಸೀರ್ ಅಹ್ಮದ್
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಮರಿತಿಬ್ಬೇಗೌಡ
-ಶ್ರೀ ವಿ.ಸೋಮಣ್ಣ(ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವರು)
-ಶ್ರೀ ಪಿ.ಆರ್.ರಮೇಶ್
-ಶ್ರೀ ಎನ್.ರವಿಕುಮಾರ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
-ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
-ಡಾ: ತೇಜಸ್ವಿನಿ ಗೌಡ
-ಶ್ರೀ ಎಸ್.ವಿ.ಸಂಕನೂರ
-ಶ್ರೀ ಸಿ.ಎಂ.ಇಬ್ರಾಹಿಂ
-ಶ್ರೀ ವಿ.ಸುನೀಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)
-ಶ್ರೀ ಆಯನೂರು ಮಂಜುನಾಥ್

~~~~~~~~~~~~~~~

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~~~~~~~~~

---

(1089) ಎಸ್‌ಪಿಆರ್/ಜಿಆರ್ 11:00 15/12/2021

**ಕರ್ನಾಟಕ ವಿಧಾನ ಪರಿಷತ್ತು**

***ಬುಧವಾರ, 15ನೇ ಡಿಸೆಂಬರ್ 2021***

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ
ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಬೆಳಗ್ಗೆ 11 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈಗ ಪ್ರಶ್ನೋತ್ತರಗಳು.

1. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

   **“ಸರ್ಕಾರದಲ್ಲಿರುವ ಒಬ್ಬ ಹಾಲಿ ಮಂತ್ರಿ ಹಾಗೂ ಮಾಜಿ ಮಂತ್ರಿ ಇವರಿಬ್ಬರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬೇಕೆನ್ನುವ ಬಗ್ಗೆ.**

- - - - - -

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರಕ್ಕಿಂತ ಪೂರ್ವದಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ – 59 ರಡಿ ನೀಡಿರುವ ನಿಲುವಳಿ ಸೂಚನೆಯನ್ನು ನಾನು ಈಗ ಕೇವಲ ಓದುತ್ತೇನೆ.

**ಸಭಾಪತಿಯವರು:-** ಪ್ರಶ್ನೋತ್ತರ ಕಲಾಪಗಳು ಪೂರ್ಣಗೊಳ್ಳುವವರೆಗೆ ನಾನು ಯಾವುದೇ ನಿಲುವಳಿ ಸೂಚನೆಗೆ ಅನುಮತಿಯನ್ನು ನೀಡುವುದಿಲ್ಲ. ಪ್ರಶ್ನೋತ್ತರ ಅವಧಿ ಪೂರ್ಣಗೊಂಡ ನಂತರ ನಿಮಗೆ ಅವಕಾಶ ನೀಡಲಾಗುವುದು.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವದ ವಿಚಾರವಾಗಿದೆ. ದಯಮಾಡಿ ಇದನ್ನು ಮೊದಲು ಚರ್ಚೆಗೆ ತೆಗೆದುಕೊಳ್ಳಲೇ ಬೇಕು.

**ಸಭಾಪತಿಯವರು:-** ಎಲ್ಲವೂ ಮಹತ್ವದ್ದೇ ಆಗಿದೆ. No argument,

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರದ ಒಬ್ಬ ಮಂತ್ರಿಯ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ.

**ಸಭಾಪತಿಯವರು:-** ಈಗ ಪ್ರಶ್ನೋತ್ತರ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಬಹಳ ಜರೂರಾಗಿದೆ. ಹೀಗಾಗಿ ಇದನ್ನು ಮೊದಲು ತೆಗೆದುಕೊಳ್ಳಿ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್‌ರವರೇ, ನಿಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಹೋರಾಟವನ್ನು ಮಾಡುತ್ತೇವೆ ಹಾಗೂ ಸದನದ ಬಾವಿಯೊಳಗೆ ಇಳಿಯುತ್ತೇವೆ. ಇದು ಬಹಳ ಮಹತ್ವ ಇದೆ.

**ಸಭಾಪತಿಯವರು:-** ಆಯಿತು; ಎಲ್ಲರೂ ಸದನದ ಬಾವಿಗೆ ಇಳಿಯಿರಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವದ ವಿಚಾರವಾಗಿದೆ.

**(ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಈ ಹಂತದಲ್ಲಿ ಸದನದ ಬಾವಿಗೆ ಧರಣಿಗೆ ಬಂದರು)**

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿ ಪೂರ್ಣಗೊಂಡ ನಂತರ ಅವರುಗಳು ಚರ್ಚೆಯನ್ನು ಮಾಡಲಿ.

**ಸಭಾಪತಿಯವರು:-** ನಾವು ಸದನದ ಕಲಾಪಗಳನ್ನು ನಿಯಮಗಳ ಪ್ರಕಾರ ನಡೆಸಬೇಕು ವಿನಃ ಅವುಗಳನ್ನು ಬಿಟ್ಟು ನಾನು ಸದನದ ಕಲಾಪಗಳನ್ನು ನಡೆಸುವುದಿಲ್ಲ.

**(ಸದನದ ಬಾವಿಯಲ್ಲಿ ಕೆಲವು ಸದಸ್ಯರುಗಳು ಮಾತನಾಡುತ್ತಿದ್ದರು)**

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯ ನಂತರ ಅದನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಈ ಹಂತದಲ್ಲಿ ಯಾರೇ ಸದಸ್ಯರು ಮಾತನಾಡಿದರು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದಂತೆ ಯಾವುದೇ ಚರ್ಚೆಯನ್ನು ನಡೆವಳಿಗಳಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯನ್ನು ಪ್ರಸ್ತಾಪಿಸುವುದಕ್ಕೆ........ ಇದು ಮೊದಲಿನಿಂದಲೂ ಬಂದ ಸತ್ಸಂಪ್ರದಾಯವಾಗಿದೆ. ಇದರ ಬಗ್ಗೆ ಮೊನ್ನೆಯ ದಿನವೂ ಸಹ ತಾವು ಹೇಳಿದ್ದೀರಿ. ಹೀಗಾಗಿ ತಮ್ಮ ಮನಸ್ಸನ್ನು ನೋಯಿಸುವುದು

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಬೇಡವೆಂದು ನಾನು ಪ್ರಶ್ನೋತ್ತರ ಅವಧಿ ಆದ ಮೇಲೆ ಎಂದು ಸುಮ್ಮನಾದೆ. ಆದರೆ ಇದನ್ನು ಪ್ರಸ್ತಾಪಿಸುವುದಕ್ಕೆ ಅವಕಾಶವನ್ನು ಕೇಳುತ್ತಿದ್ದೇನೆ. I am seeking your permission to submit whether it is tenable or not. It is not for taking up this matter for a detailed discussion.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ನಿಮಗೆ ತಿಳಿದಿದೆ. ಯಾವುದೇ ಒಂದು ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕಾದರೆ ಅಥವಾ ಅದರ ಬಗ್ಗೆ ಮಾತನಾಡಬೇಕಾದರೆ, ಪ್ರಶ್ನೋತ್ತರ ವೇಳೆ ಮುಗಿದ ನಂತರ ಅವಕಾಶ ನೀಡಲಾಗುವುದು ಎಂದು ನಾನು ಹೇಳಿದ್ದೇನೆ. ಹೀಗಾಗಿ ನಾನು ನಂತರದಲ್ಲಿ ಅವಕಾಶವನ್ನು ನೀಡುತ್ತೇನೆ. ಒಂದು ವೇಳೆ ನಾನು ಅವಕಾಶವನ್ನು ನೀಡದಿದ್ದರೆ, ಆಗ ನೀವು ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪುಸ್ತಕವನ್ನು ತಾವು ನೋಡಿ.

**ಸಭಾಪತಿಯವರು:-** ಯಾವ ನಿಯಮವೆಂದು ನೀವೇ ತಿಳಿಸಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರದ ನಂತರ ನಿಲುವಳಿ ಸೂಚನೆ ಆದರೆ, ಇದು ಬಹಳ ಮಹತ್ವದ ವಿಚಾರವಾಗಿದೆ. ಹೀಗಾಗಿ ಸದನದ ಎಲ್ಲಾ ಕಾರ್ಯಕಲಾಪಗಳನ್ನು ಬದಿಗಿಟ್ಟು ನಿಲುವಳಿ ಸೂಚನೆಗೆ ಆದ್ಯತೆಯನ್ನು ನೀಡಿ, ಇದರ ಬಗ್ಗೆ ಚರ್ಚೆಯನ್ನು ಕೈಗೆತ್ತಿಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ – 59 ರಚನೆಯಾಗಿದೆ. ನಾವು ಪ್ರಸ್ತಾವನೆಯನ್ನು ಸಲ್ಲಿಸುವುದಕ್ಕೆ ತಾವು ಅವಕಾಶ ನೀಡದಿದ್ದರೆ ಹೇಗೆ?

**ಸಭಾಪತಿಯವರು:-** ನಾನು ನಿಮಗೆ ಅವಕಾಶವನ್ನು ನೀಡುವುದಾಗಿ ಹೇಳುತ್ತಿದ್ದೇನೆ; ಅವಕಾಶ ನೀಡುವುದಿಲ್ಲವೆಂದಾದರೆ, ಅದು ಬೇರೆಯ ವಿಚಾರ. ಪ್ರಶ್ನೋತ್ತರ ಅವಧಿ ಪೂರ್ಣಗೊಂಡ ನಂತರ ಚರ್ಚೆಗೆ ಅವಕಾಶ ನೀಡುವ ಒಂದು ಪದ್ಧತಿಯಿದೆ. ಸದನದ ಕಲಾಪಗಳನ್ನು ನಡೆಸಲು ಪದ್ಧತಿಗಳಿವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನೀವು ರಾಜ್ಯದಲ್ಲಿ ಮಾತ್ರವಲ್ಲದೇ ದೇಶದಲ್ಲಿಯೇ ಅತ್ಯಂತ ಹಿರಿಯ ಸದಸ್ಯರಾಗಿದ್ದೀರಿ; ಸುದೀರ್ಘ ಕಾಲ ಮೇಲ್ಮನೆಯ ಸದಸ್ಯರಾಗಿ ಕರ್ತವ್ಯವನ್ನು ನಿರ್ವಹಿಸಿದ್ದೀರಿ. ಅದರ ಬಗ್ಗೆ ನಮಗೆ ಯಾವುದೇ ತಕರಾರಿಲ್ಲ. There is no dispute about it. ನಿಮ್ಮ ಬಗ್ಗೆ ಅಪಾರವಾದ ಗೌರವವಿದೆ. ಅದರಲ್ಲೂ ಹೆಚ್ಚಾಗಿ ಪೀಠದ ಬಗ್ಗೆ ನನಗೆ ಹೆಚ್ಚು ಗೌರವವಿದೆ. ನಿಲುವಳಿ ಸೂಚನೆಗಳನ್ನು ಮಂಡಿಸುವ ಅನೇಕ ಸಂದರ್ಭಗಳಲ್ಲಿ ಅದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಪ್ರಸ್ತಾವನೆಯನ್ನು ಸಲ್ಲಿಸಿ, 2, 3, 5, 10 ನಿಮಿಷಗಳ ಕಾಲ ಮಾತನಾಡಲು ಬಹಳಷ್ಟು ಸಭಾಪತಿಗಳು ಅವಕಾಶ ನೀಡಿರುವುದು ನನ್ನ ಗಮನಕ್ಕೆ ಬಂದಿದೆ. ಆದರೆ, ಪ್ರಶ್ನೋತ್ತರ ಅವಧಿ ಮುಗಿದ ನಂತರ ನಿಲುವಳಿ ಸೂಚನೆಯನ್ನು ಮಂಡಿಸಬೇಕೆಂಬುದು ನಮ್ಮ ನಿಯಮಗಳಲ್ಲಿ ಎಲ್ಲಿಯೂ ತಿಳಿಸಿಲ್ಲ.

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ – 63 ನ್ನು ಓದಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಮನವಿಯೊಂದನ್ನು ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಎಲ್ಲಕ್ಕಿಂತ ಬಹಳ ಮಹತ್ವದ ವಿಚಾರವಾಗಿದೆ. ಸರ್ಕಾರದಲ್ಲಿರುವ ಹಾಲಿ ಒಬ್ಬ ಮಂತ್ರಿ ಹಾಗೂ ಮಾಜಿ ಮಂತ್ರಿ ಇವರಿಬ್ಬರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸುವಂತೆ ಇವತ್ತಿನ ದಿವಸ ನ್ಯಾಯಾಲಯವು ಆದೇಶವನ್ನು ಹೊರಡಿಸಿದೆ.

(ಮುಂದು)

(1090) 11.10 15-12-2021 CS/GR

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು):-**

IPC Sections 120B, 420, 427, 455, 467….

**ಸಭಾಪತಿಯವರು:-** ಯಾವುದೂ ಕಡತಕ್ಕೆ ಹೋಗಬಾರದು

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಮಾನ್ಯ ಸದಸ್ಯರಾದ ಎಂ.ನಾರಾಯಣ ಸ್ವಾಮಿಯವರು ಮಾತನಾಡಿದ್ದು ಕಡತಕ್ಕೆ ಹೋಗಬಾರದೆಂದು ಆದೇಶಿಸಿದ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಮಾತನಾಡಿದ ಮುಂದಿನ ಭಾಗವನ್ನು ದಾಖಲಿಸಿರುವುದಿಲ್ಲ.)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ನಾನು ಹೇಳುವುದನ್ನು ನೀವು ಕೇಳುವುದಾದರೆ ಹೇಳುತ್ತೇನೆ. ಸದನದಲ್ಲಿ ಯಾವ ವಿಚಾರವನ್ನು ಚರ್ಚೆ ಮಾಡಲು ನಾನು ಅವಕಾಶವನ್ನು ನೀಡುತ್ತೇನೆ, ಆ ವಿಷಯದ ಬಗ್ಗೆ ತಾವು ಮಾತನಾಡಬೇಕು. ನಾನು ಈ ವಿಚಾರಕ್ಕೆ ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ಸಮಯವನ್ನು ನಿಗದಿ ಮಾಡುತ್ತೇನೆ. ನಿಯಮ 63ನ್ನು ತಾವು ಓದಿ. ನಿಯಮ 63ರ ಪ್ರಕಾರ ಪ್ರಶ್ನೋತ್ತರ ಮತ್ತು ಶೂನ್ಯವೇಳೆ ಮುಗಿದ ನಂತರ ಅವಕಾಶ ನೀಡಬೇಕೆಂದಿದೆ. ಆ ಪ್ರಕಾರ ಪ್ರಶ್ನೋತ್ತರ ಅವಧಿ ಮುಗಿದ ನಂತರ ತಮಗೆಲ್ಲರಿಗೂ ನಿಲುವಳಿ ಸೂಚನೆಯ ಪೂರ್ವಬಾವಿ ಚರ್ಚೆಗೆ ಅನುಮತಿಯನ್ನು ನೀಡಲಾಗುವುದು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಗಳೇ, ಈ ಹಿಂದೆ ಅನೇಕ ಸಂದರ್ಭಗಳಲ್ಲಿ ಅವಕಾಶ ಮಾಡಿದ್ದು ಇದೆ.

**ಸಭಾಪತಿಯವರು:-** ಹಿಂದೆ ಅನುಮತಿ ನೀಡಿದ್ದು ಇದೆ, ನೀಡದಿರುವುದೂ ಸಹ ಇದೆ, it depends upon the Chair.

**ಶ್ರೀ ಎಂ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಗಳೇ, ನೀವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಸರ್ಕಾರವೇ ಇಂತಹದ್ದರಲ್ಲಿ ಶಾಮೀಲಾಗಿ ಒಂದು ಕೋರ್ಟ್ ಸಚಿವರ ಮೇಲೆ ಐ.ಪಿ.ಸಿ. ಸೆಕ್ಷನ್ ಅಡಿ ಕೇಸ್ ಬುಕ್ ಮಾಡಬೇಕೆಂದು ಹೇಳಿದೆ. ಇವತ್ತು ಆ ಮಂತ್ರಿಯಲ್ಲ, ಸರ್ಕಾರವೇ ರಾಜಿನಾಮೆಯನ್ನು ನೀಡಬೇಕು. ಇಂತಹ ಪ್ರಾಡ್ ಕೇಸ್‌ನಲ್ಲಿ ಒಬ್ಬ ಸಚಿವರೆ ಶಾಮೀಲಾಗಿದ್ದಾರೆ. ಅವರ ಮೇಲೆ ಇಂತಹ ಐ.ಪಿ.ಸಿ., ಸೆಕ್ಷನ್ ಪ್ರಕಾರ FIR ಬುಕ್ ಮಾಡಬೇಕೆಂದು ಸಮನ್ಸ್ ಕೊಡಬೇಕೆಂದು ನ್ಯಾಯಾಲಯವೇ ಹೇಳಿದೆ. ಅವರು ಒಂದು ನಿಮಿಷ ಕೂಡ ಮಂತ್ರಿ ಆಗಿರುವುದಕ್ಕೆ ನಾಲಾಯಕ್ ಆಗಿದ್ದಾರೆ.

**ಶ್ರೀ ಆರ್.ಅಶೋಕ್**:-ದಯಮಾಡಿ ಇದೆಲ್ಲ ಸದನದ ಕಲಾಪಕ್ಕೆ ಹೋಗಬಾರದು. ಹೈಕೋರ್ಟಿನಲ್ಲಿ ಕೇಸಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಮಗೆ ಪ್ರಸ್ತಾವನೆಗೆ 5 ನಿಮಿಷಗಳ ಸಮಯ ನೀಡಿದ್ದರೆ ಇಷ್ಟರಲ್ಲಿ ನಮ್ಮ ಚರ್ಚೆಯೇ ಮುಗಿಯುತ್ತಿತ್ತು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಗಳೇ, ನಾವು ಅಲ್ಲಿದ್ದಾಗ ನೀವು ಏನು ಮಾಡುತ್ತಿದ್ದೀರಿ? ತಾವು ಆ ಕುರ್ಚಿಯಲ್ಲಿ ಕುಳಿತುಕೊಂಡು ನಿಲುವುಗಳು ಬದಲಾಗಬಾರದು.

---

**ಸಭಾಪತಿಯವರು:-** ನಾನೇನು ಮಾಡಿದ್ದೇನೆ, ನಿಮ್ಮ ಹಾಗೆ ನಾನೇನು ಮಾಡಿಲ್ಲ. ಸುಮ್ಮನೆ ಇರಿ. ಏನೇನೋ ಮಾತನಾಡಬೇಡಿ. ನಡವಳಿಯನ್ನು ತೆಗೆಸಿ ನೋಡಿ. ನನ್ನ ಬಗ್ಗೆ ನೀವು ಏನನ್ನು ಹೇಳಬೇಡಿ. ಅದು ನಿಮಗೆ ಅನ್ವಯ ಆಗುತ್ತದೆ, ನನಗಲ್ಲ, ಸುಮ್ಮನೆ ಕುಳಿತುಕೊಳ್ಳಿ, ಏನೋನೋ ಮಾತನಾಡಬೇಡಿ.

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಗಳೇ, ಪೀಠದ ವಿರುದ್ಧ ಮಾತನಾಡಬಾರದು.

(ಗೊಂದಲ)

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಗಳೇ, ಈ ವಿಷಯವು ನ್ಯಾಯಾಲಯದ ಮುಂದೆ ಇರುವುದರಿಂದ ಇದರ ಬಗ್ಗೆ ನಾವು ಸದನದಲ್ಲಿ ಚರ್ಚೆ ಮಾಡಬಾರದು.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮುಗಿದ ಕ್ಷಣದಲ್ಲಿಯೇ ನಾನು ಚರ್ಚೆಗೆ ಅವಕಾಶವನ್ನು ನೀಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ನಮ್ಮ ಪಕ್ಷದ ಸದಸ್ಯರೆಲ್ಲರೂ ಬಾವಿಯಲ್ಲಿದ್ದಾರೆ. ಮಾನ್ಯ ಸಭಾಪತಿಯವರು, ನಮಗೆ ಪ್ರಸ್ತಾವನೆಗೆ 5 ನಿಮಿಷಗಳ ಸಮಯ ನೀಡಿದ್ದರೆ ಸದನದ ಸಮಯ ವ್ಯರ್ಥ ಆಗುತ್ತಿರಲಿಲ್ಲ.

(ಗೊಂದಲ)

**ಡಾ||ವೈ.ಎ.ನಾರಾಯಣಸ್ವಾಮಿ**:- ಪೀಠದ ಮೇಲೆ ಆರೋಪ ಮಾಡುವುದು ಸರಿಯಲ್ಲ.

**ಶ್ರೀ ಎಂ.ನಾರಾಯಣ ಸ್ವಾಮಿ:-** ಫ್ರಾಡ್ ಮಾಡಿ ಸಿಕ್ಕಿ ಹಾಕಿಕೊಂಡಿದ್ದಾರೆ. ಒಬ್ಬ ಮಾಜಿ ಮಂತ್ರಿ, ಒಬ್ಬ ಹಾಲಿ ಮಂತ್ರಿ ಇನ್ವಾಲ್ ಆಗಿದ್ದಾರೆ. ಕೋರ್ಟ್‌ನಲ್ಲಿ ಆರ್ಡರ್ ಆಗಿದೆ.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮುಗಿಯುವ ತನಕ ನಾನು ಈ ವಿಚಾರದ ಬಗ್ಗೆ ಚರ್ಚೆಗೆ ಅವಕಾಶ ನೀಡುವುದಿಲ್ಲ. You should respect the Chair. Nothing doing. ನೀವು ನನ್ನ ಮಾತನ್ನು ಕೇಳದಿದ್ದರೆ ನಾನು ಏನೂ ಮಾಡಲು ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎಸ್. ಆರ್. ಪಾಟೀಲ್:-** ಈ ವಿಚಾರದ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡುವುದು ಬಿಡುವುದು ಪೀಠಕ್ಕೆ ಬಿಟ್ಟ ವಿಚಾರ. ಒಂದು 5 ನಿಮಿಷಗಳ ಸಮಯ ನೀಡಿದ್ದರೆ ಇಷ್ಟು ಹೊತ್ತಿಗೆ ಈ ವಿಚಾರ ಮುಗಿಯುತ್ತಿತ್ತು.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮುಗಿಯುವ ತನಕ ನಾನು ಅವಕಾಶ ನೀಡುವುದಿಲ್ಲ. ಪ್ರಶ್ನೋತ್ತರ ಮುಗಿದ ಕ್ಷಣದಲ್ಲಿಯೇ ನಾನು ಈ ವಿಚಾರದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೇ, ಕೋರ್ಟ್ ಕ್ಲಿಯರ್ ಆಗಿ "Register a criminal case, issue summons to Accused No.1 to 5 ಎಂದು ಹೇಳಿದೆ. Accused No.3 and 4 are the Minister and ex-Minister.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರೆಲ್ಲರೂ ಬಾವಿಯಲ್ಲಿದ್ದಾರೆ. House is not in order.

**ಸಭಾಪತಿಯವರು:-** ನನ್ನ ಮಾತನ್ನು ಕೇಳದಿದ್ದರೆ ಏನು ಮಾಡುವುದಕ್ಕೆ ಆಗುವುದಿಲ್ಲ. ಪ್ರಶ್ನೋತ್ತರ ಮುಗಿದ ಒಂದು ನಿಮಿಷದಲ್ಲಿಯೇ ನಾನು ಈ ವಿಚಾರದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಅಲ್ಲಿಯವರೆಗೆ ನಾನು ಚರ್ಚೆಗೆ ಅವಕಾಶ ಕೊಡುವುದಿಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಗಳೇ, ಇದು ಬಹಳ ಜರೂರಾದ ವಿಚಾರ. ಸರ್ಕಾರ ಜವಾಬ್ದಾರಿ ಹೊತ್ತುಕೊಂಡು ರಾಜಿನಾಮೆಯನ್ನು ಕೊಡಬೇಕಾಗಿದೆ.

**ಸಭಾಪತಿಯವರು**:- ನೀವು ಸದನಕ್ಕೆ ಗೌರವ ಕೊಡದಿದ್ದರೆ ಹೇಗೆ?

**ಶ್ರೀ ಎಂ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, this is the priority for us.

**ಶ್ರೀ ವಿ.ಸೋಮಣ್ಣ:-** ನಾರಾಯಣಸ್ವಾಮಿಯವರೆ, ನೀವು ಈ ಸಲ ಚುನಾವಣೆಗೆ ನಿಲ್ಲಬೇಕಾಗಿತ್ತು. ಇದನ್ನೆಲ್ಲ ಹೇಳುವುದಕ್ಕೆ ಇನ್ನೂ 6 ವರ್ಷ ಸಮಯ ಸಿಗುತ್ತಿತ್ತು.

**ಶ್ರೀ ಎಂ.ನಾರಾಯಣಸ್ವಾಮಿ**:- ನಾನು ವಿಧಾನಸಭೆ ಚುನಾವಣೆಗೆ ನಿಲ್ಲಬೇಕೆಂದು ಈ ಚುನಾವಣೆಗೆ ನಿಲ್ಲಲಿಲ್ಲ. ನಿಂತಿದ್ದರೆ ಸಾವಿರಾರು ಮತಗಳಿಂದ ಗೆದ್ದು ಬರುತ್ತಿದ್ದೆನು. ವಿಧಾನ ಪರಿಷತ್ತಿನ ಚುನಾವಣೆಗೆ ಹೆದರಿಕೊಂಡು ನಿಂತಿಲ್ಲ ಎಂದು ತಿಳಿದುಕೊಳ್ಳಬೇಡಿ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಗಳೇ, ನಮಗೆ ಏನು ಬೇಸರ ಎಂದರೆ ಸಭಾನಾಯಕರು ಇಲ್ಲ, ಚೀಫ್ ವಿಪ್ ಇಲ್ಲ, ಕಾಂಗ್ರೆಸ್ಸಿನವರು ಇಬ್ಬರಿಗೂ ಕೈ ಕೊಟ್ಟಿದ್ದಾರೆ. ಇಬ್ಬರೂ ಟ್ಯಾಲೆಂಟೆಡ್.

**ಶ್ರೀ ಎಸ್.ಆರ್.ಪಾಟೀಲ್:-** ಇಲ್ಲಿ ವಿಷಯಾಂತರವಾಗುತ್ತಿದೆ.

(ಗೊಂದಲ)

**ಸಭಾಪತಿಯವರು:-** ಅಶೋಕ್‌ರವರೆ, ಇಲ್ಲಿ ಚುನಾವಣೆಯ ವಿಚಾರ ಬೇಡ. ನೀವು ವಿಷಯಕ್ಕೆ ಬನ್ನಿ. ಪ್ರಶ್ನೋತ್ತರ ಆದ ಮೇಲೆ ಈ ವಿಚಾರ ಪ್ರಸ್ತಾಪಿಸಲಿಕ್ಕೆ ನಾನು ಅನುಮತಿಯನ್ನು ನೀಡುತ್ತೇನೆ.

(ಗೊಂದಲ)

**ಡಾ||ತೇಜಸ್ವಿನಿ ಗೌಡ:-** ವಿಚಾರಾಣಾಧೀನ ವಿಷಯವನ್ನು ಪೀಠದ ಅನುಮತಿ ಇಲ್ಲದೆ ಇಲ್ಲಿ ಚರ್ಚಿಸುವಂತಿಲ್ಲ.

**ಶ್ರೀ ಎಂ.ನಾರಾಯಣ ಸ್ವಾಮಿ:-** ನನ್ನ ಮುಂದಿನ ಸ್ಪರ್ಧೆ ಪದ್ಮನಾಭನಗರದಲ್ಲೆ, ಅಶೋಕ್‌ರವರ ವಿರುದ್ಧ ಸ್ಪರ್ಧೆ ಮಾಡುತ್ತೇನೆ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೆ, ಇದು ಸರಿಯಲ್ಲ, ಸದನವನ್ನು ಧರ್ಮಶಾಲಾ ಮಾಡಿದ್ದೀರಾ? ನಾನು ಯಾರಿಗೆ ಅನುಮತಿ ನೀಡುತ್ತೇನೆ, ಅವರು ಮಾತ್ರ ಮಾತನಾಡಬೇಕು. ಸುಮ್ಮ ಸುಮ್ಮನೆ ಎಲ್ಲರೂ ಎದ್ದು ಮಾತನಾಡಿದರೆ ಅದು ಕಡತಕ್ಕೆ ಹೋಗುವುದಿಲ್ಲ. ಮರಿತಿಬ್ಬೇಗೌಡರೆ ಮಾತನಾಡಿ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎಂ.ನಾರಾಯಣ ಸ್ವಾಮಿಯವರು ಮಾತನಾಡಿದ್ದು ಕಡತಕ್ಕೆ ಹೋಗಬಾರದೆಂದು ಆದೇಶಿಸಿದ ಹಿನ್ನೆಲೆಯಲ್ಲಿ ಸದರಿ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ವಿಚಾರದ ಮೇಲೆ ಚರ್ಚೆ ಮಾಡಲು ಪ್ರಶ್ನೋತ್ತರ ಅವಧಿ ಮುಗಿದ ನಂತರ ಅವಕಾಶ ಮಾಡಿಕೊಡುವುದಾಗಿ ಹೇಳಿದ್ದೀರಿ. ದಯಮಾಡಿ ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರೆಲ್ಲರೂ ಗಮನಿಸಬೇಕು, ತಾವು ಗಂಭೀರವಾದ ವಿಚಾರವನ್ನು ಪ್ರಸ್ತಾಪಿಸಿದ್ದೀರಿ. ಅದು ಬಹಳ ಪ್ರಮುಖವಾದ ವಿಚಾರ ಆಗಿರುವ ಕಾರಣ ನಾವು ಕೂಡ ಆ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಚರ್ಚೆಯಲ್ಲಿ ಭಾಗವಹಿಸಬೇಕು. ಆದರೂ ಸಹ ಪೀಠದ ನಿರ್ದೇಶನದಂತೆ ಪ್ರಶ್ನೋತ್ತರ ಅವಧಿಯ ನಂತರ ನಮಗೆ ಅವಕಾಶ ದೊರೆಯುತ್ತದೆ. ಆದ್ದರಿಂದ ಈ ಸದನ ಸೂಸೂತ್ರವಾಗಿ ನಡೆಯಲು ಅವಕಾಶ ಮಾಡಿಕೊಡಬೇಕೆಂದು ನನ್ನೆಲ್ಲ ವಿರೋಧ ಪಕ್ಷದ ಮಿತ್ರರಿಗೆ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸುವ ವಿಚಾರ ಈಗಾಗಲೇ ನ್ಯಾಯಾಲಯದ ಮುಂದಿದೆ.

**ಸಭಾಪತಿಯವರು:-** ಈಗ ಆ ವಿಚಾರದ ಪ್ರಸ್ತಾಪ ಬೇಡ. ಪ್ರಶ್ನೋತ್ತರ ಅವಧಿ ಮುಗಿದ ನಂತರ ಚರ್ಚೆಗೆ ಅವಕಾಶ ನೀಡುತ್ತೇನೆ. ಈಗ ದಯಮಾಡಿ ಬಾವಿಯಲ್ಲಿರುವ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು. ನಾರಾಯಣಸ್ವಾಮಿ, ಹೀಗೆ ಹಠ ಮಾಡಬಾರದು. ನಾನು ಅವಕಾಶ ನೀಡುತ್ತೇನೆ, ಖಂಡಿತವಾಗಿ ಎಲ್ಲರಿಗೂ ಈ ವಿಚಾರದ ಬಗ್ಗೆ ಚರ್ಚೆ ಮಾಡಲು ಅವಕಾಶ ನೀಡಲಾಗುವುದು. ನಾರಾಯಣಸ್ವಾಮಿಯವರೆ, ಖಂಡಿತ ನಾನು ಅವಕಾಶ ನೀಡುತ್ತೇನೆ.

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್ ಯವರ ಪ್ರಶ್ನೆಯನ್ನು ಕೊನೆಗೆ ತೆಗೆದುಕೊಳ್ಳುತ್ತೇನೆ. ನನ್ನ ಅನುಮತಿ ಪಡೆದು ಅವರು ಕೆಳಮನೆಗೆ ಹೋಗಿದ್ದಾರೆ.

(ಮುಂದು)

(1091)/11-20/15-12 -2021/ಎಲ್ಎಂ/ಎಂಡಿ

**ಪ್ರಶ್ನೆ ಸಂಖ್ಯೆ: 315**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಗೈರು ಹಾಜರಾಗಿದ್ದರು**)

**ಪ್ರಶ್ನೆ ಸಂಖ್ಯೆ: 348**

**(ಉತ್ತರವನ್ನು ಲಗತ್ತಿಸಲಾಗಿದೆ**)

**ಶ್ರೀ ಮರಿತಿಬ್ಬೇಗೌಡ**:- ಮಾನ್ಯ ಸಭಾಪತಿಗಳೆ, ಉತ್ತರವನ್ನು ಒದಗಿಸಿದ್ದಾರೆ. ಸರ್ಕಾರಿ ಗೋಮಾಳ ಮಂಜೂರಾತಿದಾರರಿಗೆ ಏಕವ್ಯಕ್ತಿ ಕೋರಿಕೆ ಮೇಲೆ ದುರಸ್ತಿ ಮಾಡುವ ವಿಚಾರದಲ್ಲಿ ಸರ್ಕಾರ ಅನೇಕ ಸುಧಾರಣೆಗಳನ್ನು ತಂದಿದೆ. ಇದಕ್ಕಾಗಿ ಸರ್ಕಾರಕ್ಕೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಆದರೂ ಸಹಿತ ಪೋಡಿ ಮುಕ್ತ ರಾಜ್ಯವನ್ನಾಗಿ ಮಾಡುವ ವಿಚಾರದಲ್ಲಿ ಸರ್ಕಾರ ಸರ್ಕಾರಿ ಜಮೀನು ಮಂಜೂರಾತಿಯಾದಾಗ ಪೋಡಿ ಮುಕ್ತವಾಗಿ ಮಾಡಲು ಆಗುತ್ತಿಲ್ಲ. ಇದು ಬಹಳ ಕಷ್ಟದ ಕೆಲಸವಾಗಿದೆ. ಇಂತಹ ೩೩೩೧ ಪ್ರಕರಣಗಳು ಬಾಕಿ ಇವೆ ಎಂದು ಸರ್ಕಾರ ಉತ್ತರ ಕೊಟ್ಟಿದೆ. ಪೋಡಿ ಮುಕ್ತ ಸರಳೀಕರಣ ಮಾಡಲು ತಾವು ಪ್ರಯತ್ನಪಟ್ಟರು Village Accountant, Revenue Inspector, Deputy Tahsildar, Tahsildar, ADLR (Assistant Director of Land Records), Assistant Commissioner, DDLR (Deputy Director of Land Records) ನಂತರ DC (Deputy Commissioner) ಇವರೆಲ್ಲರಿಂದ ಮಂಜೂರಾತಿ ಆದ ಮೇಲೆ ಅವರು form no. 1 to 5 ಭರ್ತಿ ಮಾಡಿ ಕೊಟ್ಟಮೇಲೆ ಅಂತಿಮವಾಗಿ DC ಗೆ ಪೋಡಿ ಪ್ರಕರಣ ಮಾಡಲು ಹೋಗುವುದು. ಇದರಿಂದ ತುಂಬಾ ವಿಳಂಬವಾಗುತ್ತಿದೆ. ಇದು ಸಲ್ಲಿಸಾಗಿ ಆಗುತ್ತಿಲ್ಲ. ಇದರಲ್ಲಿ ಭಾರಿ ಭ್ರಷ್ಟಾಚಾರವಾಗುತ್ತಿದೆ. ಆದ್ದರಿಂದ ಇದನ್ನು ಆನ್‌ಲೈನ್ ವ್ಯಾಪ್ತಿಗೆ ಅಥವಾ ಸಕಾಲ ವ್ಯಾಪ್ತಿಗೆ ತರಲು ಸಾಧ್ಯವೇ? ಇದನ್ನು ಮಾಡಿದರೆ

"ತಿದ್ದುಪಡಿಯಾಗದ ಪ್ರತಿ-Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಿ ಜಮೀನು ಮಂಜೂರಾತಿಯಾದರೂ ಕೂಡಾ ಪೋಡಿ ಮುಕ್ತ ಮಾಡಲು ಸಾಧ್ಯವಾಗುತ್ತದೆ. ಇದರಲ್ಲಿ ಈಗಾಗಲೇ ಸಾಕಷ್ಟು ಸುಧಾರಣೆಗಳನ್ನು ತಂದಿದ್ದೀರಿ. ಇದರ ಜೊತೆಗೆ ಆನ್‌ಲೈನ್ ವ್ಯಾಪ್ತಿಗೆ ಇದನ್ನು ತರಲು ಪ್ರಯತ್ನ ಮಾಡುತ್ತೀರಾ ಎನ್ನುವುದು ನನ್ನ ಮೊದಲನೆಯ ಪ್ರಶ್ನೆ. ಇನ್ನು ನನ್ನ ಎರಡನೇ ಪ್ರಶ್ನೆ ಎಂದರೆ, ಆರ್.ಆರ್.ಟಿ ವಿಭಾಗದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ, ಇಲ್ಲಿ ೫,೬೬,೯೨೧ ಅರ್ಜಿಗಳು ಪೆಂಡಿಂಗ್ ಇವೆ ಎಂದು ಉತ್ತರದಲ್ಲಿ ಇದೆ. ಇದರಲ್ಲಿ ವ್ಯಾಜ್ಯಗಳು ಬಹಳ ಇದೆ ಮತ್ತು ಇಲ್ಲಿ ತುಂಬಾ ಶೋಷಣೆ ನಡೆಯುತ್ತಿದೆ. ಆದರೆ ಶೋಷಣೆ ನಡೆಯುತ್ತಿರುವ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ ಎಂದು ಹೇಳಿದ್ದಾರೆ. ಇದುವರೆಗೆ ಅಧಿಕಾರಿಗಳಿಂದ ಶೋಷಣೆ ನಡೆಯುತ್ತಿದೆ, ಅವರಿಗೆ ಲಂಚ ಕೊಟ್ಟಿದ್ದೇವೆ ಎಂದು ಯಾರಾದರೂ ದೂರು ಕೊಡುತ್ತಾರೆಯೇ? ಇದು ಮಂತ್ರಿಗಳಿಗೆ ಗೊತ್ತಿರುವ ವಿಚಾರ. ಆದರೆ ಇದು ರೈತರ ಮೇಲೆ ಬಹಿರಂಗವಾಗಿ ವ್ಯಾಪಕವಾಗಿ ರೈತರ ಮೇಲೆ ನಡೆಯುತ್ತಿರುವಂತಹ ಶೋಷಣೆಯಾಗಿದೆ. ೫,೬೬,೯೨೧ ಅರ್ಜಿಗಳಲ್ಲಿ ಸಾಕಷ್ಟು ಅರ್ಜಿಗಳನ್ನು ಕಂದಾಯ ಅದಾಲತ್‌ನಲ್ಲಿ ಇತ್ಯರ್ಥಗೊಳಿಸಿದ್ದೀರಿ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನು ೧,೬೫,೬೪೫ ಅರ್ಜಿಗಳು ಬಾಕಿ ಇವೆ. ಪೋಡಿ ಮುಕ್ತ ವಿಚಾರವನ್ನು ಆನ್‌ಲೈನ್ ಅಥವಾ ಸಕಾಲ ವ್ಯಾಪ್ತಿಗೆ ತಂದರೆ ರೈತರಿಗೆ ಇನ್ನು ಹೆಚ್ಚಿನ ಅನುಕೂಲವಾಗುತ್ತದೆ. ಇಲ್ಲಿ ನಡೆಯುತ್ತಿರುವ ಶೋಷಣೆಯನ್ನು ತಪ್ಪಿಸಲು ಸರ್ಕಾರ ಏನಾದರೂ ಚಿಂತಿಸುತ್ತದೆಯೇ ಎನ್ನುವುದನ್ನು ಸರ್ಕಾರವನ್ನು ಕೇಳಬಯಸುತ್ತೇನೆ. ಇದರಿಂದ ಇಂದು ರೈತ ಸಮುದಾಯ ಬಹಳಷ್ಟು ತೊಂದರೆಗೆ ಇಡಾಗಿದೆ. ದುರಸ್ತಿ ಮತ್ತು ಆರ್‌ಆರ್‌ಟಿ ವಿಭಾಗದಲ್ಲಿ ಬಾಕಿ ಇರುವ ಪ್ರಕರಣಗಳ ಬಗ್ಗೆ ಗಮನ ಕೊಡಬೇಕು. ಈಗಾಗಲೇ ಸರಳೀಕರಣ ಮಾಡಿದ್ದೀರಿ. ಆನ್‌ಲೈನ್ ಮಾಡಿಬಿಟ್ಟರೆ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದ ಹಾಗೆ ಆಗುತ್ತದೆ ಮತ್ತು ರೈತರಿಗೆ ತ್ವರಿತವಾಗಿ ಎಲ್ಲ ದಾಖಲೆಗಳು ಸಿಗುತ್ತವೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದಯೇ ಎನ್ನುವುದನ್ನು ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಬಯಸುತ್ತೇನೆ.

**ಶ್ರೀ ಆರ್.ಅಶೋಕ್**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ಸರ್ಕಾರಿ ಗೋಮಾಳ ಸರ್ವೇ ವಿಷಯವಾಗಿ ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದಾರೆ. ಇದರ ಬಗ್ಗೆ ಯೋಚನೆ ಮಾಡಿ ಬಹಳಷ್ಟು ಸುಧಾರಣೆಗಳನ್ನು ತರುವಂತಹ ಕೆಲಸವನ್ನು ಮಾಡಿದ್ದೇನೆ. ಇಲ್ಲಿ ಬರುವ ಸಮಸ್ಯೆ ಎಂದರೆ, ಯಾರಿಗೆ ಮಂಜೂರಾತಿ ಮಾಡಿರುತ್ತಾರೆ ಆ ಪಹಳೆಯಲ್ಲಿ ಕೆರೆ-ಕಟ್ಟೆ, ಆಶ್ರಯ ಕಾಲೋನಿ ಇರುತ್ತದೆ. ಪಹಣೆಯಲ್ಲಿ entry ಮಾಡುವಾಗ ಆರ್‌ಆರ್‌ಟಿ ಯ entry ಇರುವುದಿಲ್ಲ. ಅಧಿಕಾರಿಗಳು ಮಂಜೂರು ಮಾಡಿಬಿಡುತ್ತಾರೆ. ಅದರಲ್ಲಿಯು ೨೦೦ ಎಕರೆ ಇದ್ದರೆ ೪೦೦ ಎಕರೆ ಜಮೀನನ್ನು ಮಂಜೂರು ಮಾಡಿಬಿಡುತ್ತಾರೆ. ಇದು ಒಂದು ಕಡೆಯ ಸಮಸ್ಯೆಯಲ್ಲ. ಇಡೀ ರಾಜ್ಯದಲ್ಲಿಯೇ ಈ ಸಮಸ್ಯೆ. ಇದೇ ಒಂದು ದೊಡ್ಡ ಸಮಸ್ಯೆಯಾಗಿ ನಮಗೆ ತಲೆ ನೋವಾಗಿದೆ. ೯೦%

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

ಎಷ್ಟು extent ಇದೆ ಅಷ್ಟು extent ಮಂಜೂರು ಆಗಿರುವುದಿಲ್ಲ. ಅದಕ್ಕಿಂತ ಹೆಚ್ಚಾಗಿದೆ. ಕಡಿಮೆ ಮಾಡಲು ಯಾರು ಒಪ್ಪಿಕೊಳ್ಳುತ್ತಿಲ್ಲ. ನಾವು ಕಳೆದ ಒಂದು ವರ್ಷದಿಂದ ಇದರ ಬಗ್ಗೆ ಮಾಡುತ್ತಿದ್ದೇವೆ. ಏನು ಮಾಡಬೇಕು ಎನ್ನುವುದು ನಮಗೂ ತೋಚುತ್ತಿಲ್ಲ. Possession ನಲ್ಲಿ ಒಬ್ಬರು ಇರುತ್ತಾರೆ, ಮಂಜೂರು ಇನ್ನೊಬ್ಬರಿಗೆ ಆಗಿರುತ್ತದೆ. ಕೆಲವರಿಗೆ ಮಂಜೂರು ಆಗಿರುವ ಕಾಪಿ ತಹಸೀಲ್ದಾರ್ ಕಛೇರಿಯಲ್ಲಿ ಇರುವುದೇ ಇಲ್ಲ. ಮುಂದೆ ಬಂದಿರುವ ತಹಸೀಲ್ದಾರರು ಈ ಆರ್‌ಟಿಸಿ ನೋಡದೆ ಕೆರೆ-ಕಟ್ಟೆ ಯಾವುದನ್ನು ತೋರಿಸಿರುವುದಿಲ್ಲ, ಇವರು ಎಲ್ಲವನ್ನು ಸೇರಿಸಿ ಮಂಜೂರು ಮಾಡಿಬಿಡುತ್ತಾರೆ. ಇದು ನಮಗೆ ದೊಡ್ಡ ಸಮಸ್ಯೆಯಾಗಿದೆ. ಇದಕ್ಕಾಗಿ ನಾನು ಮರಿತಿಬ್ಬೇಗೌಡರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, Form no. 1 to 5 ಒಬ್ಬ ಏಕವ್ಯಕ್ತಿಗೆ ಮಾಡಬೇಕು. ಏಕವ್ಯಕ್ತಿಗೆ ಮಾಡಬೇಕು ಎಂದರೆ, ಅಲ್ಲಿ ೧೦೦ ಎಕರೆ ಇದ್ದರೆ ೨೦೦ ಎಕರೆ ಮಂಜೂರಾಗಿರುತ್ತದೆ. ಏಕವ್ಯಕ್ತಿ grant original or duplicate ಎನ್ನುವುದನ್ನು ಚೆಕ್ ಮಾಡಬೇಕಾಗುತ್ತದೆ. ಇದರಲ್ಲಿ ಯಾರನ್ನು ತೆಗೆದು ಹಾಕಬೇಕು, ಯಾರನ್ನು ಬಿಡಬೇಕು ಎನ್ನುವುದು ಗೊತ್ತಾಗುತ್ತಿಲ್ಲ. ಒಬ್ಬರನ್ನು ತೆಗೆದರೆ ಇನ್ನೊಬ್ಬರು ಕೋರ್ಟ್‌ಗೆ ಹೋಗುತ್ತಾರೆ. ಇದೊಂದು ದೊಡ್ಡ ಸಮಸ್ಯೆಯಾಗಿದೆ. ಇದಕ್ಕೋಸ್ಕರ ವಿಶೇಷ ಸಭೆಯನ್ನು ಕರೆದಿದ್ದೇವೆ. ನಮ್ಮ ಪ್ರಧಾನ ಕಾರ್ಯದರ್ಶಿಗಳಿಗೆ ಹೇಳಿದ್ದೇನೆ. ಇದು ಸುಮಾರು ೩೦/೪೦ ವರ್ಷಗಳಿಂದ ನಡೆದುಕೊಂಡೆ ಬಂದಿದೆ. ಇದಕ್ಕೆ ಏನಾದರೂ ಒಂದು rules frame ಮಾಡಬೇಕು. ಯಾರು ಮೊದಲು ಅರ್ಜಿ ಹಾಕಿರುತ್ತಾರೆ, ಯಾರಿಗೆ ಮೊದಲು ಮಂಜೂರು ಆಗಿರುತ್ತದೆ ಅವರಿಗೆ ಕೊಡಬೇಕು ಎನ್ನುವುದು ನನ್ನ ಅಭಿಪ್ರಾಯ. ಇದನ್ನು ನಾವು ಇನ್ನು ತೀರ್ಮಾನ ಮಾಡಿರುವುದಿಲ್ಲ. ಒಬ್ಬನಿಗೆ ೨೦೦ ಎಕರೆ ಜಮೀನು ಮಂಜೂರು ಆಗಿರುತ್ತದೆ, ಆದರೆ ಅಲ್ಲಿ ೧೦೦ ಎಕರೆ ಜಮೀನು ಇರುತ್ತದೆ. 1990ನೇ ಇಸವಿಯಲ್ಲಿ ಒಬ್ಬರಿಗೆ ಮಂಜೂರು ಆಗಿರುತ್ತದೆ. ಅದೇ ಜಾಗ ೨೦೦೫ನೇ ಇಸವಿಯಲ್ಲಿ ಇನ್ನೊಬ್ಬರಿಗೆ ಮಂಜೂರು ಆಗುತ್ತದೆ. ಆಗ ನಾವು ಯಾರನ್ನು ಗಣನೆಗೆ ತೆಗೆದುಕೊಳ್ಳಬೇಕು? Seniority consider ಮಾಡಿ ಕೊಡಬೇಕಾ ಅಥವಾ possession ನೋಡಿ ಕೊಡಬೇಕಾ ಎನ್ನುವುದು ಈಗ ಸಮಸ್ಯೆಯಾಗಿದೆ. ಜಮೀನು ಇಲ್ಲದೆಯೇ ತಹಸೀಲ್ದಾರರು ಮಂಜೂರು ಮಾಡಿಬಿಟ್ಟಿರುತ್ತಾರೆ, ಯಾರೋ ಬಲಾಢ್ಯರು ಹೋಗಿ ಅಲ್ಲಿ ಕುಳಿತುಬಿಡುತ್ತಾರೆ. ಇದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆಯಲ್ಲಿ ತುಂಬಾ ಚರ್ಚೆ ಮಾಡಿದ್ದೇವೆ. ಅವರದೊಂದು ಅಭಿಪ್ರಾಯ, ನನ್ನದೊಂದು ಅಭಿಪ್ರಾಯ. ಅದಕ್ಕಾಗಿ ಸದಸ್ಯರು ಏನು ಮಾಡಬಹುದು ಎನ್ನುವುದಕ್ಕೆ ಸಲಹೆಗಳನ್ನು ಕೊಟ್ಟರೆ, ಏನಾದರೂ ಮಾಡಿ ಪರಿಹರಿಸಬಹುದು. ಈ ರೀತಿ ನಲವತ್ತು ವರ್ಷಗಳಿಂದ ನಡೆಯುತ್ತಿದೆ. ಇಂತಹ ಲಕ್ಷಾಂತರ ಕೇಸ್‌ಗಳು ಇವೆ. ಇಲ್ಲದಿದ್ದರೆ ಎರಡು-ಮೂರು ವರ್ಷಗಳಾದರೂ ಪರಿಹಾರವಾಗುವುದಿಲ್ಲ. ೨೦೦ ಎಕರೆ ಬಗ್ಗೆ survey ಮಾಡಿ sketch ಮಾಡಿದರೆ bogus ಇರುವವರು ಕೋರ್ಟ್‌ಗೆ ಹೋಗಿ stay ತರುತ್ತಾರೆ. Stay ತಂದರೆ entire land ಹಾಗೆ ಉಳಿದುಬಿಡುತ್ತದೆ. ಕೋರ್ಟ್‌ನಲ್ಲಿ ತೀರ್ಮಾನವಾಗಬೇಕಾದರೆ ೨೦ ರಿಂದ ೩೦ ವರ್ಷಗಳಾಗುತ್ತದೆ. ಬೆಂಗಳೂರಿನಲ್ಲಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಧ ಅಡಿ ಹೆಚ್ಚು-ಕಡಿಮೆಯಾದರೆ ೧೦ ವರ್ಷಗಳವರೆಗೆ ಕೇಸ್ ನಡೆಸುತ್ತಾರೆ. ಮೊದಲು ಇರಲಿಲ್ಲ. 1 to 5 ಮಾಡಿ clear ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಎಷ್ಟು ಆಗುತ್ತದೆ ಅಷ್ಟು ಪ್ರಯತ್ನ ಮಾಡುತ್ತಿದ್ದೇವು. ಇನ್ನೊಂದು ಸಾರಿ ಇದರ ಬಗ್ಗೆ ಮಾನ್ಯ ಸದಸ್ಯರುಗಳ ಜೊತೆಯಲ್ಲಿ ದೀರ್ಘ ಚರ್ಚೆ ಮಾಡಬೇಕಾಗುತ್ತದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**:- ಈ ಬಗ್ಗೆ act ಏನು ಹೇಳುತ್ತದೆ?

**ಶ್ರೀ ಆರ್.ಅಶೋಕ್**:- ಮಾನ್ಯ ಸಭಾಪತಿಯವರೇ, ಈ ಬಗ್ಗೆ act ನಲ್ಲಿ ಎಲ್ಲವನ್ನು ಪರಿಶೀಲನೆ ಮಾಡಿ ಎಂದು ಹೇಳುತ್ತದೆ. ಮಾನ್ಯ ಮರಿತ್ತಿಬ್ಬೇಗೌಡರು ವೇಗವಾಗಿ ಮಾಡಿ ಎಂದು ಹೇಳುತ್ತಿದ್ದಾರೆ. ಯಾರನ್ನು ಕರೆದು ಮಾತನಾಡುವುದು, ಎಷ್ಟು ಜನರ ಜೊತೆ ನ್ಯಾಯ ಮಾಡಬೇಕು? ಎಲ್ಲಾ ಹಳ್ಳಿಗಳಲ್ಲಿ ಈ ಸಮಸ್ಯೆ ಇದೆ. ಇದರ ಬಗ್ಗೆ ಏನಾದರೂ ಕಠಿಣ ನಿಲುವನ್ನು ತೆಗೆದುಕೊಂಡು ಒಂದು cut-off ಮಾಡಬೇಕು. ಯಾರಿಗೆ ಮೊದಲು ಅಲಾಟ್ ಆಗಿರುತ್ತದೆ ಅವರಿಗೆ ಕೊಡಬೇಕೋ ಅಥವಾ ಯಾರು possession ನಲ್ಲಿರುತ್ತಾರೆ ಅವರಿಗೆ ಕೊಡಬೇಕೇ ಎನ್ನುವುದನ್ನು ಸರ್ಕಾರ ತೀರ್ಮಾನ ಮಾಡಬೇಕಾಗಿದೆ. ಅದಕ್ಕೆ ನಮ್ಮ ಪ್ರಧಾನ ಕಾರ್ಯದರ್ಶಿಯವರಿಗೆ experts ಕರೆದು ಮಾತನಾಡಿ, ಕಾನೂನು ಪ್ರಕಾರ ಏನು ಮಾಡಬೇಕು ಅದನ್ನು ಚರ್ಚೆ ಮಾಡಿ ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಆರ್‌ಟಿಸಿ ಯನ್ನು ಸಕಾಲ ವ್ಯಾಪ್ತಿಯಲ್ಲಿ ತರಲು ಆಗುವುದಿಲ್ಲ. ಆರ್‌ಟಿಸಿ ಯಲ್ಲಿ ತಪ್ಪು ಇದ್ದಾಗ ಮಾತ್ರ ಅಸಿಸ್ಟೆಂಟ್ ಕಮೀಷನರ್‌ಗೆ ಕೇಸ್ ಹೋಗುತ್ತದೆ. ಎಸಿ ಗೆ ಕೇಸ್ ಹೋದತಕ್ಷಣ ಅವರು ನೋಟಿಸ್ ಕೊಡಬೇಕಾಗುತ್ತದೆ. ನೋಟಿಸ್ ಬಂದ ಮೇಲೆ ಅವರು ಲಾಯರ್‌ಗಳನ್ನು ಇಟ್ಟುಕೊಂಡು ವಾದ ಮಾಡುತ್ತಾರೆ. ಲಾಯರ್ ಹಿಯರಿಂಗ್ ದಿನ ಬರಲಿಲ್ಲ ಎಂದರೆ ಕೇಸ್ ಮುಂದಕ್ಕೆ ಹೋಗುತ್ತದೆ. ಹೀಗೆ ಹೋಗಿ ಹೋಗಿ ವರ್ಷಾನುಗಟ್ಟಲೆ ನಡೆಯುತ್ತದೆ. ಸಕಾಲಕ್ಕೆ ಹಾಕಿದರೆ ಮೂರು ತಿಂಗಳಲ್ಲಿ ಕೊಡಲು ಬರುವುದೇ ಇಲ್ಲ. ಏಕೆಂದರೆ ಇದರ ಮೇಲೆ ಕೋರ್ಟ್ ರೀತಿಯಲ್ಲಿ ಕೇಸ್ ನಡೆಸಬೇಕಾಗುತ್ತದೆ. ಈಗಾಗಲೇ ಕಂದಾಯ ಅದಾಲತ್ ಮಾಡಿ ೧,೯೩,೬೮೭ ಅರ್ಜಿಗಳನ್ನು ತೀರ್ಮಾನ ಮಾಡಲಾಗಿದೆ.

(ಮುಂದು)

(1092)15-12-2021(11-30)bsd-md

**ಶ್ರೀ ಆರ್. ಅಶೋಕ್ (ಮುಂದು):**

ಮೋಜಿಣಿ ಅಡಿಯಲ್ಲಿ ೨,೦೭,೫೪೯ ಅರ್ಜಿಗಳನ್ನು ತಿದ್ದುಪಡಿ ಮಾಡುತ್ತಿದ್ದೇವೆ. ನಾನು ಸೂಚನೆ ಕೊಡುತ್ತೇನೆ. ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳು ಹಳ್ಳಿಗಳ ಕಡೆ ಹೋಗುತ್ತಿದ್ದು, ಈ ರೀತಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ವಿಷಯಗಳನ್ನು ಸ್ಥಳದಲ್ಲಿಯೇ ತೀರ್ಮಾನ ಮಾಡಲು ಯೋಚನೆ ಮಾಡಿ, ಇನ್ನಷ್ಟು ಸರಳೀಕರಣ ಮಾಡಲು ಅಧಿಕಾರಿಗಳ ಜೊತೆ meeting ಮಾಡುತ್ತೇನೆ. ಮೊದಲು surveyors ದೊಡ್ಡ ಸಮಸ್ಯೆ ಇತ್ತು. ನಮ್ಮಲ್ಲಿ ಬಹಳ ಕಡಿಮೆ surveyors ಇದ್ದರು. ಇನ್ನು ಎರಡು ಪ್ರಶ್ನೆಗಳು ಇದಕ್ಕೆ ಸಂಬಂಧಪಟ್ಟಂತೆ ಇದ್ದು ಆಗ ಉತ್ತರ ಹೇಳುತ್ತೇನೆ. ಮಾನ್ಯ ಸದಸ್ಯರಾದ ಚಿಕ್ಕಮಗಳೂರಿನ ಗೌಡರು ಪ್ರಶ್ನೆಯನ್ನು ಹಾಕಿದ್ದಾರೆ. ಮೊನ್ನೆ ಸುಮಾರು ೨೦೦೦ surveyors ಗಳ ನೇಮಕಾತಿ ಮಾಡಿದ್ದೇವೆ. ಮತ್ತೆ ೨೦೦೦ ನೇಮಕಾತಿ ಮಾಡುತ್ತಿದ್ದು, ನಮ್ಮ ಸರ್ಕಾರದಲ್ಲಿ surveyors ೩೫೦೦ಕ್ಕೂ ಹೆಚ್ಚು ಜನ ಇದ್ದಾರೆ. ಅವರ ಬದಲಾಗಿ ಮಾಡುವ ಮೂಲಕ ಲಕ್ಷಾಂತರ ಅರ್ಜಿಗಳಿದ್ದರೂ ನಾಲ್ಕೈದು ತಿಂಗಳಲ್ಲಿ clear ಆಗಬೇಕು. ಅದಕ್ಕಾಗಿ ಸುಮಾರು ೪೦೦೦ ಹೊಸ licensed surveyor ಗಳನ್ನು ನೇಮಕ ಮಾಡುತ್ತಿದ್ದೇವೆ. ೩೫೦೦ ಬಿಟ್ಟು additional ಆಗಿ ನಾಲ್ಕು ಸಾವಿರ ನೇಮಕ ಮಾಡುತ್ತಿದ್ದೇವೆ. ನಂತರ ನಾಲ್ಕೈದು ತಿಂಗಳಲ್ಲಿ ಸಮಸ್ಯೆ ಬಗೆಹರಿಯುವ ರೀತಿ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡಃ**- ಮಾನ್ಯ ಸಭಾಪತಿಯವರೇ, ದುರಸ್ತಿ ಮಾಡಲು Village Accountant to Deputy Commissionerವರೆಗೆ ಸೇರಿದಂತೆ ಅನೇಕ ಕಡೆ ಹೋಗಬೇಕಾಗಿದ್ದು, ಅದನ್ನು ತಪ್ಪಿಸಿ 1 to 5 form ಏನಿದೆ, ಕಾಯ್ದೆ ಪ್ರಕಾರ ಆ form ಅನ್ನು examine ಮಾಡಿ ತಹಶೀಲ್ದಾರ್‌ರವರು direct ಆಗಿ ADLR (Additional Director of Land Records) ಗೆ ಕೊಟ್ಟು, ADLR ರವರಿಂದ Assistant Commissioner ಗೆ ಮತ್ತು DDLR (Deputy Director of Land Records) ಗೆ ಕೊಟ್ಟು ಕೇವಲ ನಾಲ್ಕು ಹಂತಗಳಲ್ಲಿ final ಮಾಡಲು ಸರಳೀಕರಣ ಮಾಡುವ ಬಗ್ಗೆ ಯೋಚನೆ ಮಾಡಬೇಕು. ಇದನ್ನು ಈಗ ಇರುವ ಕಾಯ್ದೆ ಪ್ರಕಾರವೇ ಮಾಡಿ. ಇದಲ್ಲದೇ RRT Section ಗೆ ಅದಾಲತ್ ಮಾಡುತ್ತಿರುವುದು ಬಹಳ ಒಳ್ಳೆಯ ಕೆಲಸವಾಗಿದ್ದು, ಇದು ನಿರಂತರವಾಗಿ ನಡೆದರೆ problem ಸ್ವಲ್ಪ solve ಆಗಬಹುದು. ಏಕೆಂದರೆ ವಿಳಂಬದಿಂದ ಕಂದಾಯ ಇಲಾಖೆಯಲ್ಲಿ ಭ್ರಷ್ಟಾಚಾರ ಎಲ್ಲಾ ಹಂತಗಳಲ್ಲಿ ತಾಂಡವವಾಡುತ್ತಿದ್ದು, ಇದರಿಂದ ರೈತರು ಮತ್ತು ಜನಸಾಮಾನ್ಯರಿಗೆ ಬಹಳ ಕಿರುಕುಳ ಹೆಚ್ಚಾಗುತ್ತಿದೆ. ಇದನ್ನು ತಪ್ಪಿಸಲು ಅದಾಲತ್ ಅನ್ನು ನಿರಂತರವಾಗಿ ನಡೆಸಬೇಕು. Form No. 1 to 5 ಅನ್ನು ತಹಶೀಲ್ದಾರ್ ಪರಿಶೀಲನೆ ಮಾಡಿ ಕಳುಹಿಸುವಂತೆ ಆಗಬೇಕು. ತಹಶೀಲ್ದಾರರಿಗೆ ಬರುವಷ್ಟರಲ್ಲಿ Village Accountant, Revenue Inspector, Deputy Tahsildar, Tahsildar, Assistant Commissioner, ADLR (Assistant Director of Land Records), DDLR (Deputy Director of Land Records), Deputy Commissioner ಇವರಿಗೆಲ್ಲಾ ಬಂದ ನಂತರವೇ ದುರಸ್ತಿಗೆ ಹೋಗುತ್ತದೆ. ಇದನ್ನು ತಪ್ಪಿಸಿ, ತಹಶೀಲ್ದಾರರಿಂದ direct ADLRಗೆ, ADLR ರಿಂದ Assistant Commissioner ಗೆ ನಂತರ DDLR (Deputy Director of Land Records) ಗೆ ಕಳುಹಿಸಿ, ಈ ನಾಲ್ಕು ಹಂತಗಳಲ್ಲಿಯೇ examine ಮಾಡುವ ಬಗ್ಗೆ ಪರಿಶೀಲನೆ ಮಾಡಬೇಕು.

**ಶ್ರೀ ಆರ್. ಅಶೋಕ್:-** ಈ suggestion ಬಗ್ಗೆ ನಾನು ಯೋಚನೆ ಮಾಡುತ್ತಿದ್ದು, ಏಕೆಂದರೆ AC ಗೆ ಹೋದ ತಕ್ಷಣ delay ಆಗುತ್ತಿದೆ. ತಹಶೀಲ್ದಾರ್ ಮಟ್ಟದಲ್ಲಿಯೇ ತೀರ್ಮಾನ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ. ಅದೇರೀತಿ ಅದಾಲತ್‌ಗಳನ್ನು ಜಾಸ್ತಿ ಮಾಡಲು ಸೂಚನೆಯನ್ನು ಕೊಡುತ್ತೇನೆ ಹಾಗೂ ಅದನ್ನು regular ಮಾಡುವುದಕ್ಕೂ ಸೂಚನೆ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ 361**
**ಉತ್ತರದ ಪ್ರತಿ ಲಗತ್ತಿಸಿದೆ**

**ಡಾ: ವೈ.ಎ.ನಾರಾಯಣಸ್ವಾಮಿ:**- ಮಾನ್ಯ ಸಭಾಪತಿಯವರೇ, ಪ್ರಶ್ನೆ ಬಹಳ simple ಆಗಿದ್ದು, ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಸುತ್ತಲಿನ ವ್ಯಾಪ್ತಿಯಲ್ಲಿ ಸರ್ಕಾರದ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಇರುವ ಹಲವು ಗೋಮಾಳ ಮತ್ತು ಸರ್ಕಾರಿ ಜಮೀನುಗಳು ಖಾಸಗಿಯವರಿಂದ ಅತಿಕ್ರಮಗೊಳಿಸಲ್ಪಟ್ಟಿರುವ ಪ್ರಕರಣಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೇನೆ. ಉತ್ತರದಲ್ಲಿ ಬೆಂಗಳೂರು ನಗರದಲ್ಲಿ ಸುಮಾರು ೩೮,೮೮೮ ಎಕರೆ ಒತ್ತುವರಿಯಾಗಿದ್ದು, ಬೆಂಗಳೂರು ಗ್ರಾಮಾಂತರದಲ್ಲಿ ಸುಮಾರು ೩೬,೨೨೯ ಎಕರೆ ಸೇರಿ ಒಟ್ಟು ೭೨,೦೦೦ ಎಕರೆ ಜಮೀನು ಒತ್ತುವರಿಯಾಗಿದೆ ಎಂದು ಸರ್ಕಾರ ಬಹಳ ಸ್ಪಷ್ಟವಾಗಿ ಹೇಳಿದೆ. ಇದರಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥ್ಯವಾಗಿವೆ ಎಂದು ಕೇಳಿರುವುದಕ್ಕೆ ಬೆಂಗಳೂರು ನಗರದಲ್ಲಿ ೧೪,೬೭೦ ಪ್ರಕರಣಗಳಲ್ಲಿ ೪,೯೪೦ ಪ್ರಕರಣಗಳು ಇತ್ಯರ್ಥ್ಯವಾಗಿವೆ ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ೩೮,೫೪೭ ಪ್ರಕರಣಗಳಲ್ಲಿ ೧೦,೮೯೨ ಪ್ರಕರಣಗಳು ಇತ್ಯರ್ಥ್ಯವಾಗಿವೆ ಎಂದು ತಿಳಿಸಿದ್ದಾರೆ. ಇದುವರೆಗೆ ಇದರಲ್ಲಿ ಕೇವಲ ೬೧ ಜನರಿಗೆ ಶಿಕ್ಷೆಯಾಗಿದೆ ಎಂದು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ದೇವನಹಳ್ಳಿ Airport ಬಂದ ನಂತರ ಬೆಂಗಳೂರು ಪೂರ್ವ, ಉತ್ತರದ ಕಡೆ ಇರುವ ಜಮೀನುಗಳ ಬೆಲೆ ಕೇವಲ gold ಅಲ್ಲದೇ diamond ಗಿಂತ ಜಾಸ್ತಿಯಾಗಿದೆ. ಒಂದು ಎಕರೆಗೆ ಒಂದೆರಡು-ಮೂರು ಕೋಟಿ ರೂಪಾಯಿಗಳ ಬೆಲೆ ನಡೆಯುತ್ತಿದೆ. ಮಾನ್ಯ ಸಚಿವರು ತಾಲ್ಲೂಕ್ wise ಉತ್ತರವನ್ನು ಬಹಳ ಚೆನ್ನಾಗಿ ಕೊಟ್ಟಿದ್ದು, ಬೆಂಗಳೂರು ನಗರದಲ್ಲಿ ಬೆಂಗಳೂರು ಪೂರ್ವ ೪,೭೬೨ ಎಕರೆ, ದಕ್ಷಿಣದಲ್ಲಿ ೬,೭೫೯ ಎಕರೆ, ಉತ್ತರದಲ್ಲಿ ೬೬೦ ಎಕರೆ, ಯಲಹಂಕದಲ್ಲಿ ೧,೨೫೩ ಎಕರೆ ಮತ್ತು ಆನೇಕಲ್‌ನಲ್ಲಿ ೧,೨೨೬ ಎಕರೆ ಎಂದು ಕೊಟ್ಟಿದ್ದಾರೆ. ನಾನು ಇಲ್ಲಿ ಕುಳಿತು ಅಂದಾಜಿಸಿದಂತೆ ಬೆಂಗಳೂರು ನಗರದಲ್ಲಿ ೩೮,೮೮೮ ಎಕರೆಯಲ್ಲಿ ೧೬,೪೨೦ ಎಕರೆ ಸರ್ಕಾರಕ್ಕೆ ತೆಗೆದುಕೊಂಡಿದ್ದು, ಇನ್ನು ೨೨,೪೬೮ ಎಕರೆ ಜಮೀನು ತೆಗೆದುಕೊಂಡಿಲ್ಲ. ಅದರ ಬೆಲೆ average ರೂ. ೧ ಕೋಟಿ ಎಂದು ಲೆಕ್ಕ ಹಾಕಿದರೂ ರೂ.೨೨,೪೬೮ ಕೋಟಿ ಸರ್ಕಾರಿ ಆಸ್ತಿಯನ್ನು ಭೂಕಬಳಿಕೆದಾರರು, ಭೂಮಾಫಿಯಾದವರು ಒತ್ತುವರಿ ಮಾಡಿಕೊಂಡಿದ್ದಾರೆ. ನಾನು 53 application ಅನ್ನು ಬಿಟ್ಟು ಹೇಳುತ್ತಿದ್ದೇನೆ. ಬೆಂಗಳೂರು ಗ್ರಾಮಾಂತರದಲ್ಲಿ ೩೬,೨೨೯ ಎಕರೆಯಲ್ಲಿ ೧೧,೦೦೦ ಎಕರೆಯನ್ನು ಮಾತ್ರ ಸರ್ಕಾರಕ್ಕೆ ತೆಗೆದುಕೊಂಡಿದ್ದು, ೨೪,೦೦೦ ಎಕರೆ ಇನ್ನು ಭೂಗಳ್ಳರ ವಶದಲ್ಲಿದೆ. ಕನಿಷ್ಟ ರೂ. ೫೦ ಲಕ್ಷ ಒಂದು ಎಕರೆಗೆ ಎಂದರೂ ರೂ.೧೩ ಸಾವಿರ ಕೋಟಿ ರೂಪಾಯಿಗಳಾಗುತ್ತದೆ. ಸರ್ಕಾರಿ ಜಮೀನನ್ನು ಭೂಗಳ್ಳರು ಸುಮಾರು ರೂ.೩೫,೪೬೯ ಕೋಟಿಗಳ ಆಸ್ತಿಯನ್ನು ಬೆಂಗಳೂರು ನಗರ ಮತ್ತು

ಗ್ರಾಮಾಂತರ ಪ್ರದೇಶಗಳಲ್ಲಿ ಒತ್ತುವರಿ ಮಾಡಿಕೊಂಡು enjoy ಮಾಡುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ paint ಮಾಡಿಸುವುದಕ್ಕೆ ಕಾಸು ಇಲ್ಲ, ಬಳಪ ಕೊಡಲು ಕಾಸು ಇಲ್ಲ. ಆಸ್ಪತ್ರೆಗಳಲ್ಲಿ repair ಮಾಡಲು ಕಾಸು ಇಲ್ಲ, ಆದರೆ ಸರ್ಕಾರಿ ಜಮೀನನ್ನು ಭೂಮಾಫಿಯಾದವರು ಒತ್ತುವರಿ ಮಾಡಿಕೊಂಡು ಮಜಾ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ speed ಆಗಿ ಕಾರ್ಯಾಚರಣೆ ಮಾಡಿ ಜಮೀನನ್ನು ವಾಪಸ್ಸು ತೆಗೆದುಕೊಳ್ಳಬಾರದು ಎನ್ನುವುದು ನನ್ನ ಪ್ರಶ್ನೆ.

ಇನ್ನು ಎರಡನೆಯದಾಗಿ ಜಾಲ ಹೋಬಳಿ, ಹುಣಸಮಾರನಹಳ್ಳಿ back side ನ ಹೊಸಹಳ್ಳಿಯ Survey No. 21 ರಲ್ಲಿ ೨೧೩ ಎಕರೆ ಜಮೀನನ್ನು....... ನಾನು PAC (Public Accounts Committee) ಯಲ್ಲಿ ಸದಸ್ಯನಾಗಿದ್ದು, ಮಾನ್ಯ ಅಶೋಕ್‌ರವರು ಅಧ್ಯಕ್ಷರಾಗಿದ್ದರು. ಆವತ್ತು check ಮಾಡಿದಾಗ ೮೪ ಎಕರೆಗಳಿಗೆ ನಕಲಿ ದಾಖಲೆಯನ್ನು ಸೃಷ್ಟಿ ಮಾಡಿ layout ಮಾಡುವವರಿಗೆ ಮಾರಿಬಿಟ್ಟಿದ್ದಾರೆ. ೮೪ ಎಕರೆ ಸರ್ಕಾರಿ ಜಮೀನನ್ನು ಹೀಗೆ ಮಾಡಿದ್ದಾರೆ. ಅದೇರೀತಿ ಬೆಂಗಳೂರು ಬಾಗಲೂರಿನ ಸಾತನೂರಿನಲ್ಲಿ Survey No. ೬೪ ರಲ್ಲಿ ೪೦ ಎಕರೆ...... ನನಗೆ ಗೊತ್ತಾಗಿರುವುದನ್ನು ನಾನು ಹೇಳುತ್ತಿದ್ದೇನೆ. ಹಾಗಾಗಿ ರೂ.೩೫ ಸಾವಿರ ಕೋಟಿಗಳ ಆಸ್ತಿಯನ್ನು ಅವರಿಗೆ ಇನ್ನೂ ಹಾಗೆ ಬಿಟ್ಟು ಏಕೆ ಕೈಕಟ್ಟಿ ಕುಳಿತುಕೊಂಡಿದೆ?

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒತ್ತುವರಿಯಾಗಿರುವ ಹಾಗೂ ತೆರವುಗೊಳಿಸುವ ಎಲ್ಲಾ ಅಂಕಿ ಅಂಶಗಳನ್ನು ಸದನಕ್ಕೆ ಕೊಟ್ಟಿದ್ದಾರೆ. ಒಟ್ಟು ೪,೦೬.೨೧೭ ಎಕರೆ ಸರ್ಕಾರಿ ಜಮೀನನ್ನು ತೆರವುಗೊಳಿಸಬೇಕಾಗಿದ್ದು, ಇದರಲ್ಲಿ ದಿನಾಂಕ ೩೧-೧೧-೨೦೨೧ರವರೆಗೆ ೨,೭೦,೧೦೮ ಎಕರೆ ಜಮೀನನ್ನು ತೆರವುಗೊಳಿಸಿದ್ದೇವೆ. ಉಳಿದಂತೆ ೧,೩೬,೧೦೯ ಎಕರೆಯನ್ನು ತೆರವುಗೊಳಿಸಬೇಕಾಗಿದೆ. ಈಗಾಗಲೇ ಬಹಳಷ್ಟು case ಗಳು ನಡೆಯುತ್ತಿದ್ದು, court ಗಳಲ್ಲಿ stay ತೆಗೆದುಕೊಂಡಿದ್ದಾರೆ, case ನಡೆಯುತ್ತಿದೆ. ಇಷ್ಟಾದರೂ court ಗಳಲ್ಲಿ ಸರಿಯಾದ ವಾದ ಮಂಡಿಸಿ ಜಮೀನನ್ನು ಪಡೆಯುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುವಂತೆ ಪ್ರತಿ ಶನಿವಾರ ಯಾವುದೇ ಕೆಲಸವನ್ನು ಇಟ್ಟುಕೊಳ್ಳದೇ, office ಗೂ ಬರದೇ, ಬೆಂಗಳೂರಿಗೆ ಸಂಬಂಧಪಟ್ಟಂತೆ ಒತ್ತುವರಿಯನ್ನು ತೆರವುಗೊಳಿಸಬೇಕು ಎಂದು ಆದೇಶ ಮಾಡಿದ್ದೇನೆ.

(ಮುಂದು)

**“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

(1093)/15.12.2021/11.40/ಹೆಚ್‌ವಿ:ಎಕೆ

**ಶ್ರೀ ಆರ್.ಅಶೋಕ್(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಜಿಲ್ಲಾಧಿಕಾರಿಗಳು ಆ ಕೆಲಸವನ್ನು ಮಾಡುತ್ತಿದ್ದಾರೆ. ಹೆಚ್ಚಾಗಿ ಆನೇಕಲ್ ಭಾಗದಲ್ಲಿ ಒತ್ತುವರಿಯಾಗುತ್ತಿದೆ. ಎಲ್ಲೆಲ್ಲಿ ಒತ್ತುವರಿಯಾಗಿದೆ ಆ ಒತ್ತುವರಿಗಳನ್ನು ತೆರವುಗೊಳಿಸುವ ಕಾರ್ಯವನ್ನು ಅವರು ಪ್ರತಿ ಶನಿವಾರ ಮಾಡುತ್ತಿದ್ದಾರೆ. ಭೂ ಕಬಳಿಕೆಗೆ ಸಂಬಂಧಪಟ್ಟಂತೆ ವಿಶೇಷ ನ್ಯಾಯಾಲಯವನ್ನು ಸ್ಥಾಪನೆ ಮಾಡಲಾಗಿದೆ. ಇದಕ್ಕಾಗಿ ನಿವೃತ್ತ ನ್ಯಾಯಮೂರ್ತಿಗಳನ್ನು ನೇಮಕ ಮಾಡಲಾಗಿದೆ. ಮೊನ್ನೆ ತಾನೇ ನೇಮಕಾತಿಯನ್ನು ಕಳುಹಿಸಿಕೊಟ್ಟಿದ್ದೇವೆ. ಅವರು ಸಹ ಇದನ್ನು ಗಮನಿಸುತ್ತಿದ್ದಾರೆ. ಮಾನ್ಯ ಕೆ.ಜಿ.ಬೋಪಯ್ಯನವರ ನೇತೃತ್ವದಲ್ಲಿ ಮತ್ತು ಶ್ರೀ ಎ.ಟಿ.ರಾಮಸ್ವಾಮಿಯವರನ್ನು ಒಳಗೊಂಡಂತೆ ಸರ್ಕಾರಿ ಭೂಮಿ ಸಂರಕ್ಷಣಾ ಸಮಿತಿ ಇದೆ. ಹೀಗೆ ಈ ಸಮಿತಿಗಳು ಎಲ್ಲೆಲ್ಲಿ ಸರ್ಕಾರಿ ಜಮೀನುಗಳು ಒತ್ತುವರಿಯಾಗಿವೆ ಅವುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತಿವೆ. ಒತ್ತುವರಿ ಮಾಡಿರುವವರು ಎಷ್ಟೇ ಪ್ರಭಾವಿ ವ್ಯಕ್ತಿಗಳಿದ್ದರೂ ಸಹ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲ. ಸರ್ಕಾರಿ ಜಮೀನನ್ನು ಹಿಂದಕ್ಕೆ ಪಡೆದುಕೊಳ್ಳುವಂತಹ ಕೆಲಸವನ್ನು ನಾನು ಮಾಡುತ್ತಿದ್ದೇನೆ. ನಾನು ಕೂಡ ಕರ್ನಾಟಕದ ಎಲ್ಲಾ ಶಾಸಕರಿಗೂ 'ಎಲ್ಲೆಲ್ಲಿ ಸರ್ಕಾರಿ ಜಮೀನು ಇದೆ. ಆ ಜಾಗವನ್ನು ಆದ್ಯತೆಯ ಮೇರೆಗೆ ಶಾಲೆ, ಆಸ್ಪತ್ರೆ ಮತ್ತು ಅಂಗನವಾಡಿಗೆ ಮೀಸಲಿಟ್ಟು ಕೊಡಿ' ಎಂದು ಪ್ರತಿ ವರ್ಷ ಪತ್ರವನ್ನು ಬರೆಯುತ್ತಿದ್ದೇನೆ. ಒಂದಿಬ್ಬರು ಶಾಸಕರು ಮಾತ್ರ 'ಧನ್ಯವಾದಗಳು' ಎಂದು ಬರೆದಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ನಮಗೆ ಯಾವುದೇ ಪತ್ರ ಬಂದಿಲ್ಲ.

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭಾ ಸದಸ್ಯರುಗಳಿಗೆ ಬರೆದಿದ್ದೆ. ಇನ್ನು ಮುಂದೆ ವಿಧಾನ ಪರಿಷತ್ತಿನ ಸದಸ್ಯರುಗಳಿಗೂ ಬರೆಯುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ವಿಧಾನಸಭೆಯ ಸದಸ್ಯರುಗಳು ಮಾತ್ರ ಶಾಸಕರೆಂದು ತಿಳಿದುಕೊಳ್ಳಬೇಡಿ. ವಿಧಾನ ಪರಿಷತ್ತಿನ ಸದಸ್ಯರೂ ಶಾಸಕರೇ, ಈ ರೀತಿ ಪಕ್ಷಪಾತ ಮಾಡಬೇಡಿ. ಇವರಿಗೂ ತಾವು ಪತ್ರವನ್ನು ಬರೆಯಬೇಕು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ತಾವು ಆ ಸ್ಥಾನದಲ್ಲಿ ಕುಳಿತುಕೊಂಡು ಸೂಚನೆಯನ್ನು ಕೊಟ್ಟ ನಂತರ ನಾನು ಪಾಲನೆ ಮಾಡೇ ಮಾಡುತ್ತೇನೆ. ವಿಧಾನ ಪರಿಷತ್ತಿನ ಸದಸ್ಯರುಗಳ ಕಾರ್ಯಕ್ಷೇತ್ರದ ಮಾಹಿತಿಯನ್ನು ತೆಗೆದುಕೊಂಡು ಅವರಿಗೂ ಪತ್ರವನ್ನು ಬರೆಯುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಮುಂದಿನ 10-15 ವರ್ಷಗಳಲ್ಲಿ ಒಂದು ಅಂಗುಲದಷ್ಟೂ ಸರ್ಕಾರಿ ಜಮೀನಿ ಸಿಗುವುದಿಲ್ಲ. ಸರ್ಕಾರಿ ಆಸ್ಪತ್ರೆ ಅಥವಾ ಶಾಲೆಗಳನ್ನು ಕಟ್ಟುವುದಕ್ಕೂ ದುಡ್ಡು ಕೊಟ್ಟು ಜಮೀನು ಖರೀದಿ ಮಾಡಬೇಕಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈಗಿನ ಮಾರುಕಟ್ಟೆ ದರವನ್ನು ಕೊಟ್ಟು ಸರ್ಕಾರ ಜಾಗವನ್ನು ಖರೀದಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಮರಿತಿಬ್ಬೇಗೌಡ ಕೇಳಿದಂತೆ ಗ್ರಾಂಟ್ ಮಾಡುವಂತಹ ಸಂದರ್ಭದಲ್ಲಿ ಆ ಊರಿನಲ್ಲಿ ಸ್ಮಶಾನ ಇದೆಯೇ ಶಾಲೆ ಇದೆಯೇ ಎನ್ನುವುದನ್ನು ನೋಡಿಕೊಂಡು, ಇಲ್ಲದಿದ್ದರೆ, ಅದಕ್ಕಾಗಿ ಸ್ಥಳವನ್ನು ಮೀಸಲಾಗಿಟ್ಟು ಉಳಿದಿರುವ ಜಾಗವನ್ನು ಗ್ರಾಂಟ್ ಮಾಡಬೇಕೆಂದು ನಾನು ಹೇಳಿದ್ದೇನೆ. ಇಂತಹ ಒಂದು ಆದೇಶವನ್ನು ಮಾಡಿ ಎಲ್ಲ ಜಿಲ್ಲಾಧಿಕಾರಿಗಳಿಗೂ ಸೂಚನೆಯನ್ನು ಕೊಟ್ಟಿದ್ದೇನೆ. ಮುಂದಿನ ತಿಂಗಳಿನಲ್ಲಿ ಎಲ್ಲ ವಿಧಾನ ಪರಿಷತ್ತಿನ ಸದಸ್ಯರಿಗೂ ಪತ್ರವನ್ನು ಬರೆಯುತ್ತೇನೆ. ಅವರು ಎಲ್ಲೆಲ್ಲಿ ಸರ್ಕಾರಿ ಜಾಗವಿದೆ ಎನ್ನುವುದನ್ನು ತಿಳಿಸಿದರೆ, ಕೂಡಲೇ ಅದನ್ನು ಅವಶ್ಯಕತೆ ಇರುವಂತಹ ಇಲಾಖೆಗೆ ವರ್ಗಾವಣೆ ಮಾಡುವಂತಹ ಕೆಲಸವನ್ನು ನಾನು ಮಾಡುತ್ತೇನೆ.

**ಡಾ: ಕೆ.ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ಕ್ರೀಡಾ ಕ್ಷೇತ್ರಕ್ಕೂ ಸ್ವಲ್ಪ ಪ್ರಮಾಣದಲ್ಲಿ ಸರ್ಕಾರಿ ಜಾಗವನ್ನು ಮೀಸಲಿಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ಅದನ್ನು ಸಹ ಪರಿಗಣಿಸಲಾಗುವುದು.

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಮಾನ್ಯ ಸಚಿವರು ಬಹಳ ಆಸಕ್ತಿಯನ್ನು ವಹಿಸಿರುವುದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಕೆಲವೊಂದು ಊರಿನಲ್ಲಿ ಸರ್ಕಾರಿ ಶಾಲೆ ಕಟ್ಟುವುದಕ್ಕೆ ಮತ್ತು ಅಂಗನವಾಡಿ ಕಟ್ಟುವುದಕ್ಕೆ ಸರ್ಕಾರದ ಜಾಗ ಇರುವುದಿಲ್ಲ. ಇದೊಂದು ಬಹಳ ಗಂಭೀರವಾಗಿರುವ ವಿಚಾರವಾಗಿದೆ. ಆ ಹಿನ್ನೆಲೆಯಲ್ಲಿ ಈ ವಿಚಾರವನ್ನು ಅರ್ಧ ಗಂಟೆ ಕಾಲಾವಧಿಯಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮ ವಿನಂತಿ ಮಾಡುತ್ತಿದ್ದೇನೆ.

**ಡಾ: ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಬಹಳ ವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಭಾಗದಲ್ಲಿ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ನಮೂನೆ 50, 53, 57, 94(ಸಿ) ಮತ್ತು 94(ಸಿಸಿ) ಅಡಿಯಲ್ಲಿ ಯಾರು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಅವರಿಗೂ ಜಮೀನು ಕೊಡುವುದಕ್ಕೆ ಸರ್ಕಾರದ ಹತ್ತಿರ ಜಾಗವಿಲ್ಲ. ಬೆಂಗಳೂರು ನಗರದಲ್ಲಿ ಮತ್ತು ಗ್ರಾಮಾಂತರ ಭಾಗದಲ್ಲಿ ಕೃಷಿ ಮಾಡುವುದಕ್ಕೆ ಯಾರು ಕೂಡ ಒತ್ತುವರಿ ಮಾಡಿಕೊಳ್ಳುತ್ತಿಲ್ಲ. ಈ ಭೂಮಿಗಳು ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ, ಭೂ ಮಾಫಿಯದವರೊಂದಿಗೆ ಶಾಮೀಲಾಗಿ ಬಡಾವಣೆಗಳಾಗಿ ಪರಿವರ್ತನೆಯಾಗುತ್ತಿವೆ. ಈ ಕಾರ್ಯ ಬಹಳ ವೇಗವಾಗಿ ನಡೆಯುತ್ತಿದೆ. ಸರ್ಕಾರಿ ಜಾಗದಲ್ಲಿ ಅವರು ಲೇಔಟ್ ಮಾಡಿಕೊಂಡು ಮನೆಗಳನ್ನು ಕಟ್ಟಿಕೊಂಡ ಮೇಲೆ ಸರ್ಕಾರ ಆ ಒತ್ತುವರಿಯನ್ನು ತೆರವುಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರವೇ ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಒತ್ತುವರಿಯನ್ನು ಒಂದು ಕಾಲಮಿತಿಯೊಳಗೆ ತೆರವುಗೊಳಿಸಲಾಗುತ್ತದೆ. ಯಾವ ಕಾಲಮಿತಿಯೊಳಗೆ ಒತ್ತುವರಿಯನ್ನು ತೆರವುಗೊಳಿಸಲಾಗುತ್ತದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾಗಿ ಸದನಕ್ಕೆ ಉತ್ತರವನ್ನು ನೀಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವ ಲಿಖಿತ ರೂಪದ ಉತ್ತರದಲ್ಲಿ, ಒತ್ತುವರಿ ಪ್ರಕರಣಗಳನ್ನು ಸಮರ್ಥವಾಗಿ ತಡೆಯುವ ಸಲುವಾಗಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವನ್ನು ರಚಿಸಲಾಗಿದೆ ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 192-ಎ ಅನ್ವಯ ದಾಖಲಿಸಲಾಗುತ್ತಿದೆ' ಎನ್ನುವ ಮಾಹಿತಿಯನ್ನು ನೀಡಿದ್ದಾರೆ. ಸುಮಾರು 68 ಸಾವಿರ ಹೆಕ್ಟೇರ್ ಜಮೀನನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ಈ ಪೈಕಿ ಕೇವಲ 61 ಮಂದಿಗೆ ಮಾತ್ರ ಶಿಕ್ಷೆಯಾಗಿದೆ. ಇದರಲ್ಲಿ ಎಷ್ಟು ಜನ ಖಾಸಗಿ ವ್ಯಕ್ತಿಗಳು ಭಾಗಿಗಳಾಗಿದ್ದಾರೆ, ಎಷ್ಟು ಜನ ಅಧಿಕಾರಿಗಳು ಭಾಗಿಗಳಾಗಿದ್ದಾರೆ ಎನ್ನುವುದರ ಬಗ್ಗೆ ಸ್ಪಷ್ಟವಾಗಿರುವ ಮಾಹಿತಿಯನ್ನು ಮಾನ್ಯ ಸಚಿವರು ಈ ಸದನಕ್ಕೆ ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಂಡಿಸಿದಂತಹ ವಾದವೇ ನನಗೆ ಅರ್ಥವಾಗುತ್ತಿಲ್ಲ. ಈ ಆಕ್ಟ್ ಪ್ರಕಾರ ಕೆಲಸ ಮಾಡುವುದಾದರೆ, ಯಾವಯಾವ ಉದ್ದೇಶಗಳಿಗಾಗಿ ಕಾಯ್ದಿರಿಸಿರುವ ಸ್ಥಳವನ್ನು ಹೊರತುಪಡಿಸಿ, ಮಂಜೂರಾತಿ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಇದು ಲ್ಯಾಂಡ್ ಗ್ರಾಂಟ್ ಅಲ್ಲ. ಯಾರು ಒತ್ತುವರಿ ಮಾಡಿಕೊಂಡು, ಸಾಗುವಳಿ ಮಾಡಿಕೊಂಡಿರುತ್ತಾರೆ ಅಂತಹವರಿಗೆ ಮಾತ್ರ ಮಂಜೂರಾತಿ ಮಾಡುವುದಕ್ಕೆ ಕಾಯಿದೆಯಲ್ಲಿ ಅವಕಾಶವಿದೆ. ಇದನ್ನು ಬಿಟ್ಟು ಲ್ಯಾಂಡ್ ಗ್ರಾಂಟ್ ಅನ್ನು ಯಾವ ರೀತಿ ಮಾಡಲಾಗುತ್ತದೆ ಎಂದರೆ, ಯಾರೋ ಎಲ್ಲಿಯೋ ಕುಳಿತುಕೊಂಡಿರುವವನಿಗೆ ಸೀನಿಯಾರಿಟಿ ಪ್ರಕಾರ ಕೊಡುವುದೇ ಎಂದು ಆಲೋಚನೆ ಮಾಡುವುದರಲ್ಲಿ ಅರ್ಥವಿದೆಯೇ?

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಇದರಲ್ಲಿ ಸೀನಿಯಾರಿಟಿ ಪ್ರಶ್ನೆಯೇ ಬರುವುದಿಲ್ಲ ಅಥವಾ ಅರ್ಜಿ ಕೊಟ್ಟಿರುವವರ ಪ್ರಶ್ನೆಯೇ ಬರುವುದಿಲ್ಲ. ಯಾರು 1986ಕ್ಕಿಂತ ಮೊದಲಿನಿಂದ ಅಲ್ಲಿ ಕೃಷಿ ಚಟುವಟಿಕೆಯನ್ನು ಕೈಗೊಂಡಿದ್ದರು, ಯಾರು ಒತ್ತುವರಿಯನ್ನು ಮಾಡಿಕೊಂಡಿದ್ದರು ಅವರಿಗೆ ಭೂಮಿಯನ್ನು ಮಂಜೂರಾತಿ ಮಾಡುವುದಕ್ಕೆ ಕಾಯಿದೆಯಲ್ಲಿ ಅವಕಾಶವಿದೆ.

**ಡಾ: ತೇಜಸ್ವಿನಿಗೌಡ(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ರಾಜ್ಯದ ರಾಜಧಾನಿಯಾಗಿದೆ ಮತ್ತು ವಿಶೇಷವಾಗಿ ಇಲ್ಲಿನ ಸಾರ್ವಜನಿಕರ ಅನುಕೂಲಕ್ಕಾಗಿ ಸರ್ಕಾರಿ ಭೂಮಿ ಲಭ್ಯವಾಗುತ್ತಿಲ್ಲ. ಅನೇಕ ಕಡೆಗಳಲ್ಲಿ ಇಂದಿಗೂ ಸರ್ಕಾರಿ ಕಛೇರಿಗಳು ಬಾಡಿಗೆ ಕಟ್ಟಡದಲ್ಲಿದ್ದು, ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಾಗುತ್ತಿದೆ. ಮಾನ್ಯ ಆರ್. ಅಶೋಕ್‌ರವರು ಮತ್ತು ಶ್ರೀಯುತ ವಿ.ಸೋಮಣ್ಣನವರು ಬೃಹದಾಕಾರವಾಗಿ ಬೆಳೆದಿರುವ ಬೆಂಗಳೂರಿನ ಒತ್ತಡವನ್ನು ಮತ್ತು ಸವಾಲುಗಳನ್ನು ಪ್ರತಿದಿನ ಸ್ವೀಕರಿಸುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಮೊದಲು ಆಳತೆ ಆಗಬೇಕಾಗಿದೆ. ನಕಲಿ ದಾಖಲೆಗಳನ್ನು ಎಲ್ಲಿ ಸೃಷ್ಟಿಸಲಾಗುತ್ತಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ನಿನ್ನೆ ಮಾನ್ಯ ಸದಸ್ಯರಾದ ಶ್ರೀ ಕಾಂತರಾಜ್‌ರವರು ದಾಖಲೆಗಳ ವಿಚಾರವನ್ನು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಮತ್ತು ಬಿ.ಡಿ.ಎ. ಕಟ್ಟಡವನ್ನು ಒಡೆದು ಕಟ್ಟುವಂತಹ ವಿಚಾರದಲ್ಲಿ, ಅಧಿಕಾರಿಗಳು ದಾಖಲೆಗಳನ್ನು ಸುರಕ್ಷಿತವಾಗಿ ಇಡಬೇಕೆನ್ನುವ ಉತ್ತರವನ್ನು ನೀಡಿದ್ದಾರೆ. ದಾಖಲೆಗಳನ್ನು ಸುರಕ್ಷಿತವಾಗಿ ಇಟ್ಟಾಗ ಮಾತ್ರ ಸರ್ಕಾರಿ ಭೂಮಿಯನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದು ಬಹಳ ಮಹತ್ವದ ವಿಚಾರವಾಗಿರುವುದರಿಂದ ಇದರ ಮೇಲೆ ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡುವುದಕ್ಕೆ ಮುಂದಿನ ಬಾರಿ ತಾವು ಅವಕಾಶವನ್ನು ನೀಡಿದರೆ ಇದರ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಬಹುದೆನ್ನುವುದು ನನ್ನ ಅನಿಸಿಕೆಯಾಗಿದೆ.

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿರುವಂತೆ ಸುಮಾರು 1,36,109 ಎಕರೆ ಒತ್ತುವರಿ ತೆರವುಗೊಳಿಸುವುದು ಬಾಕಿ ಇದೆ. ಅದರಲ್ಲಿ ನಮೂನೆ, 50, 53, 57 ಮತ್ತು ಕೋರ್ಟ್ ಕೇಸ್‌ಗಳನ್ನು ಹೊರತುಪಡಿಸಿದರೆ ಬೆಂಗಳೂರು ನಗರದಲ್ಲಿ 275 ಎಕರೆ ಒತ್ತುವರಿಯನ್ನು ಮಾತ್ರ ತೆರವುಗೊಳಿಸಬೇಕಾಗಿದೆ. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ 830 ಎಕರೆ ಒತ್ತುವರಿಯನ್ನು ಮಾತ್ರ ತೆರವುಗೊಳಿಸಬೇಕಾಗಿದೆ. ಉಳಿದಿರುವುದು ನಮೂನೆ, 50, 53, 57 ಮತ್ತು ಕೋರ್ಟ್ ಕೇಸ್‌ಗಳಾಗಿವೆ. ಈಗಾಗಲೇ ಕೋರ್ಟ್‌ಗಳಲ್ಲಿ ಬಹಳಷ್ಟು ಕೇಸ್‌ಗಳು ನಡೆಯುತ್ತಿವೆ. ಕೋರ್ಟ್‌ಗಳಲ್ಲಿ ಪರಿಣಾಮಕಾರಿಯಾದ ವಾದವನ್ನು ಮಂಡಿಸಿ ಸರ್ಕಾರಿ ಭೂಮಿಯನ್ನು ವಾಪಸ್ಸು ಪಡೆಯುವಂತಹ ಪ್ರಯತ್ನವನ್ನು ಮಾಡಿದ್ದೇವೆ. ನಾನು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ ಅವರಿಗೆ ಶನಿವಾರ ಬೇರೆ ಯಾವುದೇ ಕೆಲಸ ಇರುವುದಿಲ್ಲ. ಆ ದಿನ ಒತ್ತುವರಿಯನ್ನು

ತೆರವುಗೊಳಿಸಿ ಸರ್ಕಾರದ ಸಂಸ್ಥೆಗಳಿಗೆ ನೀಡುವುದು ಅಥವಾ ಹರಾಜು ಹಾಕುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಯಾವುದೇ ಕಾರಣಕ್ಕೂ ಭೂಗಳ್ಳರಿಗೆ ಈ ಸರ್ಕಾರ ರಕ್ಷಣೆ ಕೊಡುವುದಿಲ್ಲ ಎನ್ನುವ ಮಾತನ್ನು ತಮ್ಮ ಮೂಲಕ ಈ ಸದನದಕ್ಕೆ ನೀಡಲು ಬಯಸುತ್ತಿದ್ದೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 37(296)**

(ಮಾನ್ಯ ಸದಸ್ಯರಾದ ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.
ರವರು ಸದನದಲ್ಲಿ ಉಪಸ್ಥಿತರಿರಲಿಲ್ಲ)

(ಮುಂದುವರಿದಿದೆ)

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

(1094) 15.12.2021 11.50 ಪಿಕೆ:ಎಕೆ

**ಪ್ರಶ್ನೆ ಸಂಖ್ಯೆ: 393 + 394**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ National Highways Authority of India (N.H.A.I) ಗೆ ಸಂಬಂಧಪಟ್ಟಿದ್ದಾಗಿದೆ. ಆದರೂ ನಮ್ಮಲ್ಲಿರುವ ಮಾಹಿತಿಯ ಆಧಾರದಲ್ಲಿ ಉತ್ತರ ಕೊಟ್ಟಿದ್ದೇವೆ. ಬೆಂಗಳೂರು-ತುಮಕೂರು ಮೊದಲು ಎನ್‌ಹೆಚ್-4 ಇತ್ತು. ಈಗ ಎನ್‌ಹೆಚ್-48 ಆಗಿದೆ. 2007-2009ರ ಅವಧಿಯಲ್ಲಿ first stretch complete ಆಗಿದೆ. ಟೋಲ್ ಕಲೆಕ್ಷನ್ 2027ರವರೆಗೆ ನವಯುಗ ದವರಿಗೆ ಇತ್ತು. ಮಧ್ಯದಲ್ಲಿ ಇವರು ಅಗ್ರಿಮೆಂಟ್ ಉಲ್ಲಂಘನೆ ಮಾಡಿದ್ದರಿಂದ ಮಾರ್ಚ್ 2021ಕ್ಕೆ ಅವರನ್ನು discontinue ಮಾಡಿದ್ದೇವೆ; ಅವರು ಕೋರ್ಟ್‌ಗೆ ಹೋಗಿದ್ದಾರೆ. N.H.A.I ನವರು ಹೊಸ ಟೆಂಡರ್ ಕರೆದು ಸಾಯಿ ಎಂಟರ್‌ಪ್ರೈಸೆಸ್‌ನವರಿಗೆ ಕೊಟ್ಟಿದ್ದಾರೆ. ಪ್ರತಿದಿನ ಸರ್ಕಾರಕ್ಕೆ ರೂ. 22 ಲಕ್ಷ ಟೋಲ್ ಫೀ ಕೊಡುತ್ತಿದ್ದಾರೆ. ಅವರಿಗೆ ಸುಮಾರು ರೂ. 2-4 ಲಕ್ಷ ಉಳಿಯುತ್ತದೆ. ಅದರಲ್ಲಿ ಅವರು ಕರೆಂಟ್ ಬಿಲ್ ಮತ್ತು ಇತರ ಮೇಂಟೆನೆನ್ಸ್ ಮಾಡಿಕೊಳ್ಳಬೇಕಾಗುತ್ತದೆ. ಈಗ average ಕೂಡ ಅವರಿಗೆ ಅಷ್ಟೇ ಇದೆ. ಮುಂಚೆ ನವಯುಗದವರಿಗೂ ಅಷ್ಟೇ ಇತ್ತು ಎಂಬ ಮಾಹಿತಿ ಕೊಡಬಯಸುತ್ತೇನೆ. ಮುಖ್ಯವಾಗಿ, ಈ ಎಲ್ಲಾ ವಿಷಯಗಳನ್ನು N.H.A.I ದವರು ಕಂಟ್ರೋಲ್ ಮಾಡುತ್ತಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಗಳೆ, 17.2.2021 ರ ಅಧಿವೇಶನದಲ್ಲಿ ಇದೇ ವಿಷಯವನ್ನು ಪ್ರಸ್ತಾಪ ಮಾಡಿದಾಗ, 21.6.2021ಕ್ಕೆ ಅವರ ನಿರ್ವಹಣಾ ಅವಧಿ ಮುಕ್ತಾಯವಾಗಲಿದೆ ಎಂದು ಹೇಳಿದಿರಿ. ಮತ್ತೆ, ಅವರು ಕೋರ್ಟ್‌ಗೆ ಹೋಗಿದ್ದರೂ ಸ್ಟೇ ಸಿಕ್ಕಿಲ್ಲ. ಈಗಾಗಲೇ ಅವಧಿ ಮುಗಿದು 6 ತಿಂಗಳಾಗಿದೆ. ಈಗ ನಾವು ಡಿಸೆಂಬರ್ ತಿಂಗಳಿನಲ್ಲಿದ್ದೇವೆ. ಕೋರ್ಟ್‌ನಲ್ಲಿ ಸ್ಟೇ ಕೂಡ ಸಿಕ್ಕಿಲ್ಲ, ಅವಧಿ ಮುಗಿದು 6 ತಿಂಗಳಾಗಿದೆ, ಟೋಲ್ ಕಲೆಕ್ಷನ್ ಒಂದು ದಿನಕ್ಕೆ ಒಂದು ಕಡೆ ರೂ.23 ಲಕ್ಷ ಮತ್ತು ಇನ್ನೊಂದು ಕಡೆ ರೂ. 26 ಲಕ್ಷ ಒಟ್ಟು ಸುಮಾರು ರೂ. 50 ಲಕ್ಷ ಆಗುತ್ತಿದೆ. ರೂ. 4-5 ಲಕ್ಷ ಅವರಿಗೆ ಉಳಿಯುತ್ತದೆ ಎಂದು ಹೇಳುತ್ತಿದ್ದೀರಿ. ಈ ರಾಜ್ಯದ ಹೆದ್ದಾರಿಗಳ ಟೋಲ್ ಶುಲ್ಕದ ಅವಧಿ ಮುಗಿದಿದ್ದರೂ ಜನರನ್ನು ಶೋಷಣೆಗೆ ಒಳಪಡಿಸುತ್ತಿದ್ದಾರೆ ಎಂದು ಇಡೀ ರಾಜ್ಯದ ಜನ ಹೇಳುತ್ತಿದ್ದಾರೆ. ಅನೇಕ ಕಡೆ ಟೋಲ್ ಸಂಗ್ರಹ ಅವಧಿ ಮುಗಿದಿದ್ದರೂ, ಬೇರೆ ಸಬೂಬು ಹೇಳಿ, ಮತ್ತೆ ಅವರಿಗೆ 2-3-4 ವರ್ಷಗಳನ್ನು ವಿಸ್ತರಿಸುವ ಕೆಲಸ ಆಗುತ್ತಿದೆ. ಇನ್ನೊಂದು ಏನಾಗಿದೆ ಎಂದರೆ, ವಾಹನಗಳ ಸಂಖ್ಯೆ ಹೆಚ್ಚಾಗಿದೆ; ಟೋಲ್ ಕಲೆಕ್ಷನ್ ಹೆಚ್ಚಾಗಿದೆ. ಕರಾರಿನ ಅವಧಿ ಮುಗಿದು ಹೋಗಿದ್ದರೂ ಏಕಾಏಕಿ ಇವರಿಗೆ 3-4-5 ವರ್ಷ ಹೆಚ್ಚು ಅವಧಿ ಕೊಡುತ್ತಾ ಹೋಗುತ್ತಿದ್ದೀರಿ? ಅವರು ಕೋರ್ಟ್‌ಗೆ ಹೋಗಿರುವುದು ನಿಜ; ಆದರೆ ಸ್ಟೇ ಸಿಕ್ಕಿಲ್ಲ. Why are they again collecting the toll? ಜನರನ್ನು

---

ಎಷ್ಟು ಗೋಳು ಹೋಯ್ದುಕೊಳ್ಳುತ್ತೀರಿ? ಒಂದು ರಸ್ತೆ ಮಾಡಿದ್ದೇವೆ ಎಂದು ಅವರ ಶೋಷಣೆ ಮಾಡುತ್ತಿದ್ದೀರಿ; ಅದಕ್ಕೂ ಮಿತಿ ಇರಬೇಕು ಅಲ್ಲವೇ? ದಯಮಾಡಿ ನೀವು, ಅವಧಿ ಮುಗಿದಿರುವುದರಿಂದ ಕೂಡಲೇ ತೆರವುಗೊಳಿಸುವುದಕ್ಕೆ ಮುಂದಾಗಬೇಕು. ನೀವು ರಾಷ್ಟ್ರೀಯ ಪ್ರಾಧಿಕಾರದ ಜೊತೆ ಮಾತನಾಡುತ್ತೀರೋ ಅಥವಾ ಬೇರೆಯವರ ಜೊತೆ ಮಾತನಾಡುತ್ತೀರೋ ಗೊತ್ತಿಲ್ಲ. ಒಂದು ದಿನಕ್ಕೆ ರೂ. 50 ಲಕ್ಷ ಕಲೆಕ್ಷನ್ ಆಗುತ್ತಿದೆ. ನಮ್ಮ ಜನ ಏನಾಗಬೇಕು? ಅವರು ಏನು ತಪ್ಪು ಮಾಡಿದ್ದಾರೆ? ದಯಮಾಡಿ ಉತ್ತರ ಕೊಡಿ. ಇದನ್ನು ನಿಲ್ಲಿಸುವ ಕೆಲಸ ಮಾಡಿ.

**ಶ್ರೀ ಸಿ.ಸಿ.ಪಾಟೀಲ್**:- ಮಾನ್ಯ ಸಭಾಪತಿಗಳೆ, ನೆಲಮಂಗಲ-ತುಮಕೂರು ರಸ್ತೆ ವ್ಯಾಪ್ತಿ, ಕ್ಯಾತ್ಸಂದ್ರದ ತನಕ ಒಟ್ಟು 32.50 ಕಿ.ಮೀ ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ 22.6.2021ಕ್ಕೆ ಅವರ ಅವಧಿ ಮುಗಿದಿದೆ. ಅವರು ಕೋರ್ಟ್‌ಗೆ ಹೋಗಿದ್ದಾರೆ. Because of covid and other reasons ಅವರು ಕೋರ್ಟ್‌ಗೆ ಹೋದಾಗ, arbitration ನಲ್ಲಿ ಅವರಿಗೆ 474 ದಿವಸ extra ಕೊಡಬೇಕೆಂದು Arbitration Committee ಯವರು ಹೇಳಿದ್ದಾರೆ. ಆ ಹೆಚ್ಚುವರಿ ಅವಧಿಯು 10.10.2022ಕ್ಕೆ ಮುಗಿಯುತ್ತದೆ. 474 ಹೆಚ್ಚುವರಿ ದಿವಸಗಳು ಕೊಟ್ಟಿರುವ ಹಿನ್ನೆಲೆಯಲ್ಲಿ N.H.A.I. ದವರು ಸುಪ್ರೀಮ್ ಕೋರ್ಟ್‌ಗೆ ಹೋಗಿದ್ದಾರೆ. ಸುಪ್ರೀಮ್ ಕೋರ್ಟ್ arbitration ಗೆ ಸ್ಟೇ ಕೊಡದೇ ಇದ್ದುದಕ್ಕೆ arbitration ತಾತ್ಕಾಲಿಕವಾಗಿ upheld ಆಗಿದೆ. ಸುಪ್ರೀಮ್ ಕೋರ್ಟ್‌ನ ನಿರ್ಣಯ ಬಂದನಂತರ ಇದರ ಬಗ್ಗೆ ಸಂಪೂರ್ಣ ಕ್ರಮ ಕೈಗೊಳ್ಳುತ್ತೇವೆ. ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಇರಬಹುದು, ಅನವಶ್ಯಕವಾಗಿ ಜನರಿಗೆ ವಂಚನೆ ಮಾಡುವಂಥದ್ದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸದನಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

**Sri K.T. SRIKANTEGOWDA:** Arbitration Committee ಯವರು 474 ದಿನಗಳನ್ನು ಏಕೆ ಕೊಟ್ಟರು? It was given on which grounds?

**ಶ್ರೀ ಸಿ.ಸಿ.ಪಾಟೀಲ್**:- ಆರ್ಬಿಟ್ರೇಷನ್ ಕಮಿಟಿ ಇದೆ. ನಾವೇನೂ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಸರ್ಕಾರ ಕೇಳಬೇಕು ಅಲ್ಲವೇ? ನಿರೀಕ್ಷೆ ಮೀರಿ ಟೋಲ್ ಕಲೆಕ್ಷನ್ ಆಗುತ್ತಿದೆ. ಇದು ಒಂದು ರೀತಿಯ ದಂಧೆಯಾಗಿದೆ. ಜನರನ್ನು ಗೋಳು ಹೊಯ್ದುಕೊಳ್ಳುತ್ತಿದ್ದಾರೆ. ಕೋರ್ಟ್ ಸ್ಟೇ ಆರ್ಡರ್ ಕೊಟ್ಟಿಲ್ಲ.

**Sri C.C. PATIL:** Arbitration Committee ಯವರು 474 ದಿನಗಳ extension period ಕೊಟ್ಟಿದೆ ಎಂದು ಅದರ ವಿರುದ್ಧ N.H.A.I ನವರು ಸುಪ್ರೀಮ್ ಕೋರ್ಟ್‌ಗೆ ಹೋಗಿದ್ದಾರೆ. ಆದರೆ arbitration ಆದೇಶ ಮಾಡಿದ್ದಕ್ಕೆ ಸುಪ್ರೀಮ್ ಕೋರ್ಟ್ ಇದುವರೆಗೂ ತಡೆಯಾಜ್ಞೆ ಕೊಟ್ಟಿಲ್ಲ. ಆ ಕಾರಣಕ್ಕೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

arbitration order upheld ಆಗಿದೆ. ಸುಪ್ರೀಮ್ ಕೋರ್ಟ್‌ನಲ್ಲಿ ಆರ್ಗ್ಯುಮೆಂಟ್ ನಡೆಯುತ್ತಿದೆ. ಸುಪ್ರೀಮ್ ಕೋರ್ಟ್‌ನ ನಿರ್ಣಯದಂತೆ ಕಾಮಗಾರಿಯನ್ನು ಮುಂದುವರೆಸುತ್ತೇವೆ.

**ಶ್ರೀ ಕಾಂತರಾಜ್(ಬಿ.ಎಂ.ಎಲ್):-** ಆರ್ಬಿಟ್ರೇಷನ್ ಆದರೂ ಕೋರ್ಟ್‌ನಲ್ಲಿ ಅದಕ್ಕೆ ಆರ್ಡರ್ ಕೊಟ್ಟರೆ ಮಾತ್ರ ಬೆಲೆ ಇರುತ್ತದೆ. ಯಾವುದೇ ಕಾರಣಕ್ಕೂ ಆರ್ಬಿಟ್ರೇಷನನ್ನು 'ಆರ್ಡರ್' ಎಂದು ಕನ್ಸಿಡರ್ ಮಾಡಬಾರದು.

**ಶ್ರೀ ಸಿ.ಸಿ.ಪಾಟೀಲ್**:- ಇಂತಹ ಸಂದರ್ಭ ಬಂದಾಗ, ಆರ್ಬಿಟ್ರೇಷನ್ ಕಮಿಟಿಯವರು ಮಾಡಿದ್ದು ಸರಿಯಲ್ಲ ಎಂದು N.H.A.I. ದವರು ಸುಪ್ರೀಮ್ ಕೋರ್ಟ್‌ಗೆ ಹೋಗಿದ್ದಾರೆ. ಆರ್ಬಿಟ್ರೇಷನ್ ಕಮಿಟಿಯವರು ಮಾಡಿದ್ದು ತಪ್ಪು ಎನ್ನುವ ಆದೇಶ ಸುಪ್ರೀಮ್ ಕೋರ್ಟ್‌ನಿಂದ ಬಂದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಗಳೆ, ದಿನಕ್ಕೆ ಸುಮಾರು ರೂ.50 ಲಕ್ಷ ಕಲೆಕ್ಷನ್ ಆಗುತ್ತಿದೆ. ಅದರ ಉಪಯೋಗ ರಾಜ್ಯ ಸರ್ಕಾರಕ್ಕೂ ಇಲ್ಲ, ನಮ್ಮ ಜನರಿಗೂ ಇಲ್ಲ.

**Sri C.C. PATIL:** Concession Agreement ನಲ್ಲಿ arbitration ಗೆ ಅವಕಾಶ ಇರುವುದರಿಂದ arbitration ಗೆ ಹೋಗಿದೆ. ಆರ್ಬಿಟ್ರೇಷನ್ ವಿರುದ್ಧ ಸುಪ್ರೀಮ್ ಕೋರ್ಟ್‌ಗೆ ಹೋಗಿದ್ದೇವೆ. We are waiting for the Supreme Court judgment.

**ಸಭಾಪತಿಯವರು**:- ಮಾನ್ಯ ಶ್ರೀಕಂಠೇಗೌಡರು ಹೇಳುತ್ತಿರುವುದರ ವಿಚಾರದ ಬಗ್ಗೆ ಚಿಂತನೆ ಮಾಡಿ, ದಿನಕ್ಕೆ ರೂ. 50 ಲಕ್ಷ ಕಲೆಕ್ಟ್ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಆ ಕುರಿತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಬಂದು ತೀರ್ಮಾನಕ್ಕೆ ಬನ್ನಿ.

**ಶ್ರೀ ಸಿ.ಎಂ.ಇಬ್ರಾಹಿಂ**:- ಮಾನ್ಯ ಸಭಾಪತಿಗಳೆ, ಸರ್ಕಾರ ಏನು ಟೆಂಡರ್ ಮೂಲಕ ಕಂಟ್ರ್ಯಾಕ್ಟ್ ಕೊಟ್ಟಿದ್ದಾರೋ, ಅವರು ಮಾಡಿರುವ ರಸ್ತೆ ಕ್ವಾಲಿಟಿಯಿಂದ ಕೂಡಿದೆಯೇ ಇಲ್ಲವೇ ಎಂದು ಇದುವರೆಗೂ ಯಾವುದಾದರೂ ಅಧಿಕಾರಿಗಳು ಇನ್ಸ್‌ಪೆಕ್ಷನ್ ಮಾಡಿದ್ದಾರೆಯೇ? ಯಾರೂ ಮಾಡಿಲ್ಲ. ಆ ರಸ್ತೆಯಲ್ಲಿ ಹೋದರೆ ಹಳ್ಳಿ ರಸ್ತೆಗಿಂತ ಕೀಳಾಗಿದೆ ಎನ್ನುವುದು ಗೊತ್ತಾಗುತ್ತದೆ. N.H.A.I ದವರು 6 ಪಥದ ರಸ್ತೆಯನ್ನೇನು ಮಾಡಿದ್ದಾರೆ ಅದು ಕ್ವಾಲಿಟಿ ಸರಿಯಾಗಿಲ್ಲ.

**ಶ್ರೀ ಸಿ.ಸಿ.ಪಾಟೀಲ್**:- ನಾನು ತಿಂಗಳಿಗೆ 10 ಸಲ ಅದೇ ರಸ್ತೆಯಲ್ಲಿ ಓಡಾಡುತ್ತೇನೆ. ಕ್ಯಾತಸಂದ್ರದಿಂದ ತುಮಕೂರು ದಾಟುವವರೆಗೆ ರಸ್ತೆ ಕೆಟ್ಟಿದೆ. ನಾನೇ ಅವರಿಗೆ ಸೂಚನೆ ಕೊಟ್ಟಿದ್ದೇನೆ, ಈಗ ಕೆಲಸ ನಡೆಯುತ್ತಿದೆ.

**ಶ್ರೀ ಸಿ.ಎಂ.ಇಬ್ರಾಹಿಂ**:- ಆದರೆ ದುಡ್ಡು ಕಲೆಕ್ಟ್ ಮಾಡುವುದು ಮಾಡುತ್ತಲೇ ಇದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಅದೇ ಬೇರೆ, ಇದೇ ಬೇರೆ.

**Sri C.C. PATIL:** Pothole work is going on.

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ:308, ಮಾನ್ಯ ಅ.ದೇವೇಗೌಡ ಅವರದು. ಅವರು ಸದನದಲ್ಲಿ ಉಪಸ್ಥಿತರಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 274**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಲ್ ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ತಕರಾರು ಇರುವ ಜಮೀನಿನ ಪೋಡಿ ಮಾಡಿಕೊಡಲು ದರಖಾಸ್ತು ಮುಖಾಂತರ ಮಂಜೂರು ಆದ ಜಮೀನುಗಳಿಗೆ ಏಕ ವ್ಯಕ್ತಿ ಪೋಡಿ ಮಾಡಿಕೊಡಲು ತಹಸೀಲ್ದಾರರಿಗೆ ಅಧಿಕಾರ ಇದೆ. ಇದು ನೀವು ಕೊಟ್ಟಿರುವ ಆದೇಶವಾಗಿದ್ದು, ಗುಬ್ಬಿ ತಾಲ್ಲೂಕಿನ ಯಾವುದೋ ಒಂದು ಪ್ರಕರಣದಲ್ಲಿ ಜಿಲ್ಲಾಧಿಕಾರಿಗಳಿಗೆ ದಿನಾಂಕ 29.11.2021ರಲ್ಲಿ ಸರ್ಕಾರ ಒಂದು ಆದೇಶ ಕೊಟ್ಟಿದೆ. ಸರ್ವೆ ನಂಬರ್ ಒಂದೇ ಇದ್ದು ಪೋಡಿ ಮಾಡತಕ್ಕ ಸಂದರ್ಭದಲ್ಲಿ A.D.L.R. (Assistant Director of Land Records) ಮತ್ತು D.D.L.R. (Deputy Director of Land Records) ರವರಿಗೆ ಹೋಗುವ ಅವಶ್ಯಕತೆ ಇಲ್ಲ. ತಹಸೀಲ್ದಾರರೇ ಮಾಡಬಹುದು ಎಂದಿದೆ. ಇಲ್ಲಿ ಈ ಕೆಲಸವನ್ನು ತಹಸೀಲ್ದಾರರು ಮಾಡುವುದಕ್ಕೆ ಏನು ತೊಂದರೆ ಇದೆ? ಮಾತೆತ್ತಿದರೆ ನೀವು A.D.L.R. ಮತ್ತು D.D.L.R. ರವರಿಗೆ ಕಳುಹಿಸುತ್ತೀರಿ. ಅಲ್ಲಿ ಹೋಗಿ ಅಲೆಯಬೇಕೇ? ತಿಂಗಳಾನುಗಟ್ಟಲೆ ಈ ಕೆಲಸ ಆಗುವುದಿಲ್ಲ. ಇದು ಎಲ್ಲಾ ತಾಲ್ಲೂಕು ಆಫೀಸ್‌ಗಳಲ್ಲಿ ನಡೆಯುತ್ತಿದೆ.

(ಮುಂದು)

(1095) 15-12-2021 12.00 DS-RN

**Sri S.L.BHOJEGOWDA: (Contd..,)**

When the power rests with the Tahsildar, what is the necessity to send ADLR and DDLR? ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಲಿ. ಸರ್ಕಾರ ಆದೇಶವನ್ನು ಮಾಡಿದೆ. ಸರ್ಕಾರದ ಆದೇಶಕ್ಕೆ ಬೆಲೆ ಇಲ್ಲವೇ? ಎಲ್ಲಾ ತಾಲ್ಲೂಕು ಕಚೇರಿಯಲ್ಲಿ DDLR & ADLR ಗೆ ಕಳುಹಿಸುತ್ತಿದ್ದಾರೆ ಏಕೆ? ನನ್ನ ಕೂಗು ಅರಣ್ಯ ರೋಧನವಾಗಿದೆ. ಮಾನ್ಯ ಕಂದಾಯ ಸಚಿವರೇ, ನಿಮ್ಮಂಥ ಪವರ್‌ಫುಲ್ ಸಚಿವರಿದ್ದಾಗಲೂ ಕ್ರಮ ತೆಗೆದುಕೊಂಡಿಲ್ಲವೆಂದರೆ ಇನ್ನು ಬಡವರ ಕಥೆ ಏನು? ನಾನು ಏಕೆ ಈ ಪ್ರಶ್ನೆ ಕೇಳುತ್ತಿದ್ದೇನೆಂದರೆ, ನನಗೆ ಇದರಲ್ಲಿ personal injury ಆಗಿದೆ. ನನ್ನದೇ ಒಂದು ಪ್ರಕರಣದಲ್ಲಿ DC, DDLR and ADLR ಎಲ್ಲರನ್ನು ಕೂರಿಸಿ ವಿಚಾರ ಮಾಡಿದ ಮೇಲೆ ನನಗೆ ಗೊತ್ತಾಯಿತು. 63ರಲ್ಲಿ ಏಕವ್ಯಕ್ತಿ ಪೋಡಿನಲ್ಲಿ ಯಾರಿಗೂ ಕಳುಹಿಸ ಬೇಕಾದ ಅವಶ್ಯಕತೆ ಇಲ್ಲ, ತಹಸೀಲ್ದಾರ್‌ರವರೇ ಮಾಡಬಹುದು ಎನ್ನುವ ಅಧಿಕಾರ ಇದೆ. ಅವರ ಹತ್ತಿರವೇ ಅಧಿಕಾರ ಇದ್ದಾಗ ಅವರು ಏಕೆ DDLR ಗೆ ಕಳುಹಿಸಿದ್ದೀರಿ ಎಂದು ಕೇಳಿದ್ದಕ್ಕೆ within a twenty-four hour ನಲ್ಲಿ ನನ್ನ ಪ್ರಕರಣ ಕ್ಲಿಯರ್ ಆಯಿತು. ಹಾಗಾದರೆ ಸಾಮಾನ್ಯ ಜನರ ಪರಿಸ್ಥಿತಿ ಏನು? 63ನಲ್ಲಿ ಎಲ್ಲಾ ತಹಸೀಲ್ದಾರ್‌ರವರಿಗೆ ಈ ಆದೇಶವನ್ನು ಅನುಷ್ಠಾನಕ್ಕೆ ತರುವುದಕ್ಕೆ ಮಾನ್ಯ ಸಚಿವರು ತಿಳಿಸಬೇಕು. Single survey number

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

and single owner, ಸಾವಿರಾರು ಅರ್ಜಿಗಳು ಇವೆ. ಈ ಎಲ್ಲಾ ಅರ್ಜಿಗಳ DDLR & ADLR ಹತ್ತಿರ ಕೊಳೆಯುತ್ತಿವೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಸರ್ವೆ ಕಾರ್ಯ ತಡ ಆಗುವುದರ ಬಗ್ಗೆ ಮಾನ್ಯ ಭೋಜೇಗೌಡರು ಪ್ರಶ್ನೆಯನ್ನು ಕೇಳಿದ್ದಾರೆ. ಕೋವಿಡ್-೧೯ ಸಂದರ್ಭದಲ್ಲಿ ಸರ್ವೆ ಕಾರ್ಯ ವಿಳಂಬವಾಗಿರುವಂಥದ್ದು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ಸರ್ಕಾರ ಹೊಸದಾಗಿ ೮೪೧ ಜನರಿಗೆ ಪರವಾನಗಿ ಕೊಟ್ಟಿದೆ. ಇನ್ನು ಹೊಸದಾಗಿ ೨೦೦೦ ಜನರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಇನ್ನೇನು ಒಂದು ತಿಂಗಳಿನಲ್ಲಿ ಅದು ಕೂಡ ವ್ಯವಸ್ಥೆಯಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೇ, ತಾವು ಅದನ್ನು ಕಳೆದ ಅಧಿವೇಶನದಲ್ಲೇ ಹೇಳಿದ್ದಿರಿ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಹೇಳಿದ ಮೇಲೆಯೇ ೨೦೦೦ ಜನರನ್ನು ನೇಮಕಾತಿ ಮಾಡಿಕೊಂಡು, ಅವರನ್ನು Licensed Surveyor ಎಂದು ಮಾಡಿದ್ದೇವೆ. ಅದರಲ್ಲಿ ೮೪೧ ಜನರು ತರಬೇತಿಯನ್ನು ಪಡೆದು ಬಂದಿದ್ದಾರೆ. ಇನ್ನು ಉಳಿದವರು ತರಬೇತಿಯನ್ನು ಪಡೆಯುತ್ತಿದ್ದಾರೆ. ಇನ್ನು ಒಂದು ತಿಂಗಳಿನಲ್ಲಿ ಅವರು ತರಬೇತಿ ಮುಗಿಸಿ ಬರುತ್ತಾರೆ. ಆಗ ೨೦೦೦ ಜನರನ್ನು ನೇಮಕಾತಿ ಮಾಡಿಕೊಂಡ ಹಾಗೆ ಆಗುತ್ತದೆ. ಕಳೆದ ಸಲ ನಾನು ಏನು ಹೇಳಿದ್ದೆ ಅದನ್ನು ನಾನು ಮಾಡಿದ್ದೇನೆ. ಅದಲ್ಲದೆ, ಮತ್ತೆ ಇನ್ನು ೨೦೦೦ ಜನರನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದೇವೆ. ಆದ್ದರಿಂದ ಈ ಸಮಸ್ಯೆ ಏನಿದೆ, ಅದು ಎಲ್ಲರಿಗೂ ಗೊತ್ತಿರುವಂಥದ್ದು, ಅದು ಇವತ್ತಿನ ಸಮಸ್ಯೆಯಲ್ಲ. ಇದು ಹಳೆ ಕಾಯಿಲೆ. ಅದಕ್ಕೆ ಏನೋ ಮದ್ದು ಹುಡುಕಿದ್ದೇವೆ. ಸರ್ವೆಯರ್ ಜಾಸ್ತಿಯಾದರೆ ಇದನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ತಹಸೀಲ್ದಾರ್ ಬಗ್ಗೆ ಈಗಾಗಲೇ ನಾವು ಹೇಳಿದ್ದೇವೆ. 11E Sketch ಅದಕ್ಕೂ ಕೂಡ ವ್ಯವಸ್ಥೆ ಮಾಡುತ್ತಿದ್ದೇವೆ. ಮೊನ್ನೆ ಹೈಕೋರ್ಟ್ ಕೂಡ 11E Sketch ಬೇಡ ಎಂದು ಆದೇಶ ಮಾಡಿದೆ. ಅದರ ಬಗ್ಗೆಯೂ ಸರ್ಕಾರ ಗಮನಹರಿಸುತ್ತಿದೆ. Form No.1 to 5 ನಲ್ಲಿ ಏನು ಸಮಸ್ಯೆ ಇದೆ ಅದರ ಬಗ್ಗೆ ಈಗಾಗಲೇ ನಾನು ಮಾನ್ಯ ಮರಿತಿಬ್ಬೇಗೌಡರು ಮಾತನಾಡುವಾಗ ಹೇಳಿದ್ದೇನೆ. ತಹಸೀಲ್ದಾರ್ ಮಟ್ಟದಲ್ಲಿ ತೀರ್ಮಾನ ಆಗಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಆದಷ್ಟು ಬೇಗ Form No.1 to 5 ಇರಬಹುದು ಮತ್ತು 11E Sketch ಇರಬಹುದು, ಇವೆರಡು ಬೇಗ ಆಗುವಂಥದ್ದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಸರ್ವೇಯರ್‌ಯಿಂದ ನಮಗೆ ತಡವಾಗಿದೆ. ಏಕೆಂದರೆ, Licensed Surveyor ಕೂಡ ಆರು ತಿಂಗಳು ಸ್ಟ್ರೈಕ್ ಮಾಡಿಬಿಟ್ಟರು. ಆ ಸಂದರ್ಭದಲ್ಲಿ ಬಹಳಷ್ಟು ಬಾಕಿ ಉಳಿದುಕೊಂಡು ಬಿಟ್ಟಿತು. ಈಗ ಅದನ್ನೆಲ್ಲಾ ಕ್ಲಿಯರ್ ಮಾಡುತ್ತಿದ್ದೇವೆ. ಇನ್ನು ನಾಲ್ಕೈದು ತಿಂಗಳೊಳಗೆ ಬಾಕಿ

---

ಉಳಿದಿರುವಂತಹ ಎಲ್ಲಾ ಅರ್ಜಿಗಳನ್ನು ಕ್ಲಿಯರ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಆ ದೃಷ್ಟಿಯಿಂದ ನಾನು ಬಹಳ ವಿಸ್ತೃತವಾಗಿ ಹೇಳಿದ್ದೇನೆ. ನಮಗೂ ಸಮಸ್ಯೆ ಇದೆ. ಇದನ್ನು ಬಗೆಹರಿಸುವುದಕ್ಕೆ ತೀರ್ಮಾನ ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ೨೦೦೦ ಜನರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಆದೇಶ ಕೊಟ್ಟಿರುವುದು ಇವೆಲ್ಲಾ ಸರಿಯಾಗಿದೆ. ೧೯೬೪ ಕಾಯ್ದೆ ಪ್ರಕಾರ ಸೆಕ್ಷನ್.೧೬೩ ರಲ್ಲಿ ತಹಸೀಲ್ದಾರ್‌ಗೆ ಅಧಿಕಾರ ಇದೆಯಲ್ಲಾ ಆ power ಅನ್ನು ತಕ್ಷಣವೇ ಎಲ್ಲಾ ತಹಸೀಲ್ದಾರ್‌ರವರಿಗೆ ನಿರ್ದೇಶನವನ್ನು ಕೊಡಬೇಕು. Already Supreme Court has given verdict. 11E Sketch is not necessary ಎಂದು ಆದೇಶ ಕೊಟ್ಟ ಮೇಲೆ ಅಧಿಕಾರಿಗಳು 11E Sketch ಬಗ್ಗೆ ಏಕೆ ಮಾತನಾಡಬೇಕು? 11E Sketch ಬೇಡ ಎಂದು ಸುಪ್ರೀಂಕೋರ್ಟ್ ಹೇಳಿದ ಮೇಲೆ ಇವರು ಏಕೆ insist ಮಾಡಬೇಕು? ಅಧಿಕಾರಿಗಳು ಬೇರೆ ಬೇರೆಯದ್ದಕ್ಕೆಲ್ಲಾ ಸುತ್ತೋಲೆಯನ್ನು ಹೊರಡಿಸುತ್ತಾರಲ್ಲಾ ಈ ರೀತಿ ಸುಪ್ರೀಂಕೋರ್ಟ್ ಆದೇಶ ಮಾಡಿದೆ ಈ 11E Sketch ಬಗ್ಗೆ ಅಧಿಕಾರಿಗಳು ಯಾರು ಪ್ರಶ್ನೆ ಮಾಡಬಾರದು, ೧೯೬೪ ಪ್ರಕಾರ ಸೆಕ್ಷನ್ ೧೬೩(೨) ರಲ್ಲಿ ತಹಸೀಲ್ದಾರ್‌ರವರು Single site, single owner ಇರತಕ್ಕಂಥ ಸಂದರ್ಭದಲ್ಲಿ ಇದನ್ನು ನೀವೇ ಮಾಡಬೇಕು, Form No.1to 5 ಗೆ ಕಳುಹಿಸುವ ಹಾಗಿಲ್ಲ, ADLR and DDLR ಗೆ ಕಳುಹಿಸಬಾರದು ಎಂದು ಇವರು ಏಕೆ ಸುತ್ತೋಲೆಯನ್ನು ಹೊರಡಿಸಬಾರದು? ಆ ರೀತಿ ಸುತ್ತೋಲೆಯನ್ನು ಹೊರಡಿಸಿದರೆ ಎಲ್ಲರಿಗೂ ಅನುಕೂಲವಾಗುವುದಿಲ್ಲವೇ? ಕಚೇರಿಗೆ ೮-೧೦ ತಿಂಗಳು ಅಲೆಯುವುದು ತಪ್ಪುತ್ತದೆಯಲ್ಲವೇ? ಜನರಿಗೆ ಅನುಕೂಲವಾಗುವಂಥ ಸುತ್ತೋಲೆಯನ್ನು ಏಕೆ ಹೊರಿಡುಸುವುದಿಲ್ಲ? ಅಧಿಕಾರಿಗಳು ಜನರಿಗೆ ಅನಾನುಕೂಲವಾವಂಥ ಸುತ್ತೋಲೆ ಸಾವಿರ ಇದ್ದರೂ ಬೇಕಾದರೆ ಹೊರಡಿಸುತ್ತಾರೆ. ಈ ಬಗ್ಗೆ ದಯಮಾಡಿ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಅವರ ಸಲಹೆಯನ್ನು ನಾವು ಸ್ವೀಕಾರ ಮಾಡಿದ್ದೇವೆ. 11E Sketch ಗೆ ಉಚ್ಚ ನ್ಯಾಯಾಲಯ ಆದೇಶ ಮಾಡಿರುವುದು ನಿಜ. 11E Sketch ಏಕೆ ಬೇಕೆಂದರೆ ಒಂದು ವೇಳೆ ೫ ಎಕರೆಯಷ್ಟು ಜಮೀನಿದ್ದರೆ, ೫ ಎಕರೆಯಲ್ಲಿ ಒಂದು ಎಕರೆ ನಾನು ತೆಗೆದುಕೊಂಡರೆ ಇನ್ನು ೪ ಎಕರೆ ಉಳಿಯಬೇಕು. ಆದರೆ ಅದು ರೆಕಾರ್ಡ್‌ನಲ್ಲಿ ಗೊತ್ತಾಗುವುದಿಲ್ಲ. ೫ ಎಕರೆ ಇರುವುದನ್ನು ಒಂದೊಂದು ಎಕರೆಯಾಗಿ ೬ ಎಕರೆ ಮಾಡಿದರೆ ಅದು ಸಮಸ್ಯೆಯಾಗುತ್ತದೆ. ೫ ಎಕರೆ ಇದ್ದಾಗ ಅದನ್ನು ರಿಜಿಸ್ಟರ್ ಮಾಡಿದರೆ ಏನೂ 11E Sketch ಬೇಕಾಗುವುದಿಲ್ಲ. ನೀವು partition ಮಾಡಿದಾಗ ವ್ಯತ್ಯಾಸಗಳಾಗುತ್ತವೆಂದು 11E Sketch ಬೇಕು.

---

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೆ, single owner several numbers. ನಾನು ಕೇಳುತ್ತಿರುವುದು single owner ಇದ್ದಾಗ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನ್ಯಾಯಾಲಯದ ಆದೇಶವನ್ನು ತರಿಸಿ ನಾನೂ ಸಹ ಅದನ್ನು ಅಧ್ಯಯನ ಮಾಡುತ್ತಿದ್ದೇನೆ. ಒಳ್ಳೆಯದು ಏನಾಗಿದೆ ಅದನ್ನು ಮಾಡೋಣ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 359**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ೨೦೧೫ ರಿಂದ ೨೦೨೧ರವರೆಗೆ ಬೆಳ್ತಂಗಡಿ ಒಂದು ವಿಧಾನಸಭಾ ಕ್ಷೇತ್ರದ ಬಗ್ಗೆ ಮಾತ್ರ ಕೇಳಿದ್ದೇನೆ. ೨೦೧೫ ರಿಂದ ೨೦೧೮ರವರೆಗೆ ಅವರು ಅಂಕಿ-ಅಂಶವನ್ನು ಕೊಟ್ಟ ಪ್ರಕಾರ ೮,೬೯೦ ಮನೆಗಳು ಮಂಜೂರಾಗಿದೆ. ಅದರಲ್ಲಿ ೨೦೧೮ ರಿಂದ ೨೦೨೧ ಈ ಮೂರು ವರ್ಷಗಳಲ್ಲಿ ಮಂಜೂರಾದ ಮನೆಗಳು ಕೇವಲ ೭೩. ೨೦೧೫ ರಿಂದ ೨೦೨೦ ರವರೆಗೆ ಒಟ್ಟು ೮,೭೬೩ ರಲ್ಲಿ ೧೫೫೨ ಮನೆಗಳು ರದ್ದಾಗಿವೆ. ಯಾವ ಕಾರಣಕ್ಕಾಗಿ ರದ್ದಾಗಿದೆ ಎಂದು ಗೊತ್ತಿರಲಿಲ್ಲ ಮತ್ತು ೧೪೫೮ ಮನೆಗಳ ಕಾಮಗಾರಿ ಪ್ರಗತಿಯಲ್ಲಿದೆ. ಅಂದರೆ ಮನೆಗಳು ರದ್ದಾಗಿದ್ದು ಮತ್ತು ಪ್ರಗತಿಯಲ್ಲಿರುವುದು ಸೇರಿ ಒಟ್ಟು ೩,೦೧೦. ಅಂದರೆ ಸಂಪೂರ್ಣವಾಗಿರುವ ಮನೆಗಳು ಕೇವಲ ೫,೭೫೩ ಮಾತ್ರ. ಅದು ೨೦೧೫ ರಿಂದ ೨೦೧೮ರವರೆಗೆ ಸರ್ಕಾರ ಮಂಜೂರು ಮಾಡಿರುವಂಥ ಮನೆಗಳು. ಇದು ಕೇವಲ ಒಂದು ತಾಲ್ಲೂಕಿನ ಅಂಕಿ-ಅಂಶ ಮಾತ್ರ. ಈ ರೀತಿ ರಾಜ್ಯದಲ್ಲಿ ಎಷ್ಟಾಗಿದೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು ಮತ್ತು ೨೦೧೫ ರಿಂದ ೨೦೧೮ರವರೆಗೆ ಪಾವತಿಯಾದ ಹಣ ೬೨ ಕೋಟಿ ರೂ. ಈ ಮೂರು ವರ್ಷಗಳಲಿ ಕೇವಲ ೭ ಕೋಟಿ ರೂ. ಮಾತ್ರ ಪಾವತಿಯಾಗಿದೆ. ಅಂದರೆ ಬಡವರಿಗೆ ಕೊಡುವಂಥ ವಸತಿ ಸೌಲಭ್ಯದಲ್ಲಿ ಬಹಳಷ್ಟು ಕುಂಠಿತವಾಗಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇವತ್ತು ಮೂರು ವರ್ಷಗಳಿಂದ ಪಂಚಾಯಿತಿಗಳಿಗೆ ಯಾವುದೇ ಮನೆಗಳು ಮಂಜೂರಾಗಿಲ್ಲವೆಂದು ಪಂಚಾಯಿತಿಯ ಸದಸ್ಯರುಗಳು ಹೇಳುತ್ತಿದ್ದಾರೆ. ಮೊನ್ನೆ ನಡೆದಂಥ ಚುನಾವಣೆಯಲ್ಲಿ ಸದಸ್ಯರುಗಳದ್ದು ಅದೇ ಬೇಡಿಕೆ ಇದೆ. ಹಿಂದೆ ಸರ್ಕಾರವಿದ್ದಾಗ ಸಾವಿರಾರು ಮನೆಗಳು ಬರುತ್ತಿದ್ದವು, ಈಗ ಪಂಚಾಯಿತಿಗಳಿಗೆ ಮನೆಗಳೇ ಬರುತ್ತಿಲ್ಲವೆನ್ನುವ ಬೇಡಿಕೆ ಅವರಲ್ಲಿದೆ. ಬಹುಶಃ ಈ ಫಲಾನುಭವಿಗಳಿಗೆ ಸುಮಾರು ೩-೪ ವರ್ಷಗಳಿಂದ ನಿವೇಶನ ಮತ್ತು ಮನೆ ಸಿಕ್ಕಿಲ್ಲ. ಅತಿವೃಷ್ಟಿಯಿಂದ ಕುಸಿದ ಮನೆಗಳಿಗೂ ಸಹ ಹಣ ಪಾವತಿಯಾಗಿಲ್ಲ. ಭಾಗಶಃ ಕುಸಿದ ಮನೆಗಳು ಮತ್ತು ಸಂಪೂರ್ಣವಾಗಿ ಕುಸಿದ ಮನೆಗಳಿಗೂ ಸಹ ಹಣ ಪಾವತಿಯಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅತಿವೃಷ್ಟಿಯ ಸಂದರ್ಭದಲ್ಲಿ ಹಾವೇರಿಗೆ ಹೋದಂಥ ಸಂದರ್ಭದಲ್ಲಿ ೨೪ ಗಂಟೆಗಳಲ್ಲಿ ಹಣ ಮಂಜೂರಾತಿ ಮಾಡುವುದಾಗಿ ತಿಳಿಸಿರುತ್ತಾರೆ. ಆದರೆ ಏನಾಗಿದೆ ಎನ್ನುವ ಬಗ್ಗೆ ನಮಗೆ ಇನ್ನು ಕೂಡ ಮಾಹಿತಿ ಇಲ್ಲ. ೨೦೧೯-೨೦೨೦ರ ಮತ್ತು ೨೦೨೦-೨೦೨೧ನೇ ಸಾಲಿಗೆ ಅತಿವೃಷ್ಟಿಯಿಂದ ಹಾನಿಯಾದ ಮನೆಗಳಿಗೂ ಸಹ ಮನೆಗಳ ಹಂಚಿಕೆ ಬಾಕಿ ಇದೆ. ನಾವು ನಗರ ಸೌಂದರ್ಯೀಕರಣಕ್ಕೆ, ಸ್ಮಾರ್ಟ್ ಸಿಟಿಗಳಿಗೆ ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡುತ್ತೇವೆ. ಇತ್ತೀಚೆಗೆ ಬಿಡಿಎ ಕಾಂಪ್ಲೆಕ್ಸ್‌ನ್ನು ಹೊಡೆದು ಸಾವಿರಾರು ಕೋಟಿ ರೂಪಾಯಿಯಲ್ಲಿ ಹೊಸ ಕಟ್ಟಡ ಕಟ್ಟುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. ಆದರೆ ಬಡವರಿಗೆ ಸಿಗುವಂತಹ ಮನೆ ಅಥವಾ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿವೇಶನ ಅವನ ಜೀವನದಲ್ಲಿ ಒಮ್ಮೆ ಸಿಗುವಂಥದ್ದು. ಅದು ಸಿಕ್ಕಿದರೆ ಅವನಿಗೆ ಆಶ್ರಯ ಸಿಕ್ಕಿದಂತಹ ಒಂದು ದೊಡ್ಡ ಸಂತೋಷ ಅವನಿಗೆ ಆಗುತ್ತದೆ. ನನ್ನ ಬೇಡಿಕೆ ಏನೆಂದರೆ, ಬಡವರ ಮೂಲ ಸೌಕರ್ಯ ಗೃಹ ನಿರ್ಮಾಣ, ಪಡಿತರ ಮತ್ತು ಕುಡಿಯುವ ನೀರು, ಈ ವಿಚಾರಗಳ ಬಗ್ಗೆ ಸರ್ಕಾರ ವಿಳಂಬ ಧೋರಣೆ ಮಾಡಬಾರದು. ಈ ನಿಟ್ಟಿನಲ್ಲಿ ಸರ್ಕಾರ ಸಕರಾತ್ಮಕವಾಗಿ ಸ್ಪಂದಿಸಬೇಕೆಂದು ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

(ಮುಂದು)

1096/15-12-2021/12-10/bkp-rn

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ಬಸವ ವಸತಿ ಯೋಜನೆಯಲ್ಲಿ ಒಟ್ಟಾರೆಯಾಗಿ 2015 ರಿಂದ 2021ರವರೆಗೆ 8763 ಮನೆಗಳು ಮಂಜೂರಾಗಿವೆ. ಯಾವ್ಯಾವುದು ಎಷ್ಟೆಷ್ಟು ಆಗಿದೆ ಎನ್ನುವ ಬಗ್ಗೆ ಸಹ ಮಾಹಿತಿಯನ್ನು ಕೊಟ್ಟಿದ್ದೇನೆ. ಇಲ್ಲಿಯವರೆಗೆ ಪೂರ್ಣಗೊಂಡಿರುವಂತಹದ್ದು 5705. ಪ್ರಗತಿಯಲ್ಲಿರುವಂತಹ ಮನೆಗಳು 1458 ಇದೆ. ಮತ್ತೆ ಇಲ್ಲಿಯವರೆಗೆ 88 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ನಾನು ಒಂದು ವಿಷಯವನ್ನು ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ತಾವು ಯಾವ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುತ್ತೀರಿ, ಆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂತಹ ಯಾವ ಮನೆಗಳು ಯಾವ ಯಾವ ಹಂತದಲ್ಲಿ ಇದೆ, ಅದನ್ನು ಕೂಡ ಈಗಾಗಲೇ ಕಳುಹಿಸಿ ಕೊಡುತ್ತಿದ್ದೇನೆ. ಮತ್ತೆ ಇಡೀ ರಾಜ್ಯದಲ್ಲಿ 6800 ಎಕರೆಗೂ ಮೇಲ್ಪಟ್ಟ ಜಮೀನು ನಮ್ಮ ವ್ಯಾಪ್ತಿಯಲ್ಲಿದೆ ಇದು ಎಲ್ಲೆಲ್ಲಿ ಇದೆ, ಏನು ಎನ್ನುವುದರ ಮಾಹಿತಿಯನ್ನು ಕೂಡ ಕೊಟ್ಟಿದ್ದೇವೆ . ವಸತಿ ಎನ್ನುವುದು ಪ್ರತಿಯೊಬ್ಬರಿಗೂ ಅವಶ್ಯಕತೆ ಇರುವಂತಹದ್ದು. ಇತ್ತೀಚೆಗೆ ತಾವು ಯಾವುದೇ ಮನೆಗಳನ್ನು ಕೊಡುತ್ತಿಲ್ಲವೆಂದು ಹೇಳಿದ್ದೀರಿ. ಈಗಾಗಲೇ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾದ ಮೇಲೆ ೫ ಲಕ್ಷ ಮನೆಗಳನ್ನು ಕೊಡುವುದಕ್ಕೆ ಸರ್ಕಾರದ ಆದೇಶವಾಗಿ, ಪ್ರತಿಯೊಬ್ಬ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಯಾವ ಯಾವ ಪಂಚಾಯಿತಿಗೆ 30,40,50. ಮನೆಗಳನ್ನು ಯಾವ ಪಂಚಾಯಿತಿಯಲ್ಲಿ ತುಂಬಾ ಜಾಸ್ತಿ ಇದೆ, ಆದ್ಯತೆಯಲ್ಲಿ ಅವಶ್ಯಕತೆ ಇರತಕ್ಕಂತಹವರಿಗೆ ಮನೆಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದು, ಜನವರಿ 25-30ನೇ ತಾರೀಖಿನೊಳಗಡೆ ಆ ಪಟ್ಟಿಯನ್ನು ಕಳುಹಿಸಿದ ತಕ್ಷಣವೇ ಜಿಪಿಎಸ್ ವ್ಯವಸ್ಥೆಯನ್ನು ಮಾಡುತ್ತೇವೆ. ಮೊನ್ನೆ ನಿಮ್ಮ ಬೆಳ್ತಂಗಡಿ ಶಾಸಕರು ಬಂದಿದ್ದರು 2000 ಕ್ಕೂ ಹೆಚ್ಚಿನ ಮನೆಗಳಿಗೆ ಈಗಾಗಲೇ ಕಾರ್ಯಾದೇಶ ಮಾಡಿ 16ನೇ ತಾರೀಖು ನಂತರ ಕೊಡುತ್ತಿದ್ದೇವೆ.

---

ಸನ್ಮಾನ್ಯ ಸಭಾಪತಿಯವರೆ, ನಾವು ಈ ಮನೆಗಳನ್ನು ಕಟ್ಟಿಕೊಡುವುದಲ್ಲ, ಅವರಿಗೆ ದುಡ್ಡನ್ನು ಬಿಡುಗಡೆ ಮಾಡುವಂತಹದ್ದಾಗಿದೆ. ಇನ್ನೊಂದು ಕೆಲಸವನ್ನು ನಾವು ಮಾಡುತ್ತಿರುವುದೇನೆಂದರೆ 3-4 ಕಂತು ಆದ ಮೇಲೆ ಆತ 100 ರೂಪಾಯಿಗಳ ಛಾಪಾ ಕಾಗದದಲ್ಲಿ ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ಆ ಮನೆಯನ್ನು ಬೋಗ್ಯ ಮಾಡಬೇಕಾಗಿತ್ತು. 100 ರೂಪಾಯಿ ಛಾಪಾ ಕಾಗದದಲ್ಲಿ ಭೋಗ್ಯ ಮಾಡಿಕೊಡಲು ಸಬ್-ರಿಜಿಸ್ಟ್ರಾರ್ ಕಚ್ಚೇರಿಗೆ ಹೋದರೆ ಅಲ್ಲಿ 4-5 ಸಾವಿರ ರೂಪಾಯಿಗಳು ಲಂಚದ ರೂಪದಲ್ಲಿ ಹೋಗುತ್ತಿತ್ತು. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ ಕುಳಿತುಕೊಂಡು ಚರ್ಚೆ ಮಾಡಿ ಇದನ್ನು ಮಾಡುವುದೇ ಬೇಡ. 1,20,000 ರೂಪಾಯಿಗಳನ್ನು ಕೊಟ್ಟು ಅದನ್ನು ಅಡಮಾನ ಇಟ್ಟುಕೊಂಡು ಇದು ಯಾವುದೋ ಒಂದು ಹಳೆಯ ಪದ್ಧತಿ ಎಂದು ಹೇಳಿ ಅದನ್ನೂ ಕೂಡ ಮನ್ನಾ ಮಾಡತಕ್ಕಂತಹ ಕೆಲಸವನ್ನು ಮಾಡಿ ಈಗಾಗಲೇ ಕಾರ್ಯಾದೇಶವನ್ನು ಹೊರಡಿಸಿದ್ದೇವೆ. ನನಗೆ ತಿಳಿದಮಟ್ಟಿಗೆ ಕರ್ನಾಟಕದ 224 ವಿಧಾನಸಭಾ ಕ್ಷೇತ್ರಗಳಲ್ಲಿನ 188-190 ಕ್ಷೇತ್ರಗಳು ಗ್ರಾಮೀಣ ಭಾಗದಲ್ಲಿ ಇರಬಹುದು, ಅಥವಾ ನಗರ ಪ್ರದೇಶದಲ್ಲಿರಬಹುದು ಎಲ್ಲಕ್ಕೂ ಸೇರಿ 5 ಲಕ್ಷ ಮನೆಗಳಿಗೆ ನಾವು ಈಗಾಗಲೇ ಸುತ್ತೋಲೆಯನ್ನು ನೀಡಿದ್ದೇವೆ. 5 ಲಕ್ಷ ಮನೆಗಳನ್ನು ಯಾರು ಯಾರಿಗೆ ಎಷ್ಟೆಷ್ಟು ಅವಶ್ಯಕತೆ ಇದೆ, ಮೊದಲು ಕೊಡುತ್ತಿತ್ತು, ಎಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕೊಟ್ಟಾಗ ಸಾಮಾನ್ಯ ವರ್ಗದವರಿಗೆ ಮನೆ ಕೊಡಲಿಕ್ಕೆ ಆಗುತ್ತಿರಲಿಲ್ಲ. ಈ ಬಾರಿ ಬಸವ ವಸತಿ ಯೋಜನೆಯಡಿಯಲ್ಲಿ ಮೂರುವರೆ ಲಕ್ಷ ಮನೆಗಳನ್ನು ಕ್ರೋಢಿಕರಿಸಿ ಇಷ್ಟು ಹಣವನ್ನು ಸಹ ರಾಜ್ಯ ಸರ್ಕಾರವೇ ಭರಿಸುವಂತಹ ಕೆಲಸವನ್ನು ಮಾಡಿದ್ದೇವೆ. ತಾವು ಇಲ್ಲಿಯವರೆಗೂ ಮನೆಗಳನ್ನು ಕೊಟ್ಟಿಲ್ಲವೆಂದು ಹೇಳಿದ್ದೀರಿ. ನಿನ್ನೆ ಸಹ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುವ ಸಮಯದಲ್ಲಿ ನಾನು ಮಾತನಾಡಿದ್ದೇನೆ. ಒಂದು ವಿಚಾರವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಗೌರವಾನ್ವಿತ ಹಿರಿಯ ಸದಸ್ಯರುಗಳಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ಯಾವ ಒಂದು ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದೀರಿ, ತಾವು ಎಂಎಲ್‌ಸಿಯಾದಾಗ ಒಂದೊಂದು ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆ ಕ್ಷೇತ್ರದ ವ್ಯವಸ್ಥೆಗೆ ಅನುಗುಣವಾಗಿ ಏನು ನಾವು ಶಾಸಕರನ್ನು ಪರಿಗಣಿಸುತ್ತೇವೆ ಅದೇ ರೀತಿ ವಿಧಾನ ಪರಿಷತ್ತಿನ ಸದಸ್ಯರಿಗೂ ಕೂಡ ಪರಿಗಣಿಸುವಲ್ಲಿ ತೀರ್ಮಾನ ಮಾಡಿ ಈಗಾಗಲೇ ಈ ಸಂಬಂಧ ಸುತ್ತೋಲೆಯನ್ನು ಕೂಡ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ಸಿ.ಇ.ಓಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಇವತ್ತು ಉಳಿದುಕೊಂಡಿರುವ ಮನೆಗಳು ಏನಿವೆ , ಇದನ್ನು ಕೂಡ ನಾವು ಕಟ್ಟಲೇ ಬೇಕೆಂದು ಹೇಳಿ, ಯಾರು ಅರ್ಧಂಬರ್ಧ ಮನೆಗಳನ್ನು ಕಟ್ಟಿರುತ್ತಾರೆ ಅವರಿಗೆ ಒಂದೆರಡು-ಮೂರು ನೋಟೀಸ್ ಕೊಟ್ಟಿದ್ದೇವೆ. ಬೇರೆಯವರು 1,20,000 ರೂಪಾಯಿಗಳಲ್ಲಿ ಮನೆ ಕಟ್ಟಲಿಕ್ಕೆ ಸಾಧ್ಯವಿಲ್ಲ. ಸರ್ಕಾರವು ಸಹ ಇದಕ್ಕಿಂತ ಜಾಸ್ತಿ ಕೊಡುವ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಪರಿಸ್ಥಿತಿಯಲ್ಲಿ ಇರುವುದಿಲ್ಲ. ಅದಕ್ಕೋಸ್ಕರವಾಗಿ ಹಂತ ಹಂತವಾಗಿ ಕಟ್ಟುವಂತಹದ್ದು ಒಂದು, ಅಡಮಾನವನ್ನು ವಿಲೇ ಮಾಡುವುದು ಬೇಡ ಎನ್ನುವುದು ಒಂದು. ಇನ್ನು ಮುಂದಕ್ಕೆ ಈ 5 ಲಕ್ಷ ಮನೆಗಳನ್ನು ಏನು ಮಾಡುತ್ತಿದ್ದೇವೆ ಎಂದರೆ, ಇದಕ್ಕೆ ಕಾರ್ಯಾದೇಶ ಕೊಟ್ಟ ನಂತರ ಮೊದಲು ಏನು ಮಾಡುತ್ತಿದ್ದೇವೆಂದರೆ ಪೌಂಡೇಷನ್ ಹಾಕಿದ ನಂತರ ಅವನು ಅರ್ಜಿ ಹಾಕಬೇಕಾಗಿತ್ತು. ಆ ಪೌಂಡೇಷನ್ ಹಾಕುವ ಮುಂಚಿತವಾಗಿ ಯಾರ ಹತ್ತಿರವಾದರೂ 3-5% ಗೆ 10-15 ಸಾವಿರ ರೂಪಾಯಿಗಳನ್ನು ಬಡ್ಡಿಗೆ ತರುತ್ತಿದ್ದರು. ಅದು ಬೇಡವೆಂದು ಹೇಳಿ ಕಾರ್ಯಾದೇಶ ಆದ ತಕ್ಷಣವೇ ಅವರ ಅಕೌಂಟ್‌ಗೆ 40 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡುವುದು, ಕೇವಲ 4 ಕಂತು ಇದ್ದುದನ್ನು 3 ಕಂತಿಗೆ ಮಾಡುವುದಾಗಿದೆ. ಈ 3 ಕಂತನ್ನು ಕೂಡ ಒಂದೇ ವರ್ಷದಲ್ಲಿ ಮುಗಿಸುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಆರ್ಥಿಕ ಇಲಾಖೆಗೆ ಸೂಚನೆ ಕೊಟ್ಟಿದ್ದಾರೆ. ನಮಗೂ ತಿಳಿಸಿದ್ದಾರೆ. ಇನ್ನು ಉಳಿದಿರತಕ್ಕಂತಹ ಐದೂವರೆ-ಆರು ಲಕ್ಷ ಮನೆಗಳು ಮತ್ತು ಈ 5 ಲಕ್ಷ ಮನೆಗಳನ್ನೂ ಕೂಡ ನಾವು ತ್ವರಿತಗತಿಯಲ್ಲಿ ಮುಗಿಸುವಂತಹ ಕೆಲಸವನ್ನು ಮಾಡುವುದಕ್ಕೆ ಇಚ್ಛೆ ಪಟ್ಟಿದ್ದೇವೆ. 2019 ರಲ್ಲಿ ಏನು ಒಂದು ಲಕ್ಷ ಮೂವತ್ನಾಲ್ಕು 34 ಮನೆಗಳಿಗೆ ಸುಮಾರು 2018 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೆ, ಒಂದು ವಿಷಯವನ್ನು ಹೇಳಲಿಕ್ಕೆ ಬಯಸುತ್ತೇನೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸಮನ್ವಯತೆಯಲ್ಲಿ ಈ ಒಂದು ಇಲಾಖೆ ನಡೆಯುತ್ತಿದೆ. ಇದಕ್ಕೆ ಸ್ವತಂತ್ರವಾದ ಅಧಿಕಾರಿಗಳ ವ್ಯಾಪ್ತಿ ಇಲ್ಲ. ನಾವು ಪ್ರತಿಯೊಂದನ್ನು ಕೂಡ ರೆವಿನ್ಯೂ ಮೇಲೆ ಅವಲಂಬಿತವಾಗಬೇಕು. ಇಲ್ಲವೆಂದರೆ ಆರ್‌ಡಿಪಿಆರ್ ಮೇಲೆ ಅವಲಂಬಿತವಾಗಬೇಕು. ಅವರು ಕೊಡತಕ್ಕಂತಹ ಮಾಹಿತಿ ಆಗಿರುವುದರಿಂದ ನಾನು ಈ ಸದನದ ಎಲ್ಲಾ ನನ್ನ ಗೌರವಾನ್ವಿತ ಸದಸ್ಯರಿಗೆ ಮನವಿ ಮಾಡುತ್ತೇನೆ. ತಾವು ಆ ಕೆಡಿಪಿ ಮೀಟಿಂಗ್‌ನಲ್ಲೋ ಮತ್ತೊಂದರಲ್ಲಿ ಈ ವಿಚಾರ ಬಂದಂತಹ ಸಂದರ್ಭದಲ್ಲಿ ವಸತಿ ಇಲಾಖೆಗೂ ಕೂಡ ಸ್ವಲ್ಪ ಹೆಚ್ಚಿನ ಆದ್ಯತೆಯನ್ನು ಕೊಟ್ಟು ತಾಲ್ಲೂಕು ಮಟ್ಟದಲ್ಲಿ , ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳಿಗೂ ಕೂಡ ಸ್ವಲ್ಪ ಮಟ್ಟಿಗೆ ತಮ್ಮದೇ ಆದಂತಹ ಭಾವನೆಗಳನ್ನು ಹೇಳಿದರೆ ಈ ಮನೆಗಳನ್ನು ಮುಗಿಸಲಿಕ್ಕೆ ಬೇಗ ಮುಗಿಸುವುದಕ್ಕೆ ಅವಕಾಶಗಳು ಆಗುತ್ತದೆ. ಆ ನಿಟ್ಟಿನಲ್ಲಿ ದಯವಿಟ್ಟು ನಾನು ಬೆಳ್ತಂಗಡಿ ಎನ್ನುವುದು ಒಂದೇ ಅಲ್ಲ, ರಾಜ್ಯದ ಜಿಲ್ಲೆ, ತಾಲ್ಲೋಕು ಗಳಿಗೂ ಕೂಡ 5 ಲಕ್ಷ ಮನೆಗಳನ್ನು ತಕ್ಷಣವೇ ಜನವರಿ 25-30ನೇ ತಾರೀಖೊನೊಳಗಡೆ ಮುಗಿಸುವುದಕ್ಕೆ ಪಟ್ಟಿಯನ್ನು ಕಳುಹಿಸುವುದಕ್ಕೆ ಸೂಚನೆಯನ್ನು ಕೊಟ್ಟಿದ್ದೇವೆ. ಆದ್ದರಿಂದ ತಮ್ಮ ಕ್ಷೇತ್ರದಲ್ಲಿ ಯಾರಿಗೆ ಅರ್ಹತೆ ಇದೆ, ಅಂತಹವರಿಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಆಯಾ ಪಂಚಾಯಿತಿಯವರು ಆಯ್ಕೆ ಮಾಡಬೇಕಾಗಿದೆ, ರಾಜೀವ್ ಗಾಂಧೀಯವರು ಮಾಡಿರುವಂತಹ ಈ ಒಂದು ಕಾಯಿದೆಯಲ್ಲಿ ಆ ಪಂಚಾಯಿತಿ ವ್ಯವಸ್ಥೆಗೆ ಹೋಗಿ ಅಲ್ಲಿಂದ ಬರಬೇಕಾಗಿದೆ. ಕೇವಲ ನಾವು ಶಾಸಕರು ಇರಬಹುದು, ವಿಧಾನ ಪರಿಷತ್ತಿನ ಸದಸ್ಯರುಗಸಳು ಇದರ ಮೇಲುಸ್ತುವಾರಿಯನ್ನು ನೋಡಬೇಕಾಗುತ್ತದೆ. ಅಲ್ಲಿ ಏನಾದರೂ ತಪ್ಪಾಗಿದ್ದರೆ ತಕ್ಷಣ ಸರಿಪಡಿಸುವಂತಹ ಅಧಿಕಾರವನ್ನು ಕೂಡ ನಿಮ್ಮಗಳಿಗೆ ಕೊಟ್ಟಿದ್ದೇವೆ.

**ಸಭಾಪತಿಯವರು:-** ಶ್ರೀಯುತ ಸೋಮಣ್ಣನವರೆ, ಶಾಸಕರು ಎಂದು ಎಲ್ಲರಿಗೂ ಹೇಳಿ, ವಿಧಾನ ಪರಿಷತ್ತಿನ ಶಾಸಕರು ಎಂದು ಹೇಳಬೇಡಿ. ಶಾಸಕರು, ವಿಧಾನಸಭೆ ಮತ್ತು ವಿಧಾನ ಪರಿಷತ್ತು ಎಂದು ಹೇಳಿದ್ದೀರಿ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ಆಯಿತು, ಎರಡೂ ಕಡೆಯ ಶಾಸಕರು.

**ಶ್ರೀ ಕೆ. ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 5 ಲಕ್ಷ ಮನೆಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ಆದರೆ, ಈ 3ವರ್ಷದ ನಿಮ್ಮ ವಿಳಂಬದಿಂದಾಗಿ ಒಂದು ವಿಧಾನಸಭಾ ಕ್ಷೇತ್ರದಲ್ಲಿ ಎರಡೂವರೆ ಸಾವಿರ ಅರ್ಜಿಗಳಿವೆ ಎಂದು ಹೇಳುತ್ತಿದ್ದೀರಿ. ಈ 3 ವರ್ಷದಲ್ಲಿ ನೀವು ಮನೆಗಳನ್ನು ಕೊಟ್ಟಿದ್ದರೆ ಒಮ್ಮಲೆ ಇಷ್ಟೊಂದು ಅರ್ಜಿಗಳು ಬರಲಿಕ್ಕೆ ಅವಕಾಶ ಇರಲಿಲ್ಲ. ನೀವು ಮನೆಗಳನ್ನು ಕೊಟ್ಟದ್ದು ಮಾತ್ರವಲ್ಲ. ಇದರಲ್ಲಿ ನೀವು ಹಣ ಬಿಡುಗಡೆ ಮಾಡಿದ್ದು ಕೂಡ 3 ವರ್ಷಗಳಲ್ಲಿ 17 ಕೋಟಿ ರೂಪಾಯಿಗಳನ್ನು ಮಾತ್ರ ಮಾಡಿದ್ದೀರಿ. ೬೦ ಮನೆಗಳು ಮಾತ್ರ ಒಂದು ವಿಧಾನಸಭಾ ಕ್ಷೇತ್ರಕ್ಕೆ ಬಿಡುಗಡೆಯಾಗಿದೆ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೆ, ಹಣ ಬಿಡುಗಡೆ ಮಾಡುವುದು ಅವರ ಅಕೌಂಟ್‌ಗೆ ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಲಿಕ್ಕೆ ಬಯಸುತ್ತೇನೆ. ನಾವು ಯಾವುದೇ ಹಣವನ್ನು ಒಂದು ಮಾನದಂಡದ ಮೂಲಕ ಜಿಪಿಎಸ್ ಮಾಡಿದ್ದೇವೆ. Whistle off ಎಂದು ಮಾಡಿ ಯಾರ ಅಕೌಂಟ್‌ಗೆ ಹೋಗಬೇಕೋ ಅವರ ಅಕೌಂಟ್‌ಗೆ ಹಣವನ್ನು ಬಿಡುಗಡೆ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಪ್ರತಿಯೊಬ್ಬರಿಗೂ ಕೂಡ ಅಂದರೆ, ನಮ್ಮ ಎಲ್ಲಾ ಶಾಸಕರನ್ನು ಮತ್ತು ವಿಧಾನ ಪರಿಷತ್ತಿನ ಸದಸ್ಯರಿಗೆ ನಾನು ಮಾಹಿತಿಯನ್ನು ಕೊಡುತ್ತಲೇ ಇದ್ದೇನೆ. ಅದಕ್ಕೆ ನಾನು ವಿನಂತಿ ಮಾಡುವುದಿಷ್ಟೆ. ನಮ್ಮಲ್ಲಿ ಹಿಂದೆ ಇದ್ದಂತಹ ಸರ್ಕಾರ ೨೨ ಸಾವಿರ ಕೋಟಿ ರೂಪಾಯಿಗಳನ್ನು ಹಳೆಯ ಮನೆಗೆ ದುಡ್ಡು ಬಿಡುಗಡೆಯಾಯಿತು. ಸಮ್ಮಿಶ್ರ ಸರ್ಕಾರದಲ್ಲಿ ಕುಮಾರಸ್ವಾಮಿಯವರು ಏನು ಮಾಡಿದರು ಎಂದರೆ ಒಂದು ಲಕ್ಷ ಮೂವತ್ತು ಸಾವಿರ ರೂಪಾಯಿಗಳಂತೆ ನಿಗದಿ ಮಾಡಿ ಎರಡೂವರೆ-ಮೂರು ಸಾವಿರ ಕೋಟಿ

---

ರೂಪಾಯಿಗಳನ್ನು ಬಿಡುಗಡೆ ಮಾಡಿ ಸುಮ್ಮನೆ ಕೈತೊಳೆದುಕೊಂಡರು. ಇದರ logical end ಗೆ ಕೊನೆಯ ಪಕ್ಷ ಇದಕ್ಕೆ ಯಾವ ರೀತಿ ಒಂದು ಅಂದರೆ, ಯಾವುದು ಏನು ಎನ್ನುವುದರಲ್ಲಿ ಒಂದು ರೀತಿಯ ಗೊಂದಲವಿತ್ತು. ಇದೆಲ್ಲವನ್ನು ಕಂಪ್ಲೀಟ್ ಮಾಡಿ ಇವತ್ತು ನಾವು ಹಿಂದೆ ಇದ್ದಂತಹ ಯಾವುದೇ ಮನೆಗಳನ್ನೂ ಕೂಡ ಯಾವುದು ಬ್ಲಾಕ್ ಆಗಿದೆ. ಅದನ್ನು ಹೊರತುಪಡಿಸಿ ಆ ಮನೆಗಳಿಗೆ 4400 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟು 2 ಲಕ್ಷ 74 ಸಾವಿರ ಮನೆಗಳಾಗಿದೆ. ನಾನು ಈ ಸದನಕ್ಕೆ ನಿಖರವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಮ್ಮಲ್ಲಿ ಉಳಿದಿರುವಂತಹ ನಾಲ್ಕುವರೆ ಐದು ಲಕ್ಷ ಮನೆಗಳು ಮತ್ತು ಹೊಸದಾಗಿ ಬಂದಿರುವಂತಹ ಮನೆಗಳನ್ನು ಕೂಡ ನಾವು 2022 ಡಿಸೆಂಬರ್ ಒಳಗಡೆ ಮುಗಿಸಬೇಕೆನ್ನುವ ಕಾರ್ಯ ಸೂಚಿಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಹಣ ಬಿಡುಗಡೆ ಮಾಡುವಾಗ ಅಲ್ಲಿಯ ಪಿಡಿಓಗಳು ಮತ್ತು ಇ.ಓ.ಗಳು ಅವರು ನಮಗೆ ಏನು ಮಾಹಿತಿಯನ್ನು ಕೊಡುತ್ತಾರೆ, ಕೊಟ್ಟ ಒಂದು ಗಂಟೆಯೂ ಕೂ ಡ ನನ್ನ ಕಚೇರಿಯಲ್ಲಿ ದುಡ್ಡನ್ನು ಬಿಡುಗಡೆ ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆ. ಇವತ್ತು ಯಾರು ಬೇಕಾದವರೂ ಬಂದು ಅಲ್ಲಿ ನೋಡಬಹುದು. Whistle off ಮಾಡಿದ್ದೇವೆ. GPS ಮಾಡಿದ್ದೇವೆ. ನಿಮ್ಮ ತಾಲ್ಲೂಕಿಗೆ ಒಂದು ಕೋಡ್ ಕೊಟ್ಟಿದ್ದೇವೆ. ಯಾವ ಪಂಚಾಯಿತಿಯಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ಪ್ರತಿಯೊಂದು ಮಾಹಿತಿಯನ್ನು ಕೊಡುತ್ತೇವೆ. ನಾನು ತಮ್ಮ ಮೂಲಕ ವಿನಂತಿ ಮಾಡುವುದೇನಂದರೆ ಈ 5 ಲಕ್ಷ ಮನೆಗಳು ಹಿಂದೆ ಉಳಿದಿರುವಂತಹ ಮನೆಗಳು. ಕೊಡುವಾಗ ದಯವಿಟ್ಟು ಸ್ವಲ್ಪ ಪಂಚಾಯಿತಿಗೆ ಹೋದರೆ ನಿಮಗೆ ನಿಜವಾದ ವಾಸ್ತವಾಂಶ ಗೊತ್ತಾಗುತ್ತದೆ. ಆ ಕೆಲಸವನ್ನು ನಾವೆಲ್ಲರೂ ಸೇರಿ ಮಾಡಬೇಕಾಗುತ್ತದೆ.

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೆ, ಚುನಾವಣೆಗೆ ಇನ್ನು ಒಂದೂವರೆ ವರ್ಷ ಇದೆ. ಬಹುಶಃ 5 ಲಕ್ಷ ಮನೆಗಳನ್ನು 2022ನೇ ಇಸವಿಯಲ್ಲಿ ಮುಗಿಸಿದರೆ ತಮಗೆ ಧನ್ಯವಾದಗಳು.

(ಮುಂದು)

(1097) 15.12.2021 12.20 ಎಸ್‌ವಿ-ವಿಕೆ

(ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ 305**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಾಂತಾರಾಮ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ. ನಾನು ಬುಡಕಟ್ಟು ಸಮುದಾಯಗಳಿಗೆ ಮನೆ ಕೊಡಲು ಇರುವ ಯೋಜನೆಗಳು ಯಾವುವೆಂದು ಕೇಳಿರಲಿಲ್ಲ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಯೋಜನೆಗಳ ಹೆಸರುಗಳನ್ನು ಕೊಟ್ಟಿದ್ದಾರೆ. ಇದು ನಮಗೆ ತಿಳಿದಿರುವಂತಹದ್ದೇ ಆಗಿದೆ. ಇಷ್ಟೆಲ್ಲಾ ಯೋಜನೆಗಳಿದ್ದರೂ ಕಳೆದ ಮೂರು ವರ್ಷಗಳಿಂದ ವಿಶೇಷವಾಗಿ ಕರ್ನಾಟಕದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಬುಡಕಟ್ಟು ಸಮುದಾಯದ ಜನರಿಗೆ ವಾಸಿಸಲು ಮನೆಯಿಲ್ಲದೆ ಪರದಾಡುವ ಪರಿಸ್ಥಿತಿ ಇದೆ. ಆ ಕುರಿತು ನಾನು ಪ್ರಶ್ನೆಯನ್ನು ಕೇಳಿದ್ದೆನು. ಈಗಾಗಲೇ ಮಾನ್ಯ ಹರೀಶ್ ಕುಮಾರ್ ಅವರ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾದ ಸಂದರ್ಭದಲ್ಲಿ ಮಾನ್ಯ ಸಚಿವರು ಸಾಕಷ್ಟು ಹೇಳಿದ್ದಾರೆ. ಆದರೂ ನಾನು ಮಾನ್ಯ ಸಚಿವರಲ್ಲಿ ಮತ್ತೊಮ್ಮೆ ಮನವಿ ಮಾಡುತ್ತೇನೆ. ಬೇರೆ ಬೇರೆ ಕಾರಣಗಳಿಂದಾಗಿ ಬುಡಕಟ್ಟು ಸಮುದಾಯದವರಿಗೆ ಮನೆಗಳು ತಲುಪುವುದಿಲ್ಲ. ಮನೆ ಸಿಗದಿರುವ ಕುಟುಂಬಗಳು ಸಾಕಷ್ಟು ಇವೆ. ಮನೆ ಪಡೆದಿರುವವರು ಕೂಡ ಅರ್ಧ ಮನೆ ಮಾತ್ರವೇ ಆಗಿದೆ. ಕಾರಣ ಏನೆಂದರೆ ಸಾಮಾನ್ಯವಾಗಿ ನಮ್ಮ ಬುಡಕಟ್ಟು ಸಮುದಾಯದವರು ಹೋಗಿ ಗ್ರಾಮ ಪಂಚಾಯಿತಿಯಲ್ಲಿ ಕೇಳಿದರೆ ಮನೆಗಳು ಇಲ್ಲ ಎಂದು ಹೇಳುತ್ತಾರೆ. ಅರಣ್ಯ ಇಲಾಖೆಯ ಜಾಗವಿರಬಹುದು, ಅರಣ್ಯ ಹಕ್ಕುಪತ್ರ ಕೊಡಲಿಕ್ಕೆ ಬರುವುದಿಲ್ಲ ಎನ್ನುವ ಕಾರಣ ಇರಬಹುದು, ಹಾಡಿ, ಪೋಡಿ, ಸೊಪ್ಪಿನ ಬೆಟ್ಟ ಇರುವಂತಹ ಜಾಗಗಳಲ್ಲಿ ಮನೆಗಳನ್ನು ಕೊಡಲಿಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಜೊತೆಗೆ ಈಗಾಗಲೇ ಮೂರು ವರ್ಷದ ಹಿಂದೆ ಮಂಜೂರಾದಂತಹ ಮನೆಗಳು ನಿರ್ಮಾಣದ ಹಂತದಲ್ಲಿದ್ದವೋ, ಅವುಗಳು ಮುಕ್ತಾಯವಾಗಲಿಕ್ಕೆ ಬಿಲ್‌ಗಳು ಆಗದೆ ಇರುವ ಕಾರಣದಿಂದ ಮನೆಗಳು ಅರ್ಧಕ್ಕೇ ನಿಂತಿವೆ. ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಕೃತಿ ವಿಕೋಪಕ್ಕೆ ತುತ್ತಾದ ಅನೇಕ ಕಾರಣಗಳಿವೆ. ನಾನು ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯೊಂದಿಗೆ ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಮೈಸೂರು, ಚಾಮರಾಜನಗರ ಉಲ್ಲೇಖ ಮಾಡಬಯಸುತ್ತೇನೆ. ಇಂದಿಗೂ ನಾವು ಅಲ್ಲಿಗೆ ಹೋದರೆ ಪ್ಲಾಸ್ಟಿಕ್ ಹೊದಿಕೆಯ ಗುಡಿಸಲುಗಳಲ್ಲಿ ವಾಸ ಮಾಡುತ್ತಿರುವುದನ್ನು ಕಾಣಬಹುದು. ನಾನು ಕಳೆದ ಅಧಿವೇಶನದಲ್ಲಿಯೂ ಇದರ ಬಗ್ಗೆ ಉಲ್ಲೇಖ ಮಾಡಿದ್ದೆನು. ಕಳೆದ ಬಾರಿ ನಾನು ಕೇಳಿದಾಗ ಮಂಜೂರಾಗಿದ್ದು, ಸದ್ಯದಲ್ಲಿಯೇ ಬರುತ್ತವೆ ಎಂದು ಮಾನ್ಯ ಸಚಿವರು ಹೇಳಿದ್ದರು. ಈವರೆವಿಗೂ ಅದು ಬರದೆ ಇರುವುದರಿಂದ ಜನವರಿ ತಿಂಗಳೊಳಗೆ ಐದು ಲಕ್ಷ ಮನೆಗಳ ಆಶ್ವಾಸನೆಯನ್ನು

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೊಟ್ಟಿದ್ದಾರೆಯೋ ಅದು ಸಮಯಕ್ಕೆ ಸರಿಯಾಗಿ ಬಂದರೆ ಒಳ್ಳೆಯದಾಗುತ್ತದೆ. ಬುಡಕಟ್ಟು ಸಮುದಾಯದ ಹಾಡಿಗಳು, ಪೋಡಿಗಳು ಇರುವ ಕಡೆಗಳಲ್ಲಿ ಆದಷ್ಟು ಬೇಗ ಮನೆಗಳಾಗಬೇಕು ಎಂದು ಸಚಿವರಲ್ಲಿ ಮನವಿ ಮಾಡುತ್ತೇನೆ. ಸ್ವಾತಂತ್ರ್ಯ ಬಂದು 74-75 ವರ್ಷಗಳಲ್ಲಿ ಕಳೆಯುತ್ತಾ ಬಂದರೂ ಕೂಡ ಪ್ಲಾಸ್ಟಿಕ್ ಹೊದಿಕೆಯಿರುವ ಮನೆಗಳಲ್ಲಿ, ಬಿದಿರಿನ ತಟ್ಟೆಯ ಮನೆಗಳಲ್ಲಿ ಬದುಕುತ್ತಿರುವ ಬುಡಕಟ್ಟು ಜನಾಂಗದವರನ್ನು ನೋಡುತ್ತಿದ್ದೇವೆ. ಆದ್ದರಿಂದ ಈ ವಿಷಯದ ಬಗ್ಗೆ ಗಮನ ಹರಿಸಬೇಕೆಂದು ಮಾನ್ಯ ಸಚಿವರಲ್ಲಿ ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಬುಡಕಟ್ಟು ಸಮಾಜದ ಕುರಿತು ಒಳ್ಳೆಯ ಅಂಶವನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದಿದ್ದಾರೆ. ಅವರು ತುಂಬಾ ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲಿ ನಿಕೃಷ್ಟ ರೀತಿಯಲ್ಲಿ ಬದುಕುತ್ತಿದ್ದಾರೆ. ಹೆಗ್ಗಡದೇವನಕೋಟೆ, ಹನೂರು ಮುಂತಾದ ಅನೇಕ ಕಡೆಗಳಲ್ಲಿ ನಾನು ಬುಡಕಟ್ಟು ಜನಾಂಗದವರೊಂದಿಗೆ ಸಾಕಷ್ಟು ಸುತ್ತಾಡಿದ್ದೇನೆ. ಇವರು ಎಸ್.ಟಿ. ಪ್ರವರ್ಗದಡಿಯಲ್ಲಿ ಬರುವುದರಿಂದ ನಾವು ಎಸ್.ಟಿ. ಜನಾಂಗದ ಅಡಿಯಲ್ಲಿಯೇ ಪರಿಗಣಿಸಬೇಕಾಗುತ್ತದೆ. ದೇವರಾಜ ಅರಸು ವಸತಿ ಯೋಜನೆಯಡಿಯಲ್ಲಿ ಮಾಡಬಹುದೇನೋ ಎಂದು ನಾನು ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಈ ಯೋಜನೆಯಡಿಯಲ್ಲಿ ಸುಮಾರು 65,000 ಮನೆಗಳನ್ನು ನಿರ್ಮಿಸಿ, ಚಿತ್ರದುರ್ಗ, ತುಮಕೂರು, ಬಳ್ಳಾರಿ, ದಕ್ಷಿಣ ಕನ್ನಡ ಮುಂತಾದ ಜಿಲ್ಲೆಗಳಲ್ಲಿ ನೀಡಲಾಗಿದೆ. ರಸ್ತೆ ಬದಿಯಲ್ಲಿ ಮಲಗುವವರಿಗೆ, ವಿಕಲಚೇತನರಿಗೆ, ಕುಷ್ಠರೋಗದಿಂದ ಗುಣಮುಖರಾದವರಿಗೆ, ಹೆಚ್.ಐ.ವಿ. ಸೋಂಕಿತರಿಗೆ, ಮಂಗಳಮುಖಿಯರಿಗೆ, ಲೈಂಗಿಕ ಕಾರ್ಯಕರ್ತೆಯರಿಗೆ, ದೇವದಾಸಿಯರಿಗೆ, ವಿಧವೆಯರಿಗೆ, ಜೀತದಿಂದ ಮುಕ್ತರಾದವರಿಗೆ, ಸಫಾಯಿ ಕರ್ಮಚಾರಿಗಳಿಗೆ, ದೌರ್ಜನ್ಯಕ್ಕೊಳಗಾದವರಿಗೆ, ಮತೀಯ ಗಲಭೆಗಳಿಂದ ಹಾನಿಗೊಳಗಾದವರಿಗೆ, ಅಲೆಮಾರಿ, ಅರೆ-ಅಲೆಮಾರಿ ಹಾಗೂ ಬುಡಬುಡಿಕೆ ಹೀಗೆ ಅನೇಕ ವರ್ಗಗಳಿಗೆ ನೀಡಿದ್ದು, ದೇವರಾಜ ಅರಸು ಯೋಜನೆಯಡಿಯಲ್ಲಿ ಇದನ್ನೂ ಕೂಡ ಪರಿಗಣಿಸಬೇಕೆಂಬ ಸಂದರ್ಭದಲ್ಲಿ ಬುಡಕಟ್ಟು ಸಮಾಜ ಎಸ್.ಟಿ. ಪ್ರವರ್ಗಕ್ಕೆ ಸೇರುತ್ತದೆ ಎಂದು ಇಲಾಖೆಯಲ್ಲಿ ತಿಳಿದು ಬಂದಿದೆ. ಇಡೀ ರಾಜ್ಯದಲ್ಲಿ ಪಂಚಾಯಿತಿಗಳಿಂದ ಕೊಡುವುದು ಮತ್ತೊಂದು, ಮಗದೊಂದು ಈ ಪ್ರಕ್ರಿಯೆಗಳು ನಡೆಯುತ್ತಿರುತ್ತದೆ. ಮಾನ್ಯ ಸಿ.ಎಂ.ಲಿಂಗಪ್ಪನವರು ಹೇಳಿದಂತೆ ಬುಡಕಟ್ಟು ಜನಾಂಗದವರು ಅತಿ ನಿಕೃಷ್ಟವಾಗಿ ಬದುಕುತ್ತಿರುವುದರಿಂದ ನಾನು ಇಂದೇ ಮಾನ್ಯ ಮುಖ್ಯಮಂತ್ರಿಗಳ ಬಳಿ ಮಾತನಾಡುತ್ತೇನೆ. ಮಾನ್ಯ ಶಾಂತಾರಾಮ್ ಬುಡ್ನ ಸಿದ್ದಿ ಅವರು ಹಾಗೂ ಇನ್ನಿತರ ನಾಲ್ಕು ಸದಸ್ಯರೊಂದಿಗೆ ಎಲ್ಲೆಲ್ಲಿ ಈ ರೀತಿಯಾಗಿ ಬುಡಕಟ್ಟು ಜನಾಂಗದವರು ಪ್ಲಾಸ್ಟಿಕ್ ಹೊದಿಕೆಯಡಿಯಲ್ಲಿ ವಾಸ ಮಾಡುತ್ತಿದ್ದಾರೆ ಆ ವಾಸ್ತವಾಂಶದ ಕುರಿತು ಪಂಚಾಯಿತಿಗಳಿಂದ ಅನುಮತಿ ಪಡೆದು 20000 ಮನೆಗಳಾದರೂ ಕೂಡ ಸರಿ. ಈಗ ನೀಡಲಾಗುತ್ತಿರುವ ರೂ.1,20,000ಗಳಿಗೆ ಇನ್ನೂ ರೂ.30,000ಗಳನ್ನು ಸೇರಿಸಿ ರೂ.1,50,000

ಗಳನ್ನು ಕೊಡುವ ಮೂಲಕ ನಾವು ಈ ಸಮಾಜಕ್ಕೆ ಒತ್ತು ಕೊಡಬೇಕಾಗಿದೆ. ಇದಕ್ಕೆ ಅವರು ಒಪ್ಪಿದರೆ ನಾನು ನಾಳೆಯೇ ಮಾನ್ಯ ಮುಖ್ಯಮಂತ್ರಿಯವರ ಬಳಿ ಮಾತನಾಡುತ್ತೇನೆ.

ಎರಡನೆಯದಾಗಿ ಯಾವುದೇ ನಾಗರಿಕ ಸಮಾಜವು ಬುಡಕಟ್ಟು ಜನಾಂಗದವರು ಎಲ್ಲಿ ವಾಸವಾಗಿದ್ದಾರೆಂದು ಪಂಚಾಯಿತಿಗೆ ಹೋಗಿ ತಿಳಿದುಕೊಳ್ಳುವಷ್ಟು ಮೇಲಕ್ಕೆ ಬಂದಿಲ್ಲ. ತುಳಿತಕ್ಕೆ ಒಳಪಟ್ಟಿರುವಂತಹ ಈ ಸಮಾಜಗಳಿಗೆ ನಾವು ಈ ರೀತಿಯಾಗಿ ಏನಾದರೊಂದು ಯೋಜನೆ ಮಾಡುವುದು ಒಳ್ಳೆಯದು. ಮಾನ್ಯ ಶಾಂತಾರಾಮ್ ಬುಡ್ನ ಸಿದ್ದಿ ಅವರು ಅವರ ಸಮಾಜದ ತಳಪಾಯವನ್ನು ತಿಳಿದವರಾಗಿದ್ದು, ಅಪಾರವಾದ ಗೌರವವನ್ನು ಹೊಂದಿದ್ದಾರೆ. ಬುಡಕಟ್ಟು ಜನಾಂಗದವರ ಬಳಿ ಹಣವಿಲ್ಲದಿರುವ ಕಾರಣ ರೂ.1,20,000ದ ಜೊತೆಗೆ ರೂ.30,000 ಸೇರಿಸಿ ರೂ.1,50,000ಗಳನ್ನು ಮಾಡಲು ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡಿ ಈ ಆದೇಶವನ್ನು ಮಾಡಿಸಲಾಗುವುದು. ನೆಲೆಯಿಲ್ಲದೆ, ಸೂರಿಲ್ಲದೆ ಯಾವುದೇ ಬಡವನೂ ಇರಬಾರದು ಇದು ನಮ್ಮ ನೆಚ್ಚಿನ ಪ್ರಧಾನಿಯವರ ಆಶಯವಾಗಿರುವುದರಿಂದ ಈ ಕೆಲಸವನ್ನು ಮಾಡಲಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಪ್ರಶ್ನೆ ಸಂಖ್ಯೆ 408**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಒಟ್ಟು ಗ್ರಾಮೀಣ ಹಾಗೂ ತಾಲ್ಲೂಕು ಪಶು ವೈದ್ಯಕೀಯ ಆಸ್ಪತ್ರೆಗಳು ಎಷ್ಟು? ಈ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದು ನನ್ನ ಪ್ರಶ್ನೆ. ಈ ಇಲಾಖೆಯಲ್ಲಿ ಸುಮಾರು 14 ಗ್ರೇಡಿನ ಹುದ್ದೆಗಳಿವೆ. ಒಟ್ಟು ಹುದ್ದೆಗಳಿರುವುದು 7363. ಇದುವರೆವಿಗೂ ಭರ್ತಿಯಾಗಿರುವುದು ಕೇವಲ 2100 ಮಾತ್ರ. 5263 ಹುದ್ದೆಗಳು ಖಾಲಿಯಿವೆ. ಪಶು ವೈದ್ಯಕೀಯ ಆಸ್ಪತ್ರೆಯನ್ನು ತೆರೆದು ಸಿಬ್ಬಂದಿ ಇಲ್ಲವೆಂದರೆ ಆ ಪಶುವಿಗೆ ಚಿಕಿತ್ಸೆಯನ್ನು ನೀಡುವವರು ಯಾರು? ಒಂದು ಹುದ್ದೆ, ಎರಡು ಹುದ್ದೆ ಅಥವಾ ನೂರೋ, ಸಾವಿರವೋ ಅಲ್ಲ. 5263 ಹುದ್ದೆಗಳು ಖಾಲಿಯಿವೆ. ಇಂದಿನವರೆವಿಗೂ ತಮ್ಮ ಇಲಾಖೆಯಲ್ಲಿ ತಾವು ಖಾಲಿಯಿರುವ ಈ ಹುದ್ದೆಗಳನ್ನು ಭರ್ತಿ ಮಾಡಲು ಪ್ರಯತ್ನವನ್ನು ಪಡಲಿಲ್ಲ. ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಕಳುಹಿಸಲಾಗಿದೆ ಎನ್ನುವ ಉತ್ತರವನ್ನು ನೀಡಿದ್ದಾರೆ. ಜೊತೆಗೆ ಇದನ್ನು ಯಾವಾಗ ತುಂಬಲಾಗುವುದು ಎನ್ನುವ ಮಾತನ್ನು ಕೂಡ ಹೇಳಲಿಲ್ಲ. ಆರ್ಥಿಕ ಇಲಾಖೆಗೆ ಯಾವತ್ತು ಕಳುಹಿಸಲಾಗಿದೆ, ಅಲ್ಲಿಂದ ಏನು ಉತ್ತರ ಬಂದಿದೆ ಎಂಬುದನ್ನು ಲಿಖಿತ ಉತ್ತರದಲ್ಲಿ ತಿಳಿಸಬೇಕಾಗಿತ್ತು. ಇದಕ್ಕೆ ಹಣ ಸಹಾಯ ಮಾಡಲಾಗುತ್ತದೆಯೇ, ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದೇ ಎಂಬ ಪ್ರಶ್ನೆಗಳಿಗೂ ಉತ್ತರವನ್ನು ನೀಡಬೇಕಾಗುತ್ತದೆ.

ನಾನು ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೇನೆ. ರಾಜ್ಯದ ಗಡಿರೇಖೆಗಳಲ್ಲಿ ಇರುವ ನೂರಾರು ಹಳ್ಳಿಗಳ ಜನರು ಸಂಪೂರ್ಣ ಹೈನುಗಾರಿಕೆಯನ್ನು ತಮ್ಮ ನಿತ್ಯ ಕಸುಬನ್ನಾಗಿಸಿಕೊಂಡಿದ್ದು, ಗಡಿ ಭಾಗದಲ್ಲಿವೆ ಎಂಬ ಕಾರಣದಿಂದ ಅಂತಹ ಗ್ರಾಮೀಣ ಪ್ರದೇಶಗಳಲ್ಲಿ ಪಶು ಚಿಕಿತ್ಸಾಲಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಮಾನ್ಯ ಸಚಿವರು ಇಲಾಖೆಯಲ್ಲಿ ಪಶು ಚಿಕಿತ್ಸಾಲಯಗಳ ಕೊರತೆ ಇದ್ದು, ಈ ಕೊರತೆ ನೀಗಿಸಲು ಹೊಸ ಪಶುಚಿಕಿತ್ಸಾಲಯಗಳ ಪ್ರಾರಂಭಿಸುವ ಕಾರ್ಯಕ್ರಮ ಪರಿಶೀಲನೆಯಲ್ಲಿದೆ. ಸದ್ಯ ಅವಶ್ಯಕತೆಗನುಗುಣವಾಗಿ ಆಯ್ದ ಗ್ರಾಮಗಳಲ್ಲಿ ಸಂಚಾರಿ ಪಶು ವೈದ್ಯಕೀಯ ಚಿಕಿತ್ಸಾಲಯದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಒಂದು ಉದಾಹರಣೆಯನ್ನು ಹೇಳುವುದಾದರೆ ತಮಿಳುನಾಡಿನ ಗಡಿ ಭಾಗವಾಗಿರುವ ಆನೇಕಲ್ ತಾಲ್ಲೂಕಿನಲ್ಲಿ ಒಣಕನಹಳ್ಳಿ ಎನ್ನುವ ಗ್ರಾಮವಿದೆ. ನಾನು ಆ ಗ್ರಾಮಸಭೆಗೆ ಹೋದಂತಹ ಸಂದರ್ಭದಲ್ಲಿ ಇಡೀ ಊರಿನ ಜನ ಹೈನುಗಾರಿಕೆಯ ಮೇಲೆ

ಅವಲಂಬಿತರಾಗಿರುವುದನ್ನು ನೋಡಿದ್ದೇನೆ. ಅಲ್ಲಿ ಪಶು ವೈದ್ಯಕೀಯ ಚಿಕಿತ್ಸಾಲಯ ಇಲ್ಲ. ಆದರೆ ಕೇಂದ್ರ ಸ್ಥಾನವಾದ ಬೆಂಗಳೂರಿನ ಬಳಿ ಹೆಬ್ಬಗೋಡಿ ಎನ್ನುವ ಗ್ರಾಮವಿದೆ.

(ಮುಂದು)

**(1098) 15-12-2021 (12.30) ಕೆಜಿ -VK**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ ನಾರಾಯಣಸ್ವಾಮಿ (ಮುಂದು):-**

ಈಗ ಆ ಗ್ರಾಮ municipality ಆಗಿ convert ಆಗಿದೆ. ಈಗ ಚುನಾವಣೆ ಸಹ ನಡೆಯುತ್ತದೆ. ಹೆಬ್ಬಗೋಡಿಯಲ್ಲಿ ಒಂದು ಪಶು ವೈದ್ಯಕೀಯ ಆಸ್ಪತ್ರೆ ಇದೆ. ನಾವು ಹೊಸದಾಗಿ ಪಶು ವೈದ್ಯಕೀಯ ಆಸ್ಪತ್ರೆಯನ್ನು ಪಡೆಯಲು ಸರ್ಕಾರಕ್ಕೆ ಪತ್ರ ಬರೆದೆವು. ಆದರೆ, ಸರ್ಕಾರ ಕೊಡುವುದಿಲ್ಲವೆಂದು ಹೇಳಿದೆ. ಹೆಬ್ಬಗೋಡಿ Electronic City ಯೊಳಗೆ ಇದೆ. ಅಲ್ಲಿಗೆ ಆಸ್ಪತ್ರೆ ಬೇಡ. ಆ ಆಸ್ಪತ್ರೆಯನ್ನು shift ಮಾಡಿ ಕೊಡಿ ಎಂದು ಕೇಳಿದ್ದೆ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಆ ಆಸ್ಪತ್ರೆಯನ್ನು shift ಮಾಡುವುದಕ್ಕೆ ಒಪ್ಪಿಕೊಂಡು ಅನುಮತಿಯನ್ನು ಸಹ ಕೊಟ್ಟರು. ಅಲ್ಲಿನ ಪಂಚಾಯಿತಿ ವ್ಯಾಪ್ತಿಯಲ್ಲಿರುವಂತಹ ಜಮೀನಿನಲ್ಲಿ ಆಸ್ಪತ್ರೆಯ ಕಟ್ಟಡವನ್ನು ಕಟ್ಟಿಸುವುದಕ್ಕೆ ಹಣವನ್ನು ಕೊಟ್ಟು ಒಣಕನಹಳ್ಳಿ ಗ್ರಾಮದಲ್ಲಿ foundation ಅನ್ನು ಸಹ ಹಾಕಿಸಿದ್ದೇನೆ. ಆದರೆ, ಮತ್ತೆ ಯಾವುದೋ ಕಾರಣಕ್ಕಾಗಿ ಅದನ್ನು withdraw ಮಾಡಿಕೊಂಡಿದ್ದಾರೆ. ಈಗ ಒಣಕನಹಳ್ಳಿ ಗ್ರಾಮಕ್ಕೆ ಆಸ್ಪತ್ರೆಯನ್ನು ಕೊಡುವುದಕ್ಕೆ ಆಗುತ್ತಿಲ್ಲ. ಬೆಂಗಳೂರು ಸಿಟಿ ಸೆಂಟರ್‌ನಲ್ಲಿರುವ ಹೆಬ್ಬಗೋಡಿಯಲ್ಲಿ ಆಸ್ಪತ್ರೆ ಇದೆ. ದಯಮಾಡಿ ಆ ಆಸ್ಪತ್ರೆಯನ್ನು shift ಮಾಡಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರು ಕೇಳಿರುವಂತಹ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಜಿಲ್ಲಾವಾರು ಕೊಟ್ಟಿದ್ದೇನೆ. ಮಾನ್ಯ ಸದಸ್ಯರೇ ನಮ್ಮ ಉತ್ತರವನ್ನು ಓದಿ ಹೇಳಿದ್ದಾರೆ. ಕಲ್ಯಾಣ ಕರ್ನಾಟಕ ಪ್ರದೇಶದ ಅಡಿಯಲ್ಲಿ ನೇಮಕಾತಿ ನಡೆಯುತ್ತಿದೆ. Foundation ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಬಾಕಿ ಹುದ್ದೆಗಳನ್ನು ಭರ್ತಿ ಮಾಡಲು under process ನಲ್ಲಿದೆ. ನಾನು ಸಚಿವನಾದ ಮೇಲೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಜೊತೆಗೂ ಸಹ ಈ ಬಗ್ಗೆ ಮಾತನಾಡಿದ್ದೇನೆ. ಈಗಲೂ ಸಹ 900 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಅನುಮತಿಗೆ ಕಡತವನ್ನು ಕಳುಹಿಸಲಾಗಿದೆ. ನಿನ್ನೆ ರಾತ್ರಿ ಸಹ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚೆ ಮಾಡಿದ್ದೇನೆ. ಪ್ರಾಣಿ ಸಾಕಾಣಿಕೆ ಕೇಂದ್ರ ಮತ್ತು ಗೋಹತ್ಯೆ ನಿಷೇಧ ಕಾಯ್ದೆಯನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾಡಲಾಗಿದೆ. ಆದರೆ, ನಮ್ಮ ಕಡೆಗೆ basement ಕಡಿಮೆ ಇದೆ. ವೈದ್ಯರು ಇಲ್ಲ. ಅದಕ್ಕೆ ನಾನು ಪದೇ ಪದೇ ವಿನಂತಿ ಮಾಡುತ್ತಿದ್ದೇನೆ. ನಾನು ಜಿಲ್ಲೆಗಳಿಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಎಲ್ಲರೂ ಪ್ರಭು ಬಿ.ಚವ್ಹಾಣ್‌ರವರೇ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀರಿ, ಆದರೆ, ವೈದ್ಯರು ಇಲ್ಲ ಎಂಬ ಒಂದೇ ಪ್ರಶ್ನೆ ಮಾಡುತ್ತಾರೆ. ಇದನ್ನು ಆದಷ್ಟು ಶೀಘ್ರದಲ್ಲಿಯೇ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ಮಾತನಾಡಿ ಪ್ರಯತ್ನ ಪಡುತ್ತೇನೆ. ಆದರೆ, ಇದಕ್ಕೆ time-bound ಕೊಡುವುದಕ್ಕೆ ಆಗುವುದಿಲ್ಲ. ಆ ಆಸ್ಪತ್ರೆಯನ್ನು shift ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಳೆದ ಬಾರಿಯೂ ಸಹ ಮಾಡುತ್ತೇವೆಂದು ಇದೇ ಉತ್ತರವನ್ನು ಹೇಳಿದ್ದಾರೆ. ಪಶು ವೈದ್ಯಕೀಯ ವೈದ್ಯರ ಸಂಖ್ಯೆಯನ್ನು ಏಕೆ ಹೆಚ್ಚಳ ಮಾಡಬಾರದು?

**ಸಭಾಪತಿಯವರು:-** ಇಟಗಿಯವರೇ, ತಾವು ಕುಳಿತುಕೊಳ್ಳಿ. ಸಚಿವರೇ, ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರು ಅನೇಕಲ್ ತಾಲ್ಲೂಕಿನಲ್ಲಿರುವ ಬಣಕನಹಳ್ಳಿ ಗ್ರಾಮಕ್ಕೆ ಪಶು ಆಸ್ಪತ್ರೆಯನ್ನು shift ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ತಾವು ಉತ್ತರ ಹೇಳಿ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ನಮ್ಮ ಅಧಿಕಾರಗಳ ಜೊತೆಗೆ ಮಾತನಾಡಿ ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:** ಮಾನ್ಯ ಸಭಾಪತಿಯವರೇ, ಪಶು ವೈದ್ಯರ ಸಂಖ್ಯೆಯನ್ನು ಹೆಚ್ಚು ಮಾಡುವಂತೆ ಮಾಡಬೇಕು.

**ಸಭಾಪತಿಯವರು:-** ಇಟಗಿಯವರೇ, ಎಂ.ನಾರಾಯಣಸ್ವಾಮಿಯವರು ಕೇಳುತ್ತಾರೆ. ತಾವು ಕುಳಿತುಕೊಳ್ಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕಳೆದ ಬಾರಿಯೂ ಸಹ ಇದೇ ಪ್ರಶ್ನೆಯನ್ನು ಕೇಳಿದಾಗಲೂ ಸಹ, ಮಾನ್ಯ ಸಚಿವರು ಇದೇ ಉತ್ತರವನ್ನು ಕೊಟ್ಟಿದ್ದರು. ಆದರೆ, ಇವತ್ತಿನವರೆಗೆ ಈ ಬಗ್ಗೆ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ಮಾನ್ಯ ಸಚಿವರು 900 ಹುದ್ದೆಗಳನು ಭರ್ತಿ ಮಾಡುವುದಕ್ಕೆ ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ ಎಂದು ಉತ್ತರ ನೀಡಿದ್ದಾರೆ. ಆದರೆ, ಈ ಇಲಾಖೆಯಲ್ಲಿ 5263 ಹುದ್ದೆಗಳು ಖಾಲಿ ಇವೆ.

**ಶ್ರೀ ಸಿ.ಸಿ.ಪಾಟೀಲ್(ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಉಳಿದ ಇಲಾಖೆಗಳಲ್ಲೂ ಸಹ ಹುದ್ದೆಗಳು ಖಾಲಿ ಇವೆ. ಮಾನ್ಯ ಸಚಿವರು ಬಹಳ ಪ್ರಾಮಾಣಿಕತೆಯಿಂದ ಕೆಲಸ

---

ಮಾಡುತ್ತಿದ್ದಾರೆ. ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆದುಕೊಂಡು ವೈದ್ಯರನ್ನು ಭರ್ತಿ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ದಯವಿಟ್ಟು, ತಾವು ಸಹಕರಿಸಬೇಕು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯ ನಮ್ಮ ದೇಶದಲ್ಲಿ ಹೈನುಗಾರಿಕೆಯಲ್ಲಿ 2ನೇ ಅಥವಾ 3ನೇ ಸ್ಥಾನದಲ್ಲಿದೆ. ಹೈನುಗಾರಿಕೆಯನ್ನು ನಂಬಿಕೊಂಡು ರೈತರು ಜೀವನ ನಡೆಸುತ್ತಿದ್ದಾರೆ. ಹಾಗಾಗಿ, ಪಶುಗಳಿಗೆ ಬರುವಂತಹ ರೋಗಗಳಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆಯನ್ನು ಕೊಡಲಿಲ್ಲವೆಂದರೆ, ಹಾಲಿನಲ್ಲಿ ಇಳುವರಿ ಕಡಿಮೆಯಾಗಿ ಪಶುಗಳು ಸಾಯಬಹುದು. ಈ ಕಾರಣಕ್ಕಾಗಿಯೇ ಪಶು ಚಿಕಿತ್ಸಾಲಯಗಳು ಬೇಕೆಂದು ಕೇಳುತ್ತಿದ್ದೇನೆ. ಈ ಹಿಂದೆ ಮಾನ್ಯ ಸಭಾಪತಿಯವರು ನನ್ನ ಸಹಾಯಕ್ಕೆ ಬಂದರು. ಅನೇಕಲ್ ತಾಲ್ಲೂಕಿನ ಒಣಕನಹಳ್ಳಿ ಗ್ರಾಮಕ್ಕೆ ಈ ಕೂಡಲೇ ಹೆಬ್ಬಗೋಡಿಯಲ್ಲಿರುವಂತಹ ಪಶುವೈದ್ಯಕೀಯ ಆಸ್ಪತ್ರೆಯನ್ನು shift ಮಾಡಿಕೊಟ್ಟರೆ ಸಾಕು. ಹೊಸ ಪಶು ವೈದ್ಯಕೀಯ ಆಸ್ಪತ್ರೆ ಕೊಡಬೇಡಿ. ಇದನ್ನು ಮಾಡಿಕೊಡಬೇಕು. ದಯಮಾಡಿ, ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, 275 ಪಶು ಸಂಜೀವಿನಿ 1962 Animal Mobile Medical Ambulance ಗಳನ್ನು ಶೀಘ್ರದಲ್ಲಿಯೇ ಕೊಡುತ್ತಿದ್ದೇವೆ. ಅದು under process ನಲ್ಲಿದೆ. ಪ್ರತಿಯೊಂದು ತಾಲ್ಲೂಕಿಗೆ ಕೊಡುತ್ತಿದ್ದೇವೆ. ನಮ್ಮ ರಾಜ್ಯದ ಇತಿಹಾಸದಲ್ಲಿ ಹಿಂದೆಯೂ ಆಗಿಲ್ಲ, ಮುಂದೆ ಆಗುತ್ತದೆಯೋ ಅಥವಾ ಇಲ್ಲವೋ ಹೇಳುವುದಕ್ಕೆ ಆಗುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಪಶು ಆಸ್ಪತ್ರೆಗಳ ಬಗ್ಗೆ ಮಾನ್ಯ ಸಚಿವರಿಗೆ ಪ್ರಶ್ನೆ ಕೇಳಿದ್ದೇನೆ. ಆದರೆ, ಮಾನ್ಯ ಸಚಿವರು Ambulance ಗಳ ಬಗ್ಗೆ ಹೇಳುತ್ತಿದ್ದಾರೆ. 275 ಪಶು ಸಂಜೀವಿನಿ Ambulance ಗಳನ್ನು ಯಾವಾಗ ಕೊಡುತ್ತಾರೆಂದು ಗೊತ್ತಿಲ್ಲ. ಆದರೆ, ಅದು ಸಹ ಕೇವಲ ಘೋಷಣೆಯಾಗಿ ಉಳಿಯುತ್ತದೆ ಅಷ್ಟೇ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ನಾನು ಸಿಬ್ಬಂದಿಯ ಮತ್ತು ಪಶು ಆಸ್ಪತ್ರೆಗಳ ಬಗ್ಗೆ ಹೇಳುತ್ತಿದ್ದೇನೆ. ನಾವು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ಅವರ ಪ್ರಶ್ನೆಗಳಿಗೆ ಉತ್ತರ ಹೇಳಿ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಆ ಆಸ್ಪತ್ರೆಯನ್ನು shifting ಮಾಡಿಕೊಡುತ್ತೇವೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಸಭಾಪತಿಯವರು:-** ಮಾನ್ಯ ಸಚಿವರೇ, ಆಯಿತು ಬಿಡಿ. ಮುಂದಿನ ಪ್ರಶ್ನೆ ಪ್ರಕಾಶ್ ಕೆ.ರಾಥೋಡ್‌ರವರದ್ದು.

**ಶ್ರೀ ಲಕ್ಷಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಸವದಿಯವರೇ, ಪ್ರಶ್ನೋತ್ತರ ವೇಳೆಯಲ್ಲಿ ಬೇರೆ ಯಾರ್ರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಇಲ್ಲಿ ಒಬ್ಬರಿಗೊಂದು ಒಬ್ಬರಿಗೊಂದು discrimination ಹೇಗೆ ಮಾಡಲಿ?

**ಶ್ರೀ ಲಕ್ಷಣ ಸಂಗಪ್ಪ ಸವದಿ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರು ಪಶು ಇಲಾಖೆಯಲ್ಲಿನ ಮೂಲಭೂತ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದಾರೆ. ನಾನು ಅದಕ್ಕೆ ಪೂರಕವಾಗಿ ಕೇಳುತ್ತೇನೆ. ಮಾನ್ಯ ಸಚಿವರು ಬಹಳ ಆಸಕ್ತಿವಹಿಸಿ ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ಎರಡು ಮಾತಿಲ್ಲ. ನಮ್ಮ ರಾಜ್ಯದಲ್ಲಿ ಪಶು ಸಂರಕ್ಷಣೆಯಾಗಬೇಕು, ಪಶುಗಳಿಗೆ ಆರೋಗ್ಯ ಕೊಡಬೇಕು ಎನ್ನುವಂತಹ ಕಳಕಳಿ ಇದೆ. ನಾನು ಪೀಠದಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ 5 ಪಶು ವೈದ್ಯಕೀಯ ಮಹಾ ಕಾಲೇಜುಗಳಿವೆ. ಸಮಸ್ಯೆ ಎಲ್ಲಿ ಉಂಟಾಗುತ್ತದೆ ಎಂದರೆ, ನೇಮಕಾತಿಯನ್ನು ಮಾಡಿಕೊಳ್ಳಲು ಕಾಲ್ ಮಾಡಿದಾಗ ಅಭ್ಯರ್ಥಿಗಳು ಸಿಗುತ್ತಿಲ್ಲ. ಇದಕ್ಕೆ ಕಾರಣ ಏನೆಂದರೆ, ನಮ್ಮ ರಾಜ್ಯದಲ್ಲಿ 5 ಪಶು ವೈದ್ಯಕೀಯ ಮಹಾ ಕಾಲೇಜುಗಳಿರುವುದರಿಂದ. ಮೊದಲನೆಯದಾಗಿ, ಈ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಶಿಕ್ಷಣ ಮುಗಿಸಿಕೊಂಡು ಹೊರಗಡೆ ಬಂದಾಗ ಕಾಲ್ ಮಾಡಿದರೆ ಮಾತ್ರ ಅಭ್ಯರ್ಥಿಗಳು ಸಿಗುವುದಕ್ಕೆ ಸಾಧ್ಯವಿದೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಆರು ತಿಂಗಳ ಹಿಂದೆ ಅಥಣಿಯಲ್ಲಿರುವಂತಹ ಪಶು ವೈದ್ಯಕೀಯ ಕಾಲೇಜು phase-II ಅನ್ನು ಪೂರ್ಣಗೊಳಿಸುವುದಕ್ಕೆ ಕಳೆದ ಆರು ತಿಂಗಳ ಹಿಂದೆ ಸರ್ಕಾರ 35 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಆದರೆ, ಅವರು ಇನ್ನೂ ಆ ಕಟ್ಟಡವನ್ನು ಕಟ್ಟುವುದಕ್ಕೆ ಸಿದ್ದತೆ ಮಾಡಿಕೊಂಡಿಲ್ಲ. ಆ ವಿಶ್ವವಿದ್ಯಾನಿಲಯದವರು ಯಾವ ರೀತಿ ಕೆಲಸ ಮಾಡುತ್ತಾರೆಂದು ಗೊತ್ತಿಲ್ಲ. ಬೀದರ್‌ನಲ್ಲಿರುವಂತಹ ವಿಶ್ವವಿದ್ಯಾನಿಲಯದಲ್ಲಿ ನಾನು ಮತ್ತು ಸಚಿವರಾದ ಸಿ.ಸಿ.ಪಾಟೀಲ್‌ರವರು ಒಟ್ಟಿಗೆ ಸಭೆಯನ್ನು ಮಾಡಿದ್ದೇವೆ. ಅಂದಿನ ಸಭೆಯಲ್ಲಿ ಸಚಿವರು ಇದ್ದು, ಬಹಳ ಅರ್ಥಪೂರ್ಣವಾಗಿ ಎಲ್ಲವನ್ನು ಕೇಳಿಸಿಕೊಂಡರು. ಆದರೆ, ಅಂದು ನಾವು ಮಾತನಾಡಿದ ಮಾತುಗಳು ಆ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಕಿವಿಯೊಳಗೆ ಹೋಯಿತ್ತೋ ಅಥವಾ ಇಲ್ಲವೋ ಗೊತ್ತಿಲ್ಲ. ಮಾನ್ಯ ಸಚಿವರು ಹೆಸರು ಪಡೆದುಕೊಳ್ಳಬೇಕೆಂದು

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಸಕ್ತಿವಹಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಆದರೆ, ಮಾನ್ಯ ಸಚಿವರ ಜೊತೆಗೆ ಅವರ ಅಧಿಕಾರಿಗಳು ಕೈಜೋಡಿಸುತ್ತಿದ್ದಾರೆಯೇ ಅಥವಾ ಇಲ್ಲವೇ ಎನ್ನುವಂತಹ ಸಂಶಯ ನನಗೆ ಕಾಡುತ್ತಿದೆ.

**ಸಭಾಪತಿಯವರು:-** ಆ ವಿಶ್ವವಿದ್ಯಾನಿಲಯದವರು ಏನು ಮಾಡುವುದಿಲ್ಲ.

**ಶ್ರೀ ಲಕ್ಷಣ ಸಂಗಪ್ಪ ಸವದಿ:-** ಮಾನ್ಯಸಭಾಪತಿಯವರೇ, ಆ ವಿಶ್ವವಿದ್ಯಾನಿಲಯದಲ್ಲಿ ಏನಾಗಿದೆ ಎಂದರೆ, ಅಲ್ಲಿ ಇರುವಂಥವರಿಗೆ ವೇತನ ಕೊಡುವುದು, ಬಂದಿರುವಂತಹ ಹಣದಲ್ಲಿ ಯಾವ ರೀತಿಯಲ್ಲಿ ಹಣವನ್ನು ಹೊಡೆದುಕೊಂಡು ಅವರ ಜೇಬುಗಳನ್ನು ತುಂಬಿಸಿಕೊಳ್ಳಬೇಕೆಂಬ ಚಿಂತನೆಯಲ್ಲಿದ್ದಾರೆ ಹೊರತಾಗಿ, ಪಶುಗಳನ್ನು ಸಂರಕ್ಷಣೆ ಮಾಡಬೇಕೆಂಬ ಆಲೋಚನೆಯಲ್ಲಿ ಆ ಅಧಿಕಾರಿಗಳು ಇಲ್ಲ. ಅದಕ್ಕೆ ಮಾನ್ಯ ಸಚಿವರು ದಯವಿಟ್ಟು ಆ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಕಿವಿ ಹಿಂಡುವಂತಹ ಕೆಲಸವನ್ನು ಮಾಡಬೇಕು. ಅವರು ಏನು ಮಾಡುತ್ತಿದ್ದಾರೆಂದು ಕೇಳಬೇಕು. ಸುಮಾರು ಆರು ತಿಂಗಳ ಹಿಂದೆ ಸರ್ಕಾರದಿಂದ ಸುಮಾರು 35 ಕೋಟಿ ರೂಪಾಯಿಗಳು ಮಂಜೂರಾಗಿ ಬಂದರೂ ಸಹ, ಇವತ್ತಿನವರೆಗೆ ಟೆಂಡರ್ ಕಾಲ್ ಮಾಡುತ್ತಿಲ್ಲ. ಮಾನ್ಯ ಸಚಿವರು ನೇಮಕಾತಿ ಮಾಡಬೇಕಾದರೆ ಪಶು ವೈದ್ಯಕೀಯ ವೈದ್ಯರು ಸಿಗುತ್ತಿಲ್ಲವೆಂದು ಹೇಳಿದ್ದಾರೆ. ನೇಮಕಾತಿ ಮಾಡಿಕೊಳ್ಳಬೇಕೆಂದರೆ, ಕಾಲೇಜುಗಳು ಇದ್ದು, ಅದರಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ಬಂದಾಗ ಮಾತ್ರ ಅಭ್ಯರ್ಥಿಗಳು ಸಿಗುತ್ತಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಚೆನ್ನಾಗಿ ಕೆಲಸ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ, ಮಾನ್ಯ ಸದಸ್ಯರು ಹೇಳುತ್ತಿರುವುದರ ಬಗ್ಗೆ ನೋಡಿ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸವದಿಯವರು ಅಥಣಿಯಲ್ಲಿರುವ ಕಾಲೇಜಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಆ ಕೆಲಸವನ್ನು ಲೋಕೋಪಯೋಗಿ ಇಲಾಖೆಗೆ ಟೆಂಡರ್‌ನ್ನು ಕೊಡಲಾಗಿದೆ. Tender process ನಲ್ಲಿದೆ. ಈ ವಿಷಯದ ಬಗ್ಗೆ ನಿನ್ನೆ ದಿವಸ ಫೋನ್ ಮಾಡಿ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಆಗ ಅವರು ಈ ಕೆಲಸವನ್ನು ಲೋಕೋಪಯೋಗಿ ಇಲಾಖೆಗೆ ಕೊಡಲಾಗಿದೆ, Tender process ನಲ್ಲಿದೆ ಎಂದು ತಿಳಿಸಿದ್ದಾರೆ. ಈಗಾಗಲೇ ನಾನು ಒಂದು ಬಾರಿ ಅಲ್ಲಿಗೆ ವಿಸಿಟ್ ಮಾಡಿದ್ದೇನೆ. ಮತ್ತೊಮ್ಮೆ ವಿಸಿಟ್ ಮಾಡುತ್ತೇನೆ. ಆದಷ್ಟು ಶೀಘ್ರದಲ್ಲಿಯೇ ಆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಅಧಿವೇಶನಕ್ಕೆ ಬಂದಿದ್ದೀರಿ. ಅಥಣಿ ಹತ್ತಿರದಲ್ಲಿಯೇ ಇದೆ. ಹಾಗಾಗಿ, ಒಂದು ಬಾರಿ ವಿಸಿಟ್ ಮಾಡಿ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ವಿಸಿಟ್ ಮಾಡುತ್ತೇನೆ. ಅಲ್ಲದೇ, ಆದಷ್ಟು ಶೀಘ್ರದಲ್ಲಿಯೇ ಟೆಂಡರ್ ಪ್ರಕ್ರಿಯೆಯನ್ನು ಮುಗಿಸಿ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, Agricultural University ನಲ್ಲಿ ಯಾವ ರೀತಿ Horticulture, Floriculture Diploma Course ಗಳನ್ನು ಪ್ರಾರಂಭ ಮಾಡಿದ್ದಾರೋ, ಅದೇ ರೀತಿ ಇಲ್ಲಿಯೂ ಸಹ Veterinary Inspector Course ಗೆ Diploma Course ಅನ್ನು ಪ್ರಾರಂಭ ಮಾಡಬೇಕು. ಕೊನೆಯ ಪಕ್ಷ Veterinary Inspector ರವರಾದರೂ ಸಹ ಹಳ್ಳಿಗಳಿಗೆ ಬಂದು ಪಶುಗಳಿಗೆ ಚಿಕಿತ್ಸೆಯನ್ನು ನೀಡುತ್ತಾರೆ. ಇಲ್ಲಿ graduates ಬರುತ್ತಿಲ್ಲ. graduates ಬಂದರೆ, ನೇಮಕಾತಿ ಮಾಡುವುದಿಲ್ಲ. ಅವರು ಖಾಸಗಿ ಕಂಪನಿಗಳ ಕಡೆಗೆ ಹೋಗುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದ ವಿಷಯ. ದಯವಿಟ್ಟು ಸಮಯ ಕೊಡಿ.

**ಸಭಾಪತಿಯವರು:-** ಇಟಗಿಯವರೇ, ನೀವು ಅನುಮತಿ ಕೇಳಬೇಕಲ್ಲವೇ; ಒಂದು ನೋಟಿಸ್ ಕಳುಹಿಸಿ. ನಾಳೆಗೆ ತೆಗೆದುಕೊಳ್ಳುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, Diploma Course ಅನ್ನು ಪ್ರಾರಂಭ ಮಾಡುವುದಕ್ಕೆ ಹೇಳಿ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸಲಹೆ ಬಹಳ ಒಳ್ಳೆಯದು ಇದೆ. ಅದರ ಬಗ್ಗೆ ಚಿಂತನೆ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಆ ವಿಶ್ವವಿದ್ಯಾನಿಲಯದ ಬಗ್ಗೆ ಕಾಳಜಿ ವಹಿಸಿ. ಈ ಬಗ್ಗೆ ನಾನು ತಮಗೆ ಎಷ್ಟೋ ಬಾರಿ ಹೇಳಿದ್ದೇನೆ. ಆ ವಿಶ್ವವಿದ್ಯಾನಿಲಯದವರು ಯಾವುದಕ್ಕೂ ಸಹ ಕಾಳಜಿ ವಹಿಸುವುದಿಲ್ಲ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
---------------------------------------------------------------------------------------------------------------

(1099) 15-12-2021 (12.40) ಎಂವಿ-ಬಿಎನ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ: 284**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು) (ಶ್ರೀ ಪ್ರಕಾಶ್ ಕೆ. ರಾಥೋಡ್ ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಜಯಪುರ ಜಿಲ್ಲೆಯ ವಿಮಾನ ನಿಲ್ದಾಣ 1ನೇ ಹಂತದ ಯೋಜನೆಯು ಯಾವಾಗ ಪೂರ್ಣಗೊಳ್ಳುವುದು? ವಿಮಾನ ನಿಲ್ದಾಣ ನಿರ್ಮಿಸಲು 727 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದು, ಅಂತಹ ರೈತರಿಗೆ ಪರಿಹಾರವನ್ನು ಒದಗಿಸಲಾಗಿದೆಯೇ? ವಿಮಾನ ನಿಲ್ದಾಣ ಪೂರ್ಣಗೊಳ್ಳಲು ಬೇಕಾಗುವ ಅನುದಾನ ಎಷ್ಟು? ಅದನ್ನು ಪೂರ್ಣಗೊಳಿಸಲು ಎಷ್ಟು ಸಮಯ ಬೇಕಾಗುತ್ತದೆ ಎಂದು ಕೇಳಿದ್ದೇವೆ. ಅದಕ್ಕೆ ಅವರು ನೀಡಿರುವ ಉತ್ತರವೇನೆಂದರೆ, ಈ ಯೋಜನೆಯನ್ನು ಪೂರ್ಣಗೊಳಿಸಲು ರೂ.220 ಕೋಟಿ ರೂಪಾಯಿಗಳು ಬೇಕು ಎಂದು ತಿಳಿಸಿದ್ದಾರೆ. ಮಾನ್ಯ ಸಚಿವರು ಬಹಳ ನುರಿತ ಸಚಿವರಾಗಿದ್ದು, ನನಗೆ ಅವರ ಮೇಲೆ ಬಹಳ ಗೌರವವಿದೆ. ಆದರೆ, ಅಧಿಕಾರಿಗಳು ಇಂತಹ ಒಂದು ಉತ್ತರವನ್ನು ಕೊಟ್ಟಾಗ, ಮಾನ್ಯ ಸಚಿವರು ಅದನ್ನು ಕಣ್ಣಿನಿಂದ ನೋಡದೆ ಸಹಿ ಮಾಡಿದ್ದಾರೆ ಎಂದು ಅನಿಸುತ್ತಿದೆ. ಏಕೆಂದರೆ, ಅವರ ಉತ್ತರದಲ್ಲಿ ಇದುವರೆವಿಗೂ 220 ಕೋಟಿ ರೂಪಾಯಿಗಳಲ್ಲಿ 95 ಕೋಟಿ ರೂಪಾಯಿಗಳ ಹಣ ಮಂಜೂರಾಗಿದೆ. ಅದರಲ್ಲಿ 25 ಕೋಟಿ ರೂಪಾಯಿ ಹಣ ಬಿಡುಗಡೆಯಾಗಿದೆ ಎಂದು ಇದೆ. ಈ ಯೋಜನೆ ಯಾವಾಗ ಪೂರ್ಣಗೊಳ್ಳುತ್ತದೆ ಎಂದರೆ, ವಿಜಯಪುರ ಜಿಲ್ಲೆಯ ವಿಮಾನ ನಿಲ್ದಾಣದ 1ನೇ ಹಂತದ ಯೋಜನೆಯು ಜನವರಿ 2022ರ ಅಂತ್ಯದೊಳಗೆ ಪೂರ್ಣಗೊಳ್ಳುವುದು ಎಂದು ಇದೆ. ಹಾಗಾದರೆ, ಇನ್ನು ಎಷ್ಟು ದಿವಸವಿದೆ? ನಾವು ಈಗಾಗಲೇ ಡಿಸೆಂಬರ್ 2021ರ ಕೊನೆಗೆ ಬಂದಿದ್ದೇವೆ. ಜನವರಿ ತಿಂಗಳು ಸಹ ಬರುತ್ತಿದೆ. ಇದು ಸುಮಾರು 220 ಕೋಟಿ ರೂಪಾಯಿಗಳ ಯೋಜನೆ. ಅದರಲ್ಲಿ 95 ಕೋಟಿ ಮಂಜೂರಾಗಿದೆ, ಅದರಲ್ಲಿ 25 ಕೋಟಿ ಬಿಡುಗಡೆಯಾಗಿದೆ. ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸುತ್ತೀರಾ ಎಂದರೆ, ಜನವರಿ 2022ರ ಕೊನೆಗೆ ಪೂರ್ಣಗೊಳಿಸುತ್ತೇವೆಂದು ತಿಳಿಸಿದ್ದಾರೆ. ಇದಕ್ಕೆ ಈ ರೀತಿಯ ಉತ್ತರವನ್ನು ಯಾವ ಅಧಿಕಾರಿಗಳು ನೀಡಿದ್ದಾರೆ, ದಯಮಾಡಿ ಆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಿ. ಸದನಕ್ಕೆ ಏಕೆ ಈ ರೀತಿಯ ತಪ್ಪು ಉತ್ತರವನ್ನು ಕೊಡುತ್ತಾರೆ? ಮಾನ್ಯ ಸಚಿವರು ಎಲ್ಲಾ ಇಲಾಖೆಗಳಲ್ಲೂ ಕೆಲಸ ಮಾಡಿರುವಂತಹವರು. ಅವರಿಗೆ ಅಪಾರವಾದ ಅನುಭವವಿದೆ. ಮಾನ್ಯ ಸಚಿವರು ಸದನಕ್ಕೆ ಇಂತಹ ಉತ್ತರವನ್ನು ನೀಡಿರುವುದನ್ನು ನಾನು ಅಪೇಕ್ಷಿಸಿರಲಿಲ್ಲ. ಮುಂದುವರೆದು, ಮಾನ್ಯ ಸಚಿವರಲ್ಲಿ ಕೆಲವೊಂದು ವಿಷಯಗಳನ್ನು ಅವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದುವರೆಗೂ 95 ಕೋಟಿ ಹಣ ಏನು ಮಂಜೂರಾಗಿದೆ. ಅದರಲ್ಲಿ ಏನೇನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕೆಂದರೆ, runway, levelling, taxiway, insulation, apron, approach ರಸ್ತೆ, internal ರಸ್ತೆ, terminal ರಸ್ತೆ ಇವುಗಳೆಲ್ಲವನ್ನು ಮಾಡುವುದಕ್ಕೆ 95 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿರುವುದು. ಆದರೆ, ಇದುವರೆವಿಗೂ ಬಿಡುಗಡೆಯಾಗಿರುವುದು ಕೇವಲ 25 ಕೋಟಿ ರೂಪಾಯಿಗಳು ಮಾತ್ರ. ಹಾಗಾಗಿ, ಅಲ್ಲಿ ಏನೂ ಕೂಡ ಕೆಲಸವಾಗಿಲ್ಲ. ಹಾಗಾದರೆ, 220 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದು ಯಾವಾಗ? ಅಲ್ಲಿ ಕೆಲಸ ಯಾವಾಗ ಪ್ರಾರಂಭವಾಗುತ್ತದೆ? ಈಗ ಉದಾಹರಣೆಗೆ; ಸರ್ಕಾರ ಈ ವಿಮಾನ ನಿಲ್ದಾಣವನ್ನು ಮಂಜೂರು ಮಾಡಿದ ದಿನವೇ ಶಿವಮೊಗ್ಗ ವಿಮಾನ ನಿಲ್ದಾಣವನ್ನು ಮಂಜೂರು ಮಾಡಿದೆ. ಆ ವಿಮಾನ ನಿಲ್ದಾಣದ ಕೆಲಸ ಶೀಘ್ರಗತಿಯಲ್ಲಿ ನಡೆಯುತ್ತಿದೆ. ಆದರೆ, ವಿಜಯಪುರ ಜಿಲ್ಲೆ ಒಂದು ಪ್ರವಾಸಿ ಕೇಂದ್ರಸ್ಥಾನ. ಅಲ್ಲಿಗೆ ದೇಶ-ವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಅಂತಹ ಕಡೆಗಳಲ್ಲಿ ವಿಮಾನ ನಿಲ್ದಾಣ ಇಷ್ಟು ನಿಧಾನವಾಗುತ್ತಿದೆ. ಅದಕ್ಕೆ ಮಾನ್ಯ ಸಚಿವರು ಅಧಿಕಾರಿಗಳ ಕಿವಿ ಹಿಂಡುವುದರ ಮುಖಾಂತರವಾಗಿ, ಸರ್ಕಾರದ ಗಮನ ಸೆಳೆದು ಅತಿ ಶೀಘ್ರದಲ್ಲೇ ಇದಕ್ಕೆ ಹಣ ಬಿಡುಗಡೆ ಮಾಡಿಸಿ, ಅದರ ಕೆಲಸ ಮಾಡಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ನನ್ನ ಮಿತ್ರರಾದ ಶ್ರೀ ಎಂ.ನಾರಾಯಣಸ್ವಾಮಿಯವರು ತಿಳಿಸಿದ, ವಿಜಯಪುರ ವಿಮಾನ ನಿಲ್ದಾಣದ ಬಗ್ಗೆ ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ. ನಾವು ಸುಮಾರು 727 ಎಕರೆ ಜಮೀನನ್ನು ನಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಅದರ ಕೆಲಸ ಪ್ರಾರಂಭವಾಗಿದೆ. ಈಗ ಮೊದಲನೆ ಹಂತಕ್ಕೆ 95 ಕೋಟಿ ರೂಪಾಯಿ ಮಂಜೂರಾಗಿದೆ. ಈಗಾಗಲೇ ಎರಡನೆ ಹಂತಕ್ಕೆ ಟೆಂಡರ್ ಕರೆದು, ಇದೇ ತಿಂಗಳ 24ನೇ ತಾರೀಖಿಗೆ ಅಧಿವೇಶನ ಮುಗಿಯುತ್ತದೆ. ನಾನು 25ನೇ ತಾರೀಖಿಗೆ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯ ಎಲ್ಲಾ ಶಾಸಕರನ್ನು ಅಲ್ಲಿಗೆ ಕರೆದಿದ್ದೇನೆ. ಅಲ್ಲಿ ನಮ್ಮ ಇಲಾಖೆಯ ಕಚೇರಿಯನ್ನು ಸಹ ಉದ್ಘಾಟನೆ ಮಾಡುತ್ತಿದ್ದೇವೆ. ನಾನು ಈ ವಿಮಾನ ನಿಲ್ದಾಣ ಹತ್ತಿರಕ್ಕೆ ಸಹ ಹೋಗುತ್ತಿದ್ದೇನೆ. ಇದನ್ನು ಯಾವರೀತಿ ಮಾಡಬೇಕು. ಸಾಧ್ಯವಾದರೆ, ಶಿವಮೊಗ್ಗದಲ್ಲಿ ಯಾವರೀತಿ ತ್ವರಿತಗತಿಯಲ್ಲಿ ಆಗುತ್ತಿದೆ, ಅದೇ ಮಟ್ಟದಲ್ಲಿ ....

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, cost of project......

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಇದರ ಯೋಜನಾ ವೆಚ್ಚ 220 ಕೋಟಿ ರೂಪಾಯಿಗಳು. ಈಗಾಗಲೇ 95 ಕೋಟಿ ರೂಪಾಯಿ ಮಂಜೂರಾಗಿ ಬಿಡುಗಡೆಯಾಗಿ, ಈ ಕೆಲಸಗಳನ್ನು ಲೋಕೋಪಯೋಗಿ ಇಲಾಖೆಯ ವತಿಯಿಂದಲೇ ಮಾಡುತ್ತಿದ್ದೇವೆ. ನಾನು ಬಂದ ಮೇಲೆ ಇದಕ್ಕೆ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಷ್ಟರಮಟ್ಟಿಗೆ ಆದ್ಯತೆ ಕೊಡಬೇಕಾಗಿತ್ತು, ಅಷ್ಟರಮಟ್ಟಿಗೆ ಕೊಟ್ಟಿದ್ದೇನೆ. ಎರಡನೆಯದಾಗಿ, ಶಿವಮೊಗ್ಗ ಮತ್ತು ಗುಲ್ಬರ್ಗ ವಿಮಾನ ನಿಲ್ದಾಣ. ಈಗ ಗುಲ್ಬರ್ಗ ವಿಮಾನ ನಿಲ್ದಾಣಕ್ಕೆ ಸುಮಾರು 742 ಎಕರೆ ಜಮೀನು. ಪ್ರಾಯಶಃ ಈಗಾಗಲೇ ಅಲ್ಲಿನ ವಿಮಾನ ನಿಲ್ದಾಣ ದಿನಾಂಕ 22.11.2019ರಿಂದ ಕಾರ್ಯಾರಂಭ ಮಾಡುತ್ತಿದೆ. ಹಾಸನ ವಿಮಾನ ನಿಲ್ದಾಣಕ್ಕೆ ಸುಮಾರು 536 ಎಕರೆ ಜಮೀನು. ನಾವು ಬಂದ ಮೇಲೆ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಇಡೀ ಯೋಜನೆಗೆ 384 ಕೋಟಿ ರೂಪಾಯಿಗಳು, ಅಲ್ಲಿ 758 ಎಕರೆ ಜಮೀನನ್ನು ತೆಗೆದುಕೊಂಡಿದ್ದೇವೆ. ವಿಜಯಪುರ ವಿಮಾನ ನಿಲ್ದಾಣದ ಯೋಜನೆಗೆ ಸುಮಾರು 727 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೇವೆ. 220 ಕೋಟಿ ರೂಪಾಯಿಗಳ ಹಣದಲ್ಲಿ ಈ ಯೋಜನೆಯನ್ನು 2022ರ ಡಿಸೆಂಬರ್ ತಿಂಗಳಿಗೆ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನೀಡಿರುವ ಉತ್ತರದಲ್ಲಿ ಜನವರಿ 2022 ಎಂದು ಇದೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಇದನ್ನು ಡಿಸೆಂಬರ್, 2022ಕ್ಕೆ, ಅಂದರೆ ಮುಂದಿನ ವರ್ಷಕ್ಕೆ ಮೊದಲನೇ ಹಂತವನ್ನು ಮುಗಿಸಬೇಕೆಂದು ಹೇಳಿರುವುದು. ಅದೇ ರೀತಿಯಾಗಿ ನಾನು ಬಂದ ಮೇಲೆ ರಾಯಚೂರು ವಿಮಾನ ನಿಲ್ದಾಣದ ಕೆಲಸವನ್ನು ಮುಗಿದು, ಈಗ ಅದು ಕ್ಯಾಬಿನೆಟ್‌ಗೆ ಬಂದಿದೆ.

**ಸಭಾಪತಿಯವರು:-** ಈಗ ವಿಜಯಪುರ ವಿಮಾನ ನಿಲ್ದಾಣದ ಕೆಲಸವನ್ನು ಮುಗಿಸಿ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಈಗ ನಮ್ಮ ಆದ್ಯತೆಯಂತೆ ಈಗಾಗಲೇ ಬೀದರ್‌ನಲ್ಲಿ ಕೆಲಸವಾಗುತ್ತಿದೆ. ಇವುಗಳಿಗಿಂತ ಹೆಚ್ಚಾಗಿ, ಅತಿ ಅವಶ್ಯಕತೆ ಇರುವಂಥದ್ದು ಕಾರವಾರ ವಿಮಾನ ನಿಲ್ದಾಣ ಅಂಕೋಲೆಯಲ್ಲಿ ಅದನ್ನು ಯಾವ ಯಾವ ರೀತಿ ಮಾಡಬೇಕು ಎಂದು ಮಾನ್ಯ ಸಚಿವರಾದ ಅರಬೈಲು ಹೆಬ್ಬಾರ್ ಶಿವರಾಂ ಮತ್ತು ಮಾನ್ಯ ಬಿ.ಕೆ.ಹರಿಪ್ರಸಾದ್‌ರಿಗೂ ಸಹ ಒಂದು ಪತ್ರವನ್ನು ಬರೆಯುತ್ತೇನೆ. ನಾನು ಇನ್ನು ಹದಿನೈದು ದಿವಸದಲ್ಲಿ ಅಲ್ಲಿಗೆ ಹೋಗಿ ನೋಡುತ್ತೇನೆ.

**ಸಭಾಪತಿಯವರು:-** ಈಗ ವಿಜಯಪುರ ವಿಮಾನ ನಿಲ್ದಾಣದ ಬಗ್ಗೆ ಹೇಳಿ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ವಿಜಯಪುರ ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟಂತೆ ನಾವು ಅದಕ್ಕೆ timebound ನಿಗದಿ ಮಾಡಿದ್ದೇವೆ. ನಾವು ಅದನ್ನು ಮಾಡುತ್ತೇವೆ. ನಾನು ಮಾನ್ಯ ಎಂ.ನಾರಾಯಣಸ್ವಾಮಿಯವರ ಕಳಕಳಿಯನ್ನು ಮೆಚ್ಚುತ್ತೇನೆ. ನನಗೆ ಯಾವುದೇ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಯನ್ನು ಕೊಟ್ಟರೆ, ಏನಾದರೂ ಮಾಡಬೇಕು ಎಂಬ ಬಯಕೆ ಇದೆ. ಅದಕ್ಕೆ ನಾನು ಕೆಲಸ ಮಾಡುತ್ತೇನೆ. ಅದಕ್ಕೆ ಅವರು ಯಾವುದೇ ಕಾರಣಕ್ಕೂ ಸಂಶಯಪಡುವುದು ಬೇಡ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸುಮಾರು 220 ಕೋಟಿ ರೂಪಾಯಿಗಳಲ್ಲಿ ಇಂತಹ ಒಂದು ಯೋಜನೆಯನ್ನು ಮಾಡುತ್ತಿದ್ದಾರೆ. ಈಗ ಅವರು ಮಾಡುತ್ತಿರುವಂತಹ ರನ್‌ವೇ ಸೈಜ್ ಮತ್ತು ವಿಮಾನ ನಿಲ್ದಾಣವನ್ನು ನೋಡಿದಾಗ, ಅಲ್ಲಿ ಕೇವಲ ಸಣ್ಣ ವಿಮಾನಗಳು ಇಳಿಯುವುದಕ್ಕೆ ಮತ್ತು ಹತ್ತುವುದಕ್ಕೆ ಅವಕಾಶವಿದೆ. ಅಲ್ಲಿ ದೊಡ್ಡ ದೊಡ್ಡ ವಿಮಾನಗಳು ಇಳಿಯುವುದಕ್ಕೆ ಆಗುವುದಿಲ್ಲ. ಅದಕ್ಕೆ ಇನ್ನು ಸ್ವಲ್ಪ ಹಣವನ್ನು ಬಿಡುಗಡೆ ಮಾಡಿದರೆ, ಮುಂದಕ್ಕೆ ಬೇಕಾದರೆ ಅದನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ ಮಾಡಬಹುದು. ಅದಕ್ಕೆ ಏಕೆ ಡಬಲ್ ಖರ್ಚು ಮಾಡುವುದು. ಈಗ ನ್ಯಾಷನಲ್ ಹೈವೇ ಮಾಡುತ್ತಿದ್ದೇವೆ. ಅಲ್ಲಿ ಹೈವೇ ರೋಡ್ ಮಾಡಿ, ಆ ನಂತರ ಫ್ಲೈಓವರ್ ಮಾಡುವ ರೀತಿ ಆಗುತ್ತದೆ. ಆ ರೀತಿ ಡಬಲ್ ಡಬಲ್ ಖರ್ಚಾಗುತ್ತದೆ. ನೀವು ಇವತ್ತೇ ತಾಂತ್ರಿಕ ವ್ಯಕ್ತಿಗಳನ್ನು ಕರೆಸಿ ಮಾತನಾಡಿ. ಏಕೆಂದರೆ, ಈ ಯೋಜನೆಗೆ 220 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಅದಕ್ಕೆ ರನ್‌ವೇ ಅನ್ನು ಇನ್ನು ಸ್ವಲ್ಪ ಉದ್ದ ಮಾಡಿ, ಅಲ್ಲಿ ದೊಡ್ಡ ವಿಮಾನಗಳು ಸಹ ಇಳಿಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ನಾನು ಅಲ್ಲಿಗೆ ಈ ತಿಂಗಳ 25ನೇ ತಾರೀಖಿಗೆ ಹೋಗುತ್ತಿದ್ದೇನೆ. ಅಲ್ಲಿಗೆ ನಮ್ಮ ಇಲಾಖೆ ಹಿರಿಯ ಅಧಿಕಾರಿಗಳನ್ನು ಸಹ ಕರೆದುಕೊಂಡು ಹೋಗುತ್ತಿದ್ದೇನೆ. ಅಲ್ಲಿಯ ಶಾಸಕರು ಮತ್ತು ಬಾಗಲಕೋಟೆಯ ಶಾಸಕರು ಹಾಗೂ ಹಿರಿಯರಾದ ಮಾನ್ಯ ಎಸ್.ಆರ್.ಪಾಟೀಲ್‌ರವರಿಗೂ ಸಹ ವಿನಂತಿ ಮಾಡುತ್ತೇನೆ. ಅವರು ಒಂದು ಗಂಟೆ ನಮ್ಮೊಂದಿಗೆ ಇರಬೇಕು. ಅಂದು ನಾನು ಅಲ್ಲಿ ಹತ್ತು ಗಂಟೆಗೆ ಇರುತ್ತೇನೆ. ಅಲ್ಲಿ ಏನು ಅವಶ್ಯಕತೆ ಎಂಬುದಕ್ಕಿಂತ ಹೆಚ್ಚಾಗಿ, ಮುಂದೆ ಜಾಗ ಸಿಗುವುದಿಲ್ಲ ಎಂಬ ಚಿಂತನೆ ಇರುವುದರಿಂದ, ಎಲ್ಲರ ಅಭಿಪ್ರಾಯವನ್ನು ಸಂಗ್ರಹ ಮಾಡುತ್ತೇನೆ.

**ಸಭಾಪತಿಯವರು:-** ತಾವು ತಾಂತ್ರಿಕ ವ್ಯಕ್ತಿಗಳ ಸಲಹೆಯನ್ನು ಕೇಳಿ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಈಗ ತಾಂತ್ರಿಕವಾಗಿ ಏನೇನು ಆಗಬೇಕೋ ಅದನ್ನು ನೋಡಿ ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ವಿಜಯಪುರ ಒಂದು ಐತಿಹಾಸಿಕ ಜಿಲ್ಲೆ. ಅಲ್ಲಿ ಜಗತ್ತಿನ ಎಂಟನೇ ಅದ್ಭುತವಾದ ಗೋಲ್‌ಗುಂಬಜ್ ಇದೆ. ಈಗ ಗೋಲ್‌ಗುಂಬಜ್ ಮತ್ತು

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

ಇಬ್ರಾಹಿಂ ರೋಜಾ ನೋಡುವುದಕ್ಕೆ ಲಕ್ಷಾಂತರ ಜನರು ಮತ್ತು ಬಹಳಷ್ಟು ವಿದೇಶಿ ಪ್ರವಾಸಿಗರು ಬರುತ್ತಾರೆ. ಅದರ ಜೊತೆಗೆ ವಿಜಯಪುರ ಜಿಲ್ಲೆ ತೋಟಗಾರಿಕೆ ಬೆಳೆಗಳನ್ನು ಬೆಳೆಯುವಂತಹ ಜಿಲ್ಲೆ. ವಿಜಯಪುರ ಜಿಲ್ಲೆಯ ದ್ರಾಕ್ಷಿ ಲಂಡನ್‌ನ ಸೂಪರ್ ಮಾರ್ಕೆಟ್‌ಗೆ ಹೋಗಿ ಅಲ್ಲಿ ಮಾರಾಟವಾಗುತ್ತದೆ. ಈಗ ತೋಟಗಾರಿಕೆ ಬೆಳೆಗಳಾದ ದಾಳಿಂಬೆ ಮತ್ತು ದ್ರಾಕ್ಷಿ ಇನ್ನಿತರೆ ಅನೇಕ ರೀತಿಯ ತೋಟಗಾರಿಕೆ ಬೆಳೆಗಳನ್ನು ವಿದೇಶಕ್ಕೆ ರಫ್ತು ಮಾಡುತ್ತಾರೆ. ಆದುದರಿಂದ, ಅಲ್ಲಿ ವಿಮಾನ ನಿಲ್ದಾಣ ಬಹಳ ಅವಶ್ಯಕತೆ ಇದೆ. ಆ ಅವಶ್ಯಕತೆಗಳನ್ನು ಅನುಸರಿಸಿಕೊಂಡು, ಏನು deadline ಹಾಕಿಕೊಂಡಿದ್ದಾರೆ. ಅಂದರೆ, ಡಿಸೆಂಬರ್ 2022ರ ನಿಗದಿತ ಅವಧಿಯೊಳಗೆ ಮುಗಿಸಲಿ. ಈಗ 25ನೇ ತಾರೀಖಿಗೆ ಸಭೆ ಮಾಡಿ, ಅಧಿಕಾರಿಗಳ ಜೊತೆ ಚರ್ಚೆ ಮಾಡಲಿ. ಮಾನ್ಯ ಎಂ.ನಾರಾಯಣಸ್ವಾಮಿಯವರು ಹೇಳಿದ ಹಾಗೆ ಮುಂದೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಮಾಡುವುದಕ್ಕೆ ಅನುಕೂಲವಾಗುವಂತಹ ದಿಶೆಯಲ್ಲಿ ಇದಕ್ಕೆ ಮತ್ತೊಮ್ಮೆ double expenditure ಆಗಬಾರದು. ಈಗ ಆ ವಿಚಾರವನ್ನು ಇಟ್ಟುಕೊಂಡು, ಅದು ವಿಸ್ತರಣೆಯಾಗುವ ಹಾಗೆ ಅದು ಅಂತರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಅನುಕೂಲವಾಗುವಂತಹ ವಿನ್ಯಾಸದೊಂದಿಗೆ ಅವರು ಕೆಲಸ ಮುಗಿಸಲಿ. ಆ ಕೆಲಸವನ್ನು ನಿಗದಿತ ಅವಧಿಯೊಳಗೆ ಮುಗಿಸಲಿ. ಆ ವಿಮಾನ ನಿಲ್ದಾಣ ಕೇವಲ ವಿಜಯಪುರ ಜಿಲ್ಲೆಗೆ ಅಷ್ಟೇ ಅಲ್ಲ. ಅದು ನೆರೆಯ ಜಿಲ್ಲೆಯಾದ ಬಾಗಲಕೋಟೆ ಜಿಲ್ಲೆಗೂ ಸಹ ಉಪಯೋಗವಾಗುತ್ತದೆ. ಇದು ಎರಡೂ ಜಿಲ್ಲೆಗೂ ಸಹ ಉಪಯೋಗವಾಗುವಂತಹ ಮಹತ್ವದ ವಿಮಾನ ನಿಲ್ದಾಣವಿದು. ಅದಕ್ಕೆ ನಿಗದಿತ ಅವಧಿಯೊಳಗೆ ಮುಗಿಸುವುದಕ್ಕೆ ಪ್ರಯತ್ನ ಮಾಡಲಿ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ನಾನು 25ನೇ ತಾರೀಖಿಗೆ ಅದನ್ನು ನೋಡಿ ಮಾಡುತ್ತೇನೆ.

(ಮುಂದು)

**“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

---

(1100) 15.12.2021 12.50 LL-BNS

(ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ:316**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್. ರುದ್ರೇಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಇಲ್ಲಿ ಪ್ರಶ್ನೆ ಇರುವುದೇನೆಂದರೆ, 2019ರಲ್ಲಿ ನಡೆದಂತಹ ಅಧಿವೇಶನದಲ್ಲಿ ನಾನು ಇದೇ ಪ್ರಶ್ನೆ ಕೇಳಿದ್ದು, “ಡಿ.ಪಿ.ಆರ್. ಮಾಡಿಸಿ ಅದನ್ನು ರಾಷ್ಟ್ರೀಯ ಹೆದ್ದಾರಿಗೆ ಹಸ್ತಾಂತರಿಸುತ್ತೇವೆ” ಎಂದು ನನ್ನ ಪ್ರಶ್ನೆಗೆ ಸದನದಲ್ಲಿ ಉತ್ತರಿಸಲಾಗಿರುತ್ತದೆ. ಮಾನ್ಯ ಸಚಿವರು ಕೊಟ್ಟಂತಹ ಉತ್ತರದಲ್ಲಿ, “ಭಾರತ ಸರ್ಕಾರದ ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಮಂತ್ರಾಲಯದ ಪತ್ರ ಸಂಖ್ಯೆ ಉಲ್ಲೇಖಿಸಿ, ...ದಿನಾಂಕ:28.07.2020ರಲ್ಲಿ ತಾತ್ವಿಕವಾಗಿ ಅನುಮೋದಿತವಾಗಿರುವ ಪ್ರಸ್ತಾವನೆಗಳನ್ನು ಇದ್ದ ಸ್ಥಿತಿಯಲ್ಲಿಯೇ ಪೂರ್ವ ಮುಕ್ತಾಯಗೊಳಿಸಲು ಸೂಚಿಸಲಾಗಿದೆ...” ಎಂದು ಉತ್ತರ ನೀಡಲಾಗಿರುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ನಾನು ಈಗಾಗಲೇ ಕೇಳಿದ ಹಾಗೆ, ಉತ್ತರ ಮತ್ತು ಕರಾವಳಿ ಪ್ರದೇಶ ಮಧ್ಯೆ ಕರ್ನಾಟಕಕ್ಕೆ ಕನೆಕ್ಟ್ ಮಾಡುವಂತಹ ಒಂದು ಲಿಂಕ್ ರಸ್ತೆ ಇದು ಎಂದು ಹೇಳಬಹುದು. ಪ್ರತಿ 6 ನಿಮಿಷಕ್ಕೊಮ್ಮೆ ಒಂದು ಸರ್ಕಾರಿ ಬಸ್ ಅಲ್ಲಿ ಓಡಾಡುತ್ತದೆ. ಮಧ್ಯದಲ್ಲಿ ಹರಿಹರದಿಂದ ಮಲೆಬೆನ್ನೂರು-ಹೊನ್ನಾಳಿ-ಶಿವಮೊಗ್ಗ ಈ ಮಾರ್ಗವಾಗಿ ಸುಮಾರು 20 ಹಳ್ಳಿಗಳು ಮತ್ತು 3 ಪಟ್ಟಣಗಳು ಬರುತ್ತವೆ. ಅಲ್ಲಿ ಸಾಕಷ್ಟು ವಾಹನ ದಟ್ಟಣೆ ಇರುತ್ತದೆ. ಆದುದರಿಂದ, ದಯಮಾಡಿ, ಇದಕ್ಕೆ ಪರ್ಯಾಯವಾಗಿ ಮಾನ್ಯ ಸಚಿವರು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ, ಕೇಂದ್ರದ ನಿಯಮದ ಪ್ರಕಾರ ಅದನ್ನು ತಾತ್ಕಲಿಕವಾಗಿ ತಡೆಹಿಡಿದಿದ್ದೀರಿ, ಅದು ಸರಿ ಇರಬಹುದು. ಆದರೆ, ಈಗಿನ ಪರಿಸ್ಥಿತಿಯಲ್ಲಿ ಅಲ್ಲಿ ವಾಹನಗಳ ಓಡಾಟ ಮತ್ತು ಸಮಯ ತುಂಬಾ ಆಗುತ್ತಿರುವುದರಿಂದ, ಸಾಕಷ್ಟು ಘರ್ಷಣೆಗಳು ಕೂಡ ಹಳ್ಳಿಗಳ ಮಧ್ಯದಲ್ಲಿ ಆಗುತ್ತಿರುತ್ತದೆ. ಆದುದರಿಂದ, ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ದಯಮಾಡಿ ಸೂಚಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇವೆ.

**ಶ್ರೀ ಸಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ, ಅಲ್ಲಿ ವಾಹನ ದಟ್ಟಣೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದರೆ, ಹೊಸ ರಾಷ್ಟ್ರೀಯ ಹೆದ್ದಾರಿ ಘೋಷಣೆಯಾಗಬೇಕಾದರೆ ಅದು ನೀತಿ ಆಯೋಗದ ಮುಖಾಂತರ ಘೋಷಣೆಯಾಗುವ ಸಂಬಂಧ ಅದನ್ನು foreclosure ಮಾಡಲಾಗಿರುತ್ತದೆ. ಆದಾಗ್ಯೂ, ಪರ್ಯಾಯ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಮಾನ್ಯ ರುದ್ರೇಗೌಡರ ಜೊತೆ ಈಗಾಗಲೇ ನಾನು ಮಾತನಾಡಿದ್ದೇನೆ. ಅದನ್ನು KSHIP-4 ರಲ್ಲಿ ಪ್ರಸ್ತಾವನೆ

ಸಲ್ಲಿಸುವುದಕ್ಕೆ ನಮಗೆ ಅವಕಾಶ ಇದೆ ಅಥವಾ ಬೇರೆ ಯಾವುದಾದರೂ ಒಂದು ಯೋಜನೆಯಲ್ಲಿ ಅದನ್ನು ಅಪ್‌ಗ್ರೇಡ್ ಮಾಡಲಿಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ:347**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಮಾನ್ಯ ಸಭಾನಾಯಕರು ಮತ್ತೊಮ್ಮೆ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿ ಬಂದಿದ್ದಾರೆ, ಅವರಿಗೆ ಅಭಿನಂದಿಸುತ್ತಾ, ಈ ಪ್ರಶ್ನೆಗೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹಾಜರಿರುವುದಿಲ್ಲ. ಆದಾಗ್ಯೂ, ನನ್ನ ಪ್ರಶ್ನೆಗೆ ನೀಡಿರುವ ಉತ್ತರ ಒಂದು ಅಪೂರ್ಣ ಉತ್ತರವಾಗಿದೆ ಎಂದು ಹೇಳುತ್ತೇನೆ. ಏಕೆಂದರೆ, ನಾನು ಕೇಳಿರುವ ಪ್ರಶ್ನೆಯಲ್ಲಿ, “ಎಲ್ಲೆಲ್ಲಿ ಮಳೆ ಬಿದ್ದು ದೇವಸ್ಥಾನಗಳು ಹಾಳಾಗಿದೆ, ಅದಕ್ಕೆ ತಾವು ಯಾವ ಕ್ರಮ ತೆಗೆದುಕೊಳ್ಳುತ್ತೀರಿ” ಎಂದು ಪ್ರಶ್ನೆ ಕೇಳಿದ್ದೇನೆ. ಸುಮಾರು 30 ಜಿಲ್ಲೆಗಳ ಪೈಕಿ ಕೇವಲ 9 ಜಿಲ್ಲೆಗಳ ಮಾಹಿತಿ ಮಾತ್ರ ಕೊಟ್ಟಿದ್ದು, ಇನ್ನು ಉಳಿದ 21 ಜಿಲ್ಲೆಗಳಲ್ಲಿ ಮಳೆ ಬಿದ್ದು ದೇವಸ್ಥಾನಗಳು ಬಿದ್ದಿರುವುದಿಲ್ಲ ಎನ್ನುವುದು ಅಧಿಕಾರಿಗಳ ಉತ್ತರವಾಗಿದೆ. ಆದರೆ, ನಾನು ಒಂದೊಂದು ಜಿಲ್ಲೆಗೆ ಒಂದೊಂದು ಹಾನಿಗೊಳಗಾದ ದೇವಸ್ಥಾನದ ಉದಾಹರಣೆ ನೀಡುತ್ತೇನೆ. ಅದರಂತೆ, ಬಾದಾಮಿ ಜಿಲ್ಲೆಯಲ್ಲಿ ಅಗಸ್ತ್ಯಕೊಳ ತುಂಬಿ ತುಳಸಿಗಿರಿಯ ಹನುಮಾನ್ ದೇವಸ್ಥಾನ ಮುಳುಗಡೆಯಾಗಿರುತ್ತದೆ. ಇದು ನನಗೆ ನೀಡಿರುವ ಉತ್ತರದ ಲಿಸ್ಟನಲ್ಲಿ ಇರುವುದಿಲ್ಲ. ಅದೇ ರೀತಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಮಲ್ಲಾಪುರ ಗ್ರಾಮದ ಶ್ರೀವೀರಭದ್ರ ದೇವಸ್ಥಾನ ಮಳೆಯಿಂದ ಕುಸಿದು ಬಿದ್ದಿದೆ. ಇದು ಕೂಡ ಆ ಲಿಸ್ಟನಲ್ಲಿ ಇರುವುದೇ ಇಲ್ಲ. ಮಂಡ್ಯ ಜಿಲ್ಲೆಯ ಕಿಕ್ಕೇರಿ ಐತಿಹಾಸಿಕ ಜನಾರ್ಧನ ದೇವಸ್ಥಾನದ ಗೋಡೆ ಭಾರೀ ಮಳೆಗೆ ಕುಸಿದು ಬಿದ್ದಿರುತ್ತದೆ. ಇದು ಹೊಯ್ಸಳರ ಕಾಲಕ್ಕೂ ಹಿಂದಿನ ದೇವಸ್ಥಾನವಾಗಿದೆ ಮತ್ತು ದೇವಾಲಯದ ಗೋಡೆಗಳಲ್ಲಿ ನರಸಿಂಹ, ಗೋಪಾಲಕೃಷ್ಣ, ಮಹಿಷಮರ್ಧಿನಿ ಮುಂತಾದ ಸುಂದರವಾದ ಶಿಲ್ಪಗಳನ್ನು ಹೊಂದಿರುತ್ತದೆ. ಇದನ್ನು ನಾನು ಉದಾಹರಣೆಗೆ ಹೇಳುತ್ತಿದ್ದೇನೆ.

ನಮ್ಮ ರಾಜ್ಯದಲ್ಲಿ ಸುಮಾರು 35ಸಾವಿರ ದೇವಸ್ಥಾನ ಇದೆ. ಅವುಗಳಲ್ಲಿ ಕನಿಷ್ಠ ಪಕ್ಷ ಶೇಕಡ 10ರಷ್ಟು ಆದರೂ ಮಳೆಯಿಂದ ಹಾನಿಗೊಳಗಾಗಿದೆ. ಆದರೆ, ಅಧಿಕಾರಿಗಳು ಕೇವಲ 100 ದೇವಸ್ಥಾನಗಳ ಮಾಹಿತಿ ನೀಡುತ್ತಾರೆ. ಅದರ ಜೊತೆಗೆ, ಸುಮಾರು 20 ಜಿಲ್ಲೆಗಳ ಮಾಹಿತಿಯೇ ಇರುವುದಿಲ್ಲ. ಈ ಬಗ್ಗೆ ನಿಖರವಾದ ಉತ್ತರ ಕೇಳೋಣವೆಂದರೆ, ಸಂಬಂಧಪಟ್ಟ ಸಚಿವರು ಸದನದಲ್ಲಿ ಹಾಜರಿರುವುದಿಲ್ಲ. ಅವರು ಯಾಕೆ ಈ ದಿನ ಬಂದಿಲ್ಲವೆಂದು ನಮಗೆ ಗೊತ್ತಿರುವುದಿಲ್ಲ. ಆದರೆ, ಸಭಾನಾಯಕರು ಬೇರೆಯವರ ಪ್ರಶ್ನೆಗೆ ಉತ್ತರ ಕೊಡುತ್ತಾರೆ. ಅದಕ್ಕೆ ನಮ್ಮ ಅಭ್ಯಂತರವೇನು ಇರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರು ನಮ್ಮ ಅನುಮತಿ ಪಡೆದಿರುತ್ತಾರೆ.

---

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇದು ಅಪೂರ್ಣ ಉತ್ತರ ಇದ್ದಾಗ ನಾವು ಏನು ಮಾಡಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯನ್ನು ಕೇಳಲಿ, ಅದಕ್ಕೆ ನಾನು ಉತ್ತರ ಕೊಡುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾರೆ. ಅದರ ಬಗ್ಗೆ ನಾವು ಏನು ಹೇಳುವುದು ಇರುವುದಿಲ್ಲ. ಆದರೆ, ಈ ದೇವಸ್ಥಾನಗಳಿಗೆ ಬೇಕಾದಷ್ಟು ಹಣ ದಾನದ ರೂಪದಲ್ಲಿ ಬರುತ್ತದೆ. ಆ ದೇವಸ್ಥಾನಗಳಲ್ಲಿ ಅಲ್ಲಲ್ಲಿ ಕಮಿಟಿ ಇರುತ್ತವೆ. ಆ ಕಮಿಟಿಗಳಿಗೆ ಒಂದಷ್ಟು ಹಣ ಖರ್ಚು ಮಾಡುವುದಕ್ಕೆ ಅನುಮತಿ ನೀಡಿದರೆ, ಅವರು ಆ ದೇವಸ್ಥಾನಗಳ ಸೂರನ್ನು ಮಳೆಯಿಂದ ಮುಚ್ಚಿಕೊಳ್ಳುತ್ತಾರೆ. ಅದನ್ನು ಬಿಟ್ಟು ಆ ದೇವಸ್ಥಾನಗಳ ಎಲ್ಲಾ ಹಣವನ್ನು ತಮಗೆ ಬೇಕಾದವರಿಗೆ ಕೊಡುತ್ತಾರೆ. ಆದರೆ, ಅಲ್ಲಿರುವಂತಹ ದೇವಸ್ಥಾನಗಳಲ್ಲಿ ಒಂದಷ್ಟು ಪರ್ಸೆಂಟ್ ಹಣ ಖರ್ಚು ಮಾಡುವುದಕ್ಕೆ ಅನುಮತಿಯನ್ನಾದರೂ ಕೊಟ್ಟರೆ, ಕನಿಷ್ಠ ಪಕ್ಷ ಆ ದೇವಸ್ಥಾನದವರು ಮಳೆ ಬಂದಾಗ ನೀರು ಸೋರದ ರೀತಿ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಈ ಬಗ್ಗೆ ಸರ್ಕಾರದ ಉತ್ತರ ಹೇಳಲಿ. ನಂತರ ನಾನು ನನ್ನ ಉಪ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ. ವೆಂಕಟೇಶ್‌ರವರು ರಾಜ್ಯದಲ್ಲಿ ಎಷ್ಟು ದೇವಸ್ಥಾನಗಳು ಇತ್ತೀಚಿನ ಮಳೆಯಿಂದ ಹಾನಿಗೊಳಗಾಗಿದೆ ಎಂದು ಕೇಳಿರುತ್ತಾರೆ. ಅವರಿಗೆ ಕೊಟ್ಟಿರುವಂತಹ ಉತ್ತರದಲ್ಲಿ 30 ಜಿಲ್ಲೆಗಳ ಪೈಕಿ 9 ಜಿಲ್ಲೆಗಳಲ್ಲಿ ಇಂತಹ ಅನಾಹುತಗಳಾಗಿವೆ ಎಂದು ಉತ್ತರ ನೀಡಲಾಗಿದೆ ಮತ್ತು ಮಾಹಿತಿಯನ್ನು ಸುಮಾರು 100ಕ್ಕೂ ಹೆಚ್ಚು ದೇವಸ್ಥಾನಗಳ ಹೆಸರನ್ನು ಉಲ್ಲೇಖ ಮಾಡಲಾಗಿದೆ. ಆ ನಂತರ, ಅವರು ಈ ದೇವಸ್ಥಾನಗಳ ದುರಸ್ತಿಗೆ ಕೈಗೊಂಡಂತಹ ಕ್ರಮಗಳೇನು ಎಂದು ಕೇಳಿದ್ದಾರೆ. ಅದಕ್ಕೆ ಎಲ್ಲಾ ಜಿಲ್ಲಾಧಿಕಾರಿಗಳ ಮಟ್ಟದಿಂದ ವರದಿಯನ್ನು ಪಡೆಯುತ್ತಿದ್ದೇವೆ. ಅದರ ಜೊತೆಗೆ, ದೇವಸ್ಥಾನದ ಮೂಲಕ ನಿಗದಿಯಾಗಿರುವಂತಹ ಸಾಮಾನ್ಯ ಸಂಗ್ರಹಣಾ ನಿಧಿ ಮತ್ತು ಸರ್ಕಾರದ ಮೂಲಕ ಅನುದಾನವನ್ನು ಬಿಡುಗಡೆ ಮಾಡಿ ಹಂತ-ಹಂತವಾಗಿ ದುರಸ್ತಿ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದೇವೆ.

ಆದರೆ, ಮಾನ್ಯ ಸದಸ್ಯರು ಮಾತನಾಡುತ್ತಾ, "ಈಗ ದೇವಸ್ಥಾನದಲ್ಲಿ ಹಣ ಇದೆ. ಅದಕ್ಕೆ ಅನುಮತಿ ಕೊಟ್ಟರೆ ಅವರೇ ದುರಸ್ತಿಯನ್ನು ಮಾಡಿಕೊಳ್ಳುತ್ತಾರೆ" ಎಂದು ಹೇಳಿರುತ್ತಾರೆ. ಹಾಗಾಗಿ,

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದ ದೇವಸ್ಥಾನದಲ್ಲಿರುವ ಆಡಳಿತ ಮಂಡಳಿಯನ್ನು ವ್ಯವಸ್ಥಾಪನಾ ಸಮಿತಿ ಎಂದು ಏನು ಕರೆಯುತ್ತೇವೆ, ಅವರು ತಮ್ಮ ಅಧಿಕಾರಿಗಳ ಮೂಲಕ ಸಭೆ ನಡೆಸಿ ನಮಗೆ ಇಂತಹ ಯೋಜನೆಗೆ ಇಷ್ಟು ಹಣ ಬೇಕೆಂದು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟರೆ, ಸುಮಾರು ಒಂದು ಕೋಟಿಯವರೆಗೂ ಇರುವ ಯೋಜನೆಯ ಪ್ರಸ್ತಾವನೆಗೆ ಅನುಮೋದನೆ ಕೊಡುವುದಕ್ಕೆ ಜಿಲ್ಲಾಧಿಕಾರಿಯವರಿಗೆ ನಿರ್ದೇಶನ ನೀಡಲಾಗಿದೆ. ಆದರೆ, ಅದನ್ನು ಎರಡು ಕೋಟಿ ರೂಪಾಯಿವರೆಗೆ ಹೆಚ್ಚು ಮಾಡಬೇಕೆಂದು ಹೇಳಿದರೂ ಸಹ, ಅದಕ್ಕೂ ಸಹ ತಕ್ಷಣ ಅನುಮತಿ ಕೊಡುವಂತಹ ಕೆಲಸ ಮಾಡುತ್ತೇವೆ. ಒಂದು ವೇಳೆ ಅದಕ್ಕಿಂತಲೂ ಹೆಚ್ಚು ಯೋಜನೆಯಾದರೆ ಅದು ರಾಜ್ಯ ಸರ್ಕಾರಕ್ಕೆ ಬರುತ್ತದೆ. ಅಲ್ಲಿ ಮುಜರಾಯಿ ಇಲಾಖೆಯ ಆಯುಕ್ತರು, ಕಾರ್ಯದರ್ಶಿಯವರ ಮುಖಾಂತರ ಸದರಿ ಯೋಜನೆಗೆ ಅನುಮೋದನೆ ಕೊಡುವಂತಹ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಹಾಗಾಗಿ, ಯಾವ ದೇವಸ್ಥಾನದ ಆಡಳಿತ ಮಂಡಳಿ(ವ್ಯವಸ್ಥಾಪನಾ ಸಮಿತಿ) ನಮ್ಮಲ್ಲಿರುವ ದೇವಸ್ಥಾನದ ಹಣವನ್ನು ಖರ್ಚು ಮಾಡುವುದಕ್ಕೆ ನಮಗೆ ಅನುಮತಿ ಕೊಡಿ ಎಂದು ಕೇಳಿದರೆ, ಅದರ ಯೋಜನಾ ವರದಿಯ ಸಿದ್ಧತೆ ನೋಡಿಕೊಂಡು ಅನುಮತಿ ಕೊಡುವಂತಹ ಕೆಲಸವನ್ನು ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಮಾಡುವಂತಹ ಕ್ರಮವನ್ನು ಈಗಾಗಲೇ ಮಾಡಲಾಗಿದೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇದು ಯಾವ ರೀತಿ ಇದೆಯೆಂದರೆ, "ಹಟ್ಟಿ ತುಂಬಾ ಹಸು, ಹಾಲಿಗೆ ಮಾತ್ರ ತುಸು" ಎನ್ನುವ ರೀತಿ ಇದೆ. ಏಕೆಂದರೆ, ಆ ದೇವಸ್ಥಾನದಲ್ಲಿಯೇ ಹಣ ಇದೆ, ಕನಿಷ್ಠ ಪಕ್ಷ ಮಳೆ ಬಂದಾಗ ತುರ್ತು ಖರ್ಚಿಗೆ ಅನುಮತಿ ಪಡೆಯುವುದಕ್ಕೆ ಸರ್ಕಾರಕ್ಕೆ ಪತ್ರ ಬರೆಯಬೇಕೆಂದರೆ ಏನರ್ಥ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ಸರ್ಕಾರಕ್ಕೆ ಪತ್ರ ಬರೆಯಬೇಕಾಗಿಲ್ಲ. ಉದಾಹರಣೆಗೆ, ಒಂದು ದೇವಸ್ಥಾನದವರು ತುರ್ತು ಖರ್ಚಿಗಾಗಿ ಸುಮಾರು 25 ಲಕ್ಷ ಹಣ ಖರ್ಚು ಮಾಡಬೇಕೆಂದರೆ, ಅವರಿಗೆ ಆ ಹಣ ಖರ್ಚು ಮಾಡುವುದಕ್ಕೆ ಅಧಿಕಾರ ಇರುವುದಿಲ್ಲ. ಸ್ಥಳೀಯ ಆಡಳಿತ ಸಂಸ್ಥೆಯಲ್ಲಿಯೂ ಸಹ ಅದೇ ರೀತಿ ಇರುತ್ತದೆ. ಹಾಗಾಗಿ, ಕನಿಷ್ಠ ಪಕ್ಷ ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿಯವರಿಗಾದರೂ ಪ್ರಸ್ತಾವನೆ ಸಲ್ಲಿಸಿ, ಆ ಸ್ಥಳ ಪರಿಶೀಲನೆ ಮಾಡಿಸಿ ಅನುಮೋದನೆ ಪಡೆದುಕೊಳ್ಳುವಂತಹ ಸಂಪ್ರದಾಯ ಇದೆ.

**ಸಭಾಪತಿಯವರು:-** ಅದು ಸಂಪ್ರದಾಯ ಅಲ್ಲ. ಅದು ನಿಯಮ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದು ಮಾಡದೇ 25 ಲಕ್ಷ ಅಥವಾ 50 ಲಕ್ಷ ರೂಪಾಯಿ ಹಣ ಖರ್ಚು ಮಾಡಬೇಕೆಂದರೆ ಅದು ಆಗುವುದಿಲ್ಲ. ಅದಕ್ಕಾಗಿ ಅಲ್ಲಿ ಒಬ್ಬ ಅಧಿಕಾರಿ ಕೂಡ ಇದ್ದು, ಆ ಅಧಿಕಾರಿಯ ಮೂಲಕ ಗಳಿಸಬೇಕಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಯಾವುದಾದರೂ ದೇವಸ್ಥಾನದಲ್ಲಿ ಮಳೆ ಬಂದು ದೇವರ ಮೇಲೆ ನೀರು ಸೋರುವಂಥದ್ದಕ್ಕೆ 25 ಲಕ್ಷ ಅಥವಾ ಒಂದು ಕೋಟಿ ರೂಪಾಯಿ ಹಣ ಖರ್ಚಾಗುತ್ತದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವ ಪ್ರಕಾರ ಸುಮಾರು 10 ಸಾವಿರ 20 ಸಾವಿರ ರೂಪಾಯಿ ಹಣ ಖರ್ಚು ಮಾಡಬೇಕೆಂದರೆ, ಆ ಅಧಿಕಾರಿಗಳ ಮೂಲಕ ಯೋಜನೆ ಮಾಡಿ, ಹಣ ಖರ್ಚು ಮಾಡಿ, ಅನುಮೋದನೆ ಕೊಡುವಂತಹ ವ್ಯವಸ್ಥೆಗಳು ಸಹ ಇರುತ್ತದೆ. ಅಷ್ಟೇ ಅಲ್ಲದೇ, ಒಂದು ವೇಳೆ ಹಣ ಖರ್ಚು ಮಾಡದೇ ಅನುಮೋದನೆ ಕೇಳಿದರೆ ಅದನ್ನು ಸಹ ಕೊಡುತ್ತೇವೆ.

**ಸಭಾಪತಿಯವರು:-** ಈ ವಿಷಯದ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಆದರೆ ನಾನು ಕೇಳಿರುವ ಪ್ರಶ್ನೆಗೆ 9 ಜಿಲ್ಲೆಯ ಮಾಹಿತಿ ಮಾತ್ರ ನೀಡಿದ್ದು, ಉಳಿದ 21 ಜಿಲ್ಲೆಯ ಮಾಹಿತಿ ನೀಡಿಲ್ಲ ಅದು ಏತಕ್ಕೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳುತ್ತಿರುವ ವಿಚಾರ ಸರಿಯಿದೆ. ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ನಾವು 9 ಜಿಲ್ಲೆಯಲ್ಲಿ ಮಳೆಯಿಂದ ಹಾನಿಗೊಳಗಾದ ದೇವಸ್ಥಾನಗಳ ಮಾಹಿತಿಯನ್ನು ಒದಗಿಸಿರುತ್ತೇವೆ. ಆದರೆ ಅವರು, "ರಾಯಚೂರು ಜಿಲ್ಲೆ ಸೇರಿದಂತೆ ಇತರೆ ಜಿಲ್ಲೆಗಳಲ್ಲಿಯೂ ಕೂಡ ಕೆಲವು ದೇವಸ್ಥಾನಗಳಿಗೆ ಮಳೆಯಿಂದ ಹಾನಿಯಾಗಿದೆ ಎಂದು, ಆ ಉತ್ತರವನ್ನು ಏತಕ್ಕೆ ಕೊಟ್ಟಿರುವುದಿಲ್ಲ" ಎಂದು ಕೇಳಿರುತ್ತಾರೆ. 30 ಜಿಲ್ಲೆಗಳ ಮಾಹಿತಿಗಾಗಿ ನಾವು ಪತ್ರ ಬರೆದಾಗ, 9 ಜಿಲ್ಲೆಗಳಿಂದ ನಮಗೆ ಉತ್ತರ ಬಂದಿರುತ್ತದೆ. ಇನ್ನೂ ಕೆಲವು ಜಿಲ್ಲೆಗಳಿಂದ ಉತ್ತರ ಬಾರದೇ ಇರಬಹುದು. ಆದಾಗ್ಯೂ, ಮಾನ್ಯ ಸದಸ್ಯರು ಹೇಳಿರುವಂತಹ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಮತ್ತು ಅವರು ಹೇಳಿರುವಂತಹ ದೇವಸ್ಥಾನಗಳನ್ನು ಗಮನದಲ್ಲಿಟ್ಟುಕೊಂಡು ಮತ್ತೊಮ್ಮೆ ವರದಿಯನ್ನು ತರಿಸಿಕೊಳ್ಳುತ್ತೇವೆ. ಅದರ ಜೊತೆಗೆ, ಸದರಿ ದೇವಸ್ಥಾನಗಳ ದುರಸ್ಥಿ ಮಾಡಿಸುವುದಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಪ್ರತಿಯೊಂದಕ್ಕೂ ಸಮರ್ಥನೆ ಮಾಡಿಕೊಳ್ಳುವುದಕ್ಕೆ ನಮ್ಮ ಅಭ್ಯಂತರವೇನು ಇರುವುದಿಲ್ಲ. ಆದರೆ, ಯಾವುದಾದರೂ ಒಂದು ವಿಷಯದ ಬಗ್ಗೆ ಮಾಹಿತಿ ನೀಡುವಾಗ ಪೂರ್ಣ ಉತ್ತರ ನೀಡಬೇಕು. ಅದರ ಬದಲಾಗಿ, ಅರ್ಧಂಬರ್ಧ ಉತ್ತರ ನೀಡಿದರೆ ಹೇಗೆ? ನಾನು ಕೇವಲ 3 ದೇವಸ್ಥಾನಗಳ ಮಾಹಿತಿ ಮಾತ್ರ

ಹೇಳಿದ್ದು, ನನ್ನ ಬಳಿ ಸುಮಾರು 10 ಜಿಲ್ಲೆಗಳ ಮಾಹಿತಿ ಇರುತ್ತದೆ. ಆದರೆ, ನಮ್ಮ ಪ್ರಶ್ನೆಗೆ ಸರಿಯಾದ ಉತ್ತರ ನೀಡಿಲ್ಲವೆಂದರೆ, ನಾವು ಪ್ರಶ್ನೆ ಕೇಳಿ ಏನು ಪ್ರಯೋಜನ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಯಾವುದನ್ನು ಸಮರ್ಥನೆ ಮಾಡಿಕೊಂಡಿರುವುದಿಲ್ಲ. ಏಕೆಂದರೆ, ಮಾನ್ಯ ಯು.ಬಿ. ವೆಂಕಟೇಶ್‌ರವರ ಬಳಿ ಸಮರ್ಥನೆ ಮಾಡಿಕೊಂಡು ಬಚಾವಾಗುವುದಿಲ್ಲ ಎನ್ನುವುದು ನನಗೆ ಗೊತ್ತಿದೆ. ಹಾಗಾಗಿ, ವಾಸ್ತವಿಕ ವಿಚಾರ ಮಾತ್ರ ನಾನು ಹೇಳಿದ್ದೇನೆ. ಆದುದರಿಂದ, ಮಾನ್ಯ ಸದಸ್ಯರು ಏನು ಸಲಹೆ ಕೊಡುತ್ತಾರೆ ಅದನ್ನು ತೆಗೆದುಕೊಂಡು ಮುಂದೆ ಅದನ್ನು ದುರಸ್ಥಿ ಮಾಡಿಸುವುದಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರ ಪ್ರಶ್ನೆಗೆ ನಂತರ ಸಂಪೂರ್ಣ ಮಾಹಿತಿ ಒದಗಿಸಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಆ) <u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 15ನೇ ಡಿಸೆಂಬರ್ 2021, ಸಮೂಹ-3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 125 ಪ್ರಶ್ನೆಗಳ ಪೈಕಿ 75 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

(1101) 15.12.2021 1.00 YL-GR (ಸಭಾಪತಿಯವರ ಉಪಸ್ಥಿತಿ)

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಷಯ:- ಬೆಂಗಳೂರಿನ ಆರ್.ಟಿ.ಓ. ಕಛೇರಿಯಲ್ಲಿ ನಕಲಿ ನೋಂದಣಿ ಮಾಡುವ ಮೂಲಕ ತೆರಿಗೆ ವಂಚಿಸುತ್ತಿರುವ ಬಗ್ಗೆ.**

\- - - - - -

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರಿನ ಆರ್‌ಟಿಓ ಕಛೇರಿಯಲ್ಲಿ ಸಾರಿಗೆ ಇಲಾಖೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಏಜೆಂಟರೊಂದಿಗೆ ಶಾಮೀಲಾಗಿ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿಗಳ ತೆರಿಗೆ ವಂಚಿಸಿ ಭ್ರಷ್ಟಾಚಾರ ನಡೆಸುತ್ತಿರುವ ಕುರಿತು ಪತ್ರಿಕಾ ಮಾಧ್ಯಮದಲ್ಲಿ ವರದಿಯಾಗಿದೆ. ತೆರಿಗೆ ಪಾವತಿಸಿಕೊಳ್ಳದೆಯೇ ಐಷಾರಾಮಿ ಕಾರುಗಳ ನಕಲಿ ನೋಂದಣಿ ಮಾಡಿ ಸರ್ಕಾರಕ್ಕೆ ವಂಚಿಸುತ್ತಿರುವುದು ಪ್ರಮುಖ ಆರೋಪ. ಕೋರಮಂಗಲ ಆರ್.ಟಿ.ಓ. ಹಾಗೂ ಇಂದಿರಾನಗರ ಆರ್.ಟಿ.ಓ. ಕಛೇರಿಗಳಲ್ಲಿ 100 ಕ್ಕೂ ಹೆಚ್ಚು ಐಷಾರಾಮಿ ಕಾರುಗಳ ಜೀವಿತಾವಧಿ ತೆರಿಗೆ ಪಾವತಿಸಿಕೊಳ್ಳದೆಯೇ ನೋಂದಣಿ ಮಾಡಿರುವುದರ ಕುರಿತು ಸಮಗ್ರ ತನಿಖೆಯ ಅಗತ್ಯವಿದೆ. ಐಷಾರಾಮಿ ಕಾರುಗಳ ಮೌಲ್ಯ ಆಧರಿಸಿ ಜೀವಿತಾವಧಿ ತೆರಿಗೆ ವಿಧಿಸಲಾಗುತ್ತಿದ್ದು, ಅದು ವಾಹನ ಮೌಲ್ಯದ ಮೇಲೆ ಶೇ. 18 ರಷ್ಟು ತೆರಿಗೆ ಹಾಗೂ ಶೇ. 11 ರಷ್ಟು ಸೆಸ್ ಪಾವತಿಸಬೇಕಿದೆ. ಏಜೆಂಟರ ಜೊತೆ ಶಾಮೀಲಾಗಿರುವ ಅಧಿಕಾರಿಗಳು ಬೇರೆ ಕಛೇರಿಯಲ್ಲಿ ನೋಂದಣಿಯಾಗಿರುವ ತೆರಿಗೆ ಪಾವತಿಯ ಚಲನ್ ಸಂಖ್ಯೆಯನ್ನು ವಾಹನ-1 ರಲ್ಲಿ ನಮೂದಿಸಿ ವಂಚಿಸುವುದರ ಮೂಲಕ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಕೋರಮಂಗಲ ಆರ್‌ಟಿಓ ಹಾಗೂ ಇಂದಿರಾನಗರ ಆರ್‌ಟಿಓ ಕಛೇರಿಯ ಎಲ್ಲಾ ಅದಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಕೂಡಲೇ ಬೇರೆ ಸ್ಥಳಗಳಿಗೆ ವರ್ಗಾಯಿಸಿ ಸಮಗ್ರ ನ್ಯಾಯಯುತ ತನಿಖೆಗೆ ಅವಕಾಶ ಮಾಡಿಕೊಡುವಂತೆ ಹಾಗೂ ಈ ಕುರಿತು ಪೊಲೀಸ್ ಕೇಸು ದಾಖಲಿಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳುವ ಮೂಲಕ ಈ ನಕಲಿ ನೋಂದಣಿ ಜಾಲಕ್ಕೆ ಬ್ರೇಕ್ ಹಾಕುವ ತುರ್ತು ಅವಶ್ಯಕತೆಯ ಕುರಿತು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಸಾರಿಗೆ ಸಚಿವರಿಂದ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಆ) ವಿಷಯ:- ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ಫಾಗಿಂಗ್ ಕೆಲಸಕ್ಕೆ ಟೆಂಡರ್ ಕರೆಯದೇ ಅವ್ಯವಹಾರ ನಡೆದಿರುವ ಬಗ್ಗೆ.**

\- - - - - - -

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ಧೂಮೀಕರಣ (ಫಾಗಿಂಗ್) ಮಾಡುವ ಕೆಲಸಕ್ಕೆ ಟೆಂಡರ್ ಕರೆಯದೆಯೇ ದರಪಟ್ಟಿ ಆಧಾರದಲ್ಲಿ ಏಜೆನ್ಸಿಗಳನ್ನು ನೇಮಿಸಿಕೊಂಡು ಕೆ.ಟಿ.ಪಿ.ಪಿ. ನಿಯಮ ಉಲ್ಲಂಘಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಲೆಕ್ಕಪರಿಶೋಧನಾ ವರದಿಯಲ್ಲಿ ರೂ.11.23 ಕೋಟಿ ರೂ.ಗಳಿಗೆ ಆಕ್ಷೇಪಣೆ ವ್ಯಕ್ತಪಡಿಸಿ, ರೂ.6.00 ಕೋಟಿಗಳ ವಸೂಲಾತಿಗೆ ಶಿಫಾರಸ್ಸು ಮಾಡಲಾಗಿದೆ ಹಾಗೂ ಸೊಳ್ಳೆ ನಿಯಂತ್ರಣ ಕಾಮಗಾರಿಯಲ್ಲಿ ನಡೆದಿರುವ ಅಕ್ರಮಗಳನ್ನು ಎಳೆ ಎಳೆಯಾಗಿ ಬಿಚ್ಚಿಡಲಾಗಿದೆ. ಸೊಳ್ಳೆ ನಿಯಂತ್ರಣ ಕಾರ್ಯದ ಗುತ್ತಿಗೆಗೆ ಸಂಬಂಧಪಟ್ಟ ಮಂಜೂರಾದ ಅಂದಾಜುಪಟ್ಟಿಗಳೇ ಇಲ್ಲ. ಟೆಂಡರ್ ಅಂಗೀಕಾರ ಪತ್ರ, ಕರಾರು ಪತ್ರ, ಭದ್ರತಾ ಠೇವಣಿ ರಿಜಿಸ್ಟರ್, ಆರ್ಥಿಕ ಸದೃಢತೆಯ 2 ವರ್ಷಗಳ ಆಡಿಟ್ ವರದಿ, ಆದಾಯ ತೆರಿಗೆ ವರದಿ ದಾಖಲಾತಿಗಳು ಗುತ್ತಿಗೆ ಸಂಸ್ಥೆಯ ಹೆಸರಿನಲ್ಲಿ ಇರುವುದಿಲ್ಲ. ಟೆಂಡರ್ ಅವಧಿ ಮುಗಿದ ತರುವಾಯವು ಅನುಮೋದನೆ ಪಡೆದಿರುವುದಕ್ಕೆ ಯಾವುದೇ ದಾಖಲೆ ಒದಗಿಸಿರುವುದಿಲ್ಲ. ಅಲ್ಲದೆ, ಈ ಸಂಬಂಧದ ಜಾಗೃತಿ ಕಾರ್ಯಕ್ರಮದಲ್ಲೂ ಆಯುಕ್ತರ ಅನುಮೋದನೆ ಇಲ್ಲದೆ, ಶ್ರೀ ಲಕ್ಷ್ಮೀ ನರಸಿಂಹ ಎಂಟರ್ ಪ್ರೈಸಸ್‌ಗೆ ಒಂದು ವರ್ಷಕ್ಕೆ ರೂ.5.88 ಲಕ್ಷಗಳನ್ನು ಪಾವತಿಸಲಾಗಿದೆ.

ಕೆಟಿಪಿಪಿ ನಿಯಮಗಳನ್ನು ಉಲ್ಲಂಘಿಸಿ ನಡೆದಿರುವ ಈ ಅವ್ಯವಹಾರವನ್ನು ತನಿಖೆಗೊಳಪಡಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಇ) ವಿಷಯ:- ಮಂಗಳೂರು ನಗರ ವ್ಯಾಪ್ತಿಯಲ್ಲಿ ಕಳ್ಳತನ, ದೌರ್ಜನ್ಯ, ಅನೈತಿಕ ಪ್ರಕರಣಗಳು ಬೆಳಕಿಗೆ ಬಂದಿರುವ ಬಗ್ಗೆ.**

- - - - - - - - -

**ಶ್ರೀ ಕೆ.ಹರೀಶ್ ಕುಮಾರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಂಗಳೂರು ನಗರ ವ್ಯಾಪ್ತಿಯ ಸ್ಟೇಟ್ ಬ್ಯಾಂಕ್ ಸಮೀಪದ ಖಾಸಗಿ ಬಸ್ ನಿಲ್ದಾಣದ ಬಳಿ ಯುವಕರ ತಂಡವೊಂದು ಉಡುಪಿಗೆ ತೆರಳುತ್ತಿದ್ದ ಯುವಕ ಯುವತಿಯರ ವಿಳಾಸ ಕೇಳುವ ನೆಪದಲ್ಲಿ ಹಲ್ಲೆಗೈದಿರುವ ಘಟನೆ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಅದೇ ರೀತಿ ಮಂಗಳೂರು ನಗರ ವ್ಯಾಪ್ತಿಯ ನೀರು ಮಾರ್ಗ ಸಮೀಪದ ಪಡು ಪೋಸ್ಟ್ ಆಫೀಸ್ ಬಳಿಯ ಬಿತ್‌ಪಾದೆ ಎಂಬಲ್ಲಿ ಯುವಕನೋರ್ವನ ಮೇಲೆ ಯುವಕರ ಗುಂಪೊಂದು ಆತನ ಕಾರು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಅನೈತಿಕ ಪೊಲೀಸ್‌ಗಿರಿ ಪ್ರದರ್ಶಿಸಿರುವುದು ಸಹ ವರದಿಯಾಗಿರುತ್ತದೆ.

ಮುಂದುವರೆದು, 3 ವರ್ಷದ ಮಗುವಿನ ಮೇಲೆ ಅತ್ಯಾಚಾರ ಮತ್ತು ಕೊಲೆ, ವ್ಯಾಪಕ ಕಳ್ಳತನ/ಕೆಲವು ತಿಂಗಳುಗಳಿಂದ ನಿರಂತರ ಅನೈತಿಕ ಚಟುವಟಿಕೆಗಳಿಂದ ಮಂಗಳೂರು ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿರುವುದು ಸಹ ಜನರಲ್ಲಿ ಭಯದ ವಾತಾವರಣವನ್ನುಂಟು ಮಾಡಿರುತ್ತದೆ.

ಹೀಗೆ ಮಂಗಳೂರಿನಲ್ಲಿ ಪದೇ ಪದೇ ಇಂತಹ ಅನೈತಿಕ ಪೊಲೀಸ್‌ಗಿರಿಯಂತಹ ಪ್ರಕರಣಗಳು ಮರುಕಳಿಸುತ್ತಿದ್ದು, ಇದರಿಂದ ವಿದ್ಯಾರ್ಥಿ ಹಾಗೂ ಮಹಿಳೆಯರು ಮತ್ತು ಸಾರ್ವಜನಿಕರ ಮೇಲೆ ನಿರಂತರ ದೌರ್ಜನ್ಯಗಳು ಸಂಭವಿಸುತ್ತಿವೆ. ಆ ಕಾರಣ, ಸರ್ಕಾರ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಇಂತಹ ಅನೈತಿಕ ಪೊಲೀಸ್‌ಗಿರಿಗೆ ಕಡಿವಾಣ ಹಾಕಬೇಕು, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕೆನ್ನುವ ವಿಷಯವನ್ನು ಶೂನ್ಯವೇಳೆಯಲ್ಲಿ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಮಾನ್ಯ ಗೃಹ ಸಚಿವರಿಂದ ಉತ್ತರ ಒದಗಿಸಲಾಗುವುದು.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಈ) ವಿಷಯ:- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪಿಹೆಚ್.ಡಿ. ಸ್ಕಾಲರ್‌ಷಿಪ್‌ಗೆ ವಯಸ್ಸಿನ ಮಿತಿ ನಿಗದಿ ಮಾಡಿರುವ ಕುರಿತು.**

- - - - - -

**ಡಾ: ತಳವಾರ ಸಾಬಣ್ಣ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪಿಹೆಚ್.ಡಿ ಸ್ಕಾಲರ್‌ಶಿಪ್‌ಗೆ ವಯಸ್ಸಿನ ಮಿತಿ ನಿಗದಿಗೊಳಿಸಿರುವುದರಿಂದ ರಾಜ್ಯದ ಸಾವಿರಾರು ಸಂಶೋಧನಾ ವಿದ್ಯಾರ್ಥಿಗಳು ಫೆಲೋಶಿಪ್‌ಗೆ ಅರ್ಜಿ ಸಲ್ಲಿಸಲು ಆಗದೆ ವಂಚಿತರಾಗಿದ್ದಾರೆ. 2021-22ನೇ ಸಾಲಿನಲ್ಲಿ ಪ್ರಥಮ ವರ್ಷದ ಪಿಹೆಚ್.ಡಿ ಅಧ್ಯಯನಕ್ಕೆ ನೋಂದಣಿ ಮಾಡಿಕೊಂಡಿರುವವರಿಗಾಗಿ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಆದರೆ, ವಯೋಮಿತಿ ನಿಗದಿ ಮಾಡಿರುವುದರಿಂದ ಸಾವಿರಾರು ಅಭ್ಯರ್ಥಿಗಳು ಈ ವಿದ್ಯಾರ್ಥಿ ವೇತನದಿಂದ ವಂಚಿತರಾಗುವಂತಾಗಿದೆ. ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಸೂಚನೆಯಲ್ಲಿ 35 ವಯಸ್ಸು ನಿಗದಿಪಡಿಸಲಾಗಿದೆ. ರಾಜ್ಯದ ಗುಲ್ಬರ್ಗಾ ವಿಶ್ವವಿದ್ಯಾಲಯ ಸೇರಿದಂತೆ ಅನೇಕ ವಿಶ್ವವಿದ್ಯಾಲಯಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಪಿ.ಹೆಚ್.ಡಿ. ಗೆ ನೋಂದಣಿ ಮಾಡಿಕೊಂಡಿದ್ದಾರೆ. ಆದರೆ ವಯೋಮಿತಿ ನಿಗದಿ ಮಾಡಿರುವುದರಿಂದ ಅರ್ಜಿ ಸಲ್ಲಿಸಲು ತೊಂದರೆಯಾಗುತ್ತಿದೆ. ಈ ಫೆಲೋಶಿಪ್‌ಗೆ ಆಯ್ಕೆಯಾದ ಸಂಶೋಧನ ವಿದ್ಯಾರ್ಥಿಗಳಿಗೆ ಮೂರು ವರ್ಷಗಳ ವರೆಗೆ ಪ್ರತಿ ತಿಂಗಳು ರೂ.10,000 ಸಿಗಲಿದೆ. ಇದು ಸಂಶೋಧನಾ ವಿದ್ಯಾರ್ಥಿಗಳಿಗೆ ಸಂಶೋಧನಾ ಖರ್ಚು-ವೆಚ್ಚಗಳಿಗೆ ಅನುಕೂಲ ಆಗಲಿದೆ. ಯಾವುದೇ ವಿಶ್ವವಿದ್ಯಾಲಯದಲ್ಲಿ ಪಿಹೆಚ್.ಡಿ ಮಾಡಲು ಉನ್ನತ ಶಿಕ್ಷಣ ಪಡೆಯಲು ವಯೋಮಿತಿ ಎಷ್ಟಿರಬೇಕು ಎಂದು ನಿಗದಿ ಮಾಡಿಲ್ಲ. ಆದರೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಯೋಮಿತಿ ನಿಗದಿ ಮಾಡಿರುವುದು ಏಕೆ ಎಂಬುದು ಸಂಶೋಧನಾ ವಿದ್ಯಾರ್ಥಿಗಳ ಪ್ರಶ್ನೆಯಾಗಿದೆ.

ಸ್ನಾತಕೋತ್ತರ ಪದವಿಯನ್ನು ಮುಗಿಸಿದ ತಕ್ಷಣ ಪಿಹೆಚ್.ಡಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ಸೀಟು ಸಿಗುವುದಿಲ್ಲ. ಹಲವಾರು ವರ್ಷಗಳು ಕಾಯ್ದು ಪಿಹೆಚ್.ಡಿ ಪ್ರವೇಶವನ್ನು ಪಡೆಯುತ್ತಾರೆ. ಹಾಗೂ ಹೆಚ್ಚಿನ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶಗಳಿಂದ ಬಂದಿರುತ್ತಾರೆ. ಫೇಲೋಶಿಪ್ ಸಲುವಾಗಿ 35 ವಯಸ್ಸಿನ ವಯೋಮಿತಿಯನ್ನು ನಿಗದಿಪಡಿಸಿದರೆ ಪಿಹೆಚ್.ಡಿ ಜೊತೆಗೆ ಜೀವನ ನಿರ್ವಹಣೆ ಕಷ್ಟವಾಗುತ್ತದೆ. ಕಾರಣ ಸನ್ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಪಿಹೆಚ್.ಡಿ ಫೇಲೋಶಿಪ್‌ಗಾಗಿ ನಿಗದಿಪಡಿಸಿದ ವಯೋಮಿತಿಯನ್ನು ಸಡಿಲಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪಿಹೆಚ್.ಡಿ. ಸ್ಕಾಲರ್‌ಶಿಫ್‌ಗೆ ಇರುವಂಥ ವಯೋಮಿತಿಯನ್ನು ಸಡಿಲಗೊಳಿಸಬೇಕೆಂದು ತಿಳಿಸಿದ್ದಾರೆ. ಈ ಸಂಬಂಧ ಅಧಿಕಾರಿಗಳನ್ನು ಕರೆದು ನಾಳೆ ಸಂಜೆಯೊಳಗೆ ಮಾತನಾಡಿ ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಉ) ವಿಷಯ:- ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಒಳಪಡುವ ರಸ್ತೆಗಳಿಗೆ ಪದೇ ಪದೇ ಡಾಂಬರೀಕರಣ ಹಾಗೂ ಗುಂಡಿ ಮುಚ್ಚುವುದರಿಂದ ಸರ್ಕಾರದ ಹಣ ಪೋಲಾಗುತ್ತಿರುವ ಬಗ್ಗೆ.**

- - - - - - - -

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೊಳಪಡುವ ರಸ್ತೆಗಳಿಗೆ ಪದೇ ಪದೇ ಡಾಂಬರೀಕರಣ ಹಾಗೂ ಗುಂಡಿ ಮುಚ್ಚುವುದರಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳು ಪೋಲಾಗುತ್ತಿರುವ ಈ ವಿಚಾರವು ಶೂನ್ಯ ವೇಳೆಯಲ್ಲಿ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿಯನ್ನು ಕೋರುತ್ತೇನೆ.

ರಾಜ್ಯ ರಾಜಧಾನಿ ಬೆಂಗಳೂರು ನಗರದಲ್ಲಿ ರಸ್ತೆಗಳಿಗೆ ಪದೇ ಪದೇ ಡಾಂಬರೀಕರಣ ಹಾಕುವ ಬಗ್ಗೆ ಹಾಗೂ ರಸ್ತೆ ಗುಂಡಿಗಳ ಕಾಮಗಾರಿಗಳನ್ನು ನಿರಂತರವಾಗಿ ನಿರ್ವಹಿಸುತ್ತಿರುವುದು ಸಾರ್ವಜನಿಕ ಆಕ್ರೋಶಕ್ಕೆ ಕಾರಣವಾಗಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈ ಕಾಮಗಾರಿಗಳಿಗೆ ಕಳೆದ 5 ವರ್ಷಗಳಿಂದ 20,060 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಸದನಕ್ಕೆ ಮಾಹಿತಿಯನ್ನು ನೀಡಿರುತ್ತಾರೆ. ಅದಲ್ಲದೇ ಬೆಂಗಳೂರು ರಸ್ತೆಗಳಲ್ಲಿ ಒಂದು ರಸ್ತೆಯೂ ಸಹ ಗುಂಡಿ ಮುಕ್ತವಾಗಿಲ್ಲ ಎಂದು ಸರ್ಕಾರವೇ ಹೇಳಿದೆ. ನಗರದ 11,283.05 ಕಿ.ಮೀ. ರಸ್ತೆಯ ಪೈಕಿ ಒಂದು ಕಿ.ಮೀ. ರಸ್ತೆಯೂ ಗುಂಡಿ ಇಲ್ಲದ ರಸ್ತೆ ಇಲ್ಲ. ಆರ್ಟಿರಿಯಲ್ ಹಾಗೂ ಸಬ್ ಆರ್ಟಿರಿಯಲ್ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಲ್ಲವೆಂದು ಒಪ್ಪಿಕೊಂಡಿದ್ದಾರೆ. ಕಳೆದ 5 ವರ್ಷಗಳಿಂದ ನಗರ ರಸ್ತೆಗಳಿಗೆ ಇಷ್ಟು ದೊಡ್ಡ ಪ್ರಮಾಣದ ಸಾರ್ವಜನಿಕರ ಹಣವನ್ನು ಪೋಲು ಮಾಡಿದರೂ ಸಹ ರಸ್ತೆಗಳು ಸಂಚಾರಕ್ಕೆ ಮುಕ್ತವಾಗಿಲ್ಲದಿರುವುದು ಖೇದಕರವಾದ ಸಂಗತಿಯಾಗಿದೆ.

ಆದ್ದರಿಂದ ಪದೇ ಪದೇ ಕಾಮಗಾರಿಗಳನ್ನು ಮಾಡಿಸಿದ ರಸ್ತೆಗಳಿಗೆ ಕಾಮಗಾರಿಗಳನ್ನು ನಡೆಸುವುದನ್ನು ತಪ್ಪಿಸಲು ಸರ್ಕಾರವು ಕಠಿಣ ಕ್ರಮಕೈಗೊಳ್ಳುವ ಸಲುವಾಗಿ ರಸ್ತೆಗಳ ಬಗ್ಗೆ ಮುಖ್ಯವಾಗಿ ಈ ಪರಿಷತ್ ಸಭೆಯಲ್ಲಿ ನೀಡಿದ ಆಶ್ವಾಸನೆಯಂತೆ ರಸ್ತೆಗಳ ನಿರ್ವಹಣೆಯ ಬಗ್ಗೆ ಲೆಕ್ಕ ಪರಿಶೋಧನೆಯನ್ನು (audit) ನಡೆಸಿ ಈ ರೀತಿಯ ಅಕ್ರಮಗಳು ನಡೆಯದಂತೆ ಸರ್ಕಾರವು ಮುಂಜಾಗ್ರತೆ ಕ್ರಮವಹಿಸಿ, ಒಂದೇ ಕಾಮಗಾರಿಗೆ ಎರಡು/ಮೂರು ಬಾರಿ ಹಣವನ್ನು ಪಾವತಿಸಿರುವ ಪ್ರಕರಣಗಳಿದ್ದಲ್ಲಿ, ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕ್ರಮಕೈಗೊಂಡು ಮುಂದೆ ನಡೆಯುವ ರಸ್ತೆಗಳಿಗೆ ಡಾಂಬರೀಕರಣಗಳ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ಟೆಂಡರನ್ನು ನೀಡುವಾಗ ಲೆಕ್ಕ ಪರಿಶೋಧನೆಗೆ (audit) ಒಳಪಡಿಸಿ ಕಾಮಗಾರಿಗಳಿಗೆ ಅನುಮೋದನೆ ನೀಡುವಂತೆ ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸಲಾಗುವುದು.

(ಮುಂದು)

(1102) 15-12-2021 /1.10/SK-GR

(ಸಭಾಪತಿಯವರ ಉಪಸ್ಥಿತಿ)

ಊ) ವಿಷಯ:- ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಿ.ಇ.ಟಿ-2021ರ ಎಂಜಿನಯರಿಂಗ್ 2ನೇ ಹಂತದ ಆಯ್ಕೆ ಪ್ರಕ್ರಿಯೆಯಲ್ಲಿ ವಿಧಿಸಿರುವ ಷರತ್ತುಗಳು ಬಗ್ಗೆ.

- - - - - - -

**ಶ್ರೀ ಶಶೀಲ್ ಜಿ.** ನಮೋಶಿ **(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಿ.ಇ.ಟಿ-2021ರ ಎಂಜಿನಿಯರಿಂಗ್ ಹಾಗೂ ಇತರೆ ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತಾ, 2ನೇ ಹಂತದ ಆಯ್ಕೆಯ ಇಚ್ಛೆ ಪೂರ್ಣಗೊಳಿಸಿದೆ. ಆದರೆ 2ನೇ ಹಂತದಲ್ಲಿ ಇಚ್ಛಾನುಸಾರ ಸೀಟು ಪಡೆದ ವಿದ್ಯಾರ್ಥಿಗಳು ಅವರ ಪಾಲಕರು ಕೆ.ಇ.ಎ ಅವರ ಆದೇಶದಿಂದ ದ್ವಂದ್ವದಲ್ಲಿದ್ದಾರೆ. ಈ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವಿಧಿಸಿದ ಷರತ್ತು ಶೈಕ್ಷಣಿಕ ದೃಷ್ಟಿಯಿಂದ ಸ್ವತಂತ್ರ ಕಲಿಕೆಗೆ ಮಾರಕವಾಗುವ ಹಿನ್ನೆಲೆಯಲ್ಲಿ ಅವರಿಗೆ ದಾರಿ ಕಾಣದಂತೆ ಮಾಡಿದೆ.

2ನೇ ಸುತ್ತಿನಲ್ಲಿ ಸೀಟು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಮುಂದುವರೆದರೆ ಅಥವಾ ಪ್ರವೇಶ ಪಡೆದರೆ ಆ ವಿದ್ಯಾರ್ಥಿಗಳು ನೀಟ್-2021ರಲ್ಲಿ ಭಾಗವಹಿಸುವಂತಿಲ್ಲ. ಅಲ್ಲದೆ ಅವರು ಆಯ್ಕೆ 04ರಲ್ಲಿ ತಮ್ಮ ಸೀಟ್ ಪಡೆದುಕೊಂಡಲ್ಲಿ ಎಂಜಿನಿಯರಿಂಗ್ ಸೀಟು ಕೇಳಲು ಅವಕಾಶವಿಲ್ಲ. ನೀಟ್ ಅಣುಕು ಪರೀಕ್ಷೆಯ ಪಡೆಯದಿರುವುದರಿಂದ ಉತ್ತಮ ಅಂಕಗಳೊಂದಿಗೆ (500 ಅಂಕಗಳು ಆಸುಪಾಸು) ಇದ್ದ ವಿದ್ಯಾರ್ಥಿಗಳಿಗೆ ಯಾವುದು ಆಯ್ಕೆ ಮಾಡಿಕೊಳ್ಳುವರು ಎಂಬುದು ಅರ್ಥವಾಗುತ್ತಿಲ್ಲ. ಒಂದು ವೇಳೆ ಎಂಜಿನಿಯರಿಂಗ್ ಬಿಟ್ಟು ವೈದ್ಯಕೀಯಕ್ಕೆ ಬಂದರೆ ಸೀಟು ಸಿಗುತ್ತದೆ ಎಂಬುದು ಖಚಿತ ಇಲ್ಲ. ಕಾರಣ ಎಂಜಿನಿಯರಿಂಗ್ ಸೀಟು ಪಡೆದ ವಿದ್ಯಾರ್ಥಿಗಳಿಗೂ ನೀಟ್-2021ರಲ್ಲಿ ಅವಕಾಶ ಕಲ್ಪಿಸಿ ವೈದ್ಯಕೀಯ ಸೀಟು ದೊರೆತು ಅವರು ಎಂಜಿನಿಯರಿಂಗ್ ಬಿಟ್ಟು ಕೊಟ್ಟಲ್ಲಿ ಆ ಸೀಟು ಸರ್ಕಾರಿ ಕೋಟಾದಡಿ ಕಾಯ್ದಿರಿಸಿ, ಆ ಸೀಟನ್ನು ಮುಂದಿನ ಶ್ರೇಣಿಯಲ್ಲಿರುವ ವಿದ್ಯಾರ್ಥಿಗಳಿಗೆ ಸರ್ಕಾರಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟಾದಡಿ ನೀಡಿ ಪ್ರಕ್ರಿಯೆ ಮುಂದುವರೆಸಬೇಕು. ನೀಟ್ ಪ್ರಾರಂಭವಾಗದಿರುವ ಕಾರಣದಿಂದ ಈ ಸಮಸ್ಯೆ ಉಂಟಾಗಿದೆ. ನೀಟ್ ನಮ್ಮ ಕೋಟಾ ಶೇಕಡ 85 ರಷ್ಟು ಸೀಟ್‌ಗಳನ್ನು ತಕ್ಷಣ ಕೌನ್ಸಿಲಿಂಗ್ ಪ್ರಾರಂಭಿಸಬೇಕು. ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿ, ಈ ವಿಚಾರವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವರಿಗೆ ಸೂಕ್ತ ನಿರ್ದೇಶನ ನೀಡಲು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಒದಗಿಸಲಾಗುವುದು.

ಖ) ವಿಷಯ:- ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ 257 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು 2021-22ನೇ ಶೈಕ್ಷಣಿಕ ವರ್ಷ ಪ್ರಾರಂಭಗೊಂಡ ನಂತರ ನೇಮಕಾತಿ ಮಾಡಲು ಆರ್ಥಿಕ ಇಲಾಖೆ ಅನುಮತಿಸಿರುವ ಬಗ್ಗೆ.

- - - - - -

**ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಪದವೀಧರ ಕ್ಷೇತ್ರ ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಸರ್ಕಾರವು ಈಗಾಗಲೇ 2015ರ ವರೆಗೆ ಅನುದಾನಿತ ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಬೋಧಕ ಹುದ್ದೆಗಳನ್ನು ತುಂಬಿಕೊಳ್ಳಲು ಆದೇಶಿಸಿದ್ದು, ಅದರಂತೆ ಅನೇಕ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳು ಅನುದಾನಿತ ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಆಯುಕ್ತರಿಂದ ಅನುಮತಿ ಪಡೆದಿದ್ದು, ಅನುಮತಿಯಲ್ಲಿ ಸೂಚಿಸಿದ ನೇಮಕಾತಿ ಬಿಂದುವಿನಂತೆ ಪತ್ರಿಕೆಯಲ್ಲಿ ಜಾಹಿರಾತು ಪ್ರಕಟಿಸಿರುತ್ತಾರೆ.

ಈ ಪ್ರಕಟಣೆಯಂತೆ ಬೋಧಕ ಹುದ್ದೆಗೆ ಅರ್ಜಿ ಸಲ್ಲಿಸಿ, ಸಂಸ್ಥೆಗಳ ಆಡಳಿತ ಮಂಡಳಿಯವರು ಸಂದರ್ಶನಕ್ಕೆ ಕರೆದು ಉಪ ನಿರ್ದೇಶಕರ ಕಛೇರಿ ವಿಷಯ ಪರಿವೀಕ್ಷಕರ ಎದುರು ನೇಮಕಾತಿ ಮಾಡಲಾಗಿದೆ. ನೇಮಕಾತಿ ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಚೆಕ್ ಲಿಸ್ಟನಂತೆ ಉಪ ನಿರ್ದೇಶಕರು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತದನಂತರ ಆಯಾ ಆಯುಕ್ತರ ಕಾರ್ಯಾಲಯದಲ್ಲೂ ಈ ನೇಮಕಾತಿಯ ಸಂಬಂಧಕ್ಕೆ ಅನುಮೋದನೆ ನೀಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಆದಾಗ್ಯೂ ಸರ್ಕಾರದ ಪತ್ರ ಸಂಖ್ಯೆ:ಇಪಿ:59:ಎಸ್‌ಇಎಸ್ 2020, ದಿನಾಂಕ 05.07.2021ರ ಪತ್ರದಲ್ಲಿ 2015ರ ಪೂರ್ವದಲ್ಲಿ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ನಿವೃತ್ತಿ, ಮರಣ, ರಾಜೀನಾಮೆ ಮತ್ತು ಇತರೆ ಕಾರಣಗಳಿಂದ ಖಾಲಿಯಿರುವ ಹುದ್ದೆಗಳ ಪೈಕಿ ಈಗಾಗಲೇ ಸರ್ಕಾರದಿಂದ ಅನುಮೋದನೆಗೊಂಡು ನೇಮಕಾತಿ ಪ್ರಕ್ರಿಯೆಯು ಇಲಾಖೆ ಹಂತದಲ್ಲಿ ಬಾಕಿ ಇರುವ 257 ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ನೇಮಕಾತಿ ಆದೇಶವನ್ನು 2021-22ನೇ ಶೈಕ್ಷಣಿಕ ವರ್ಷ ಪ್ರಾರಂಭಗೊಂಡ ನಂತರ ನೀಡಲು ಸರ್ಕಾರದ ಸಹಮತಿ ನೀಡಲಾಗಿದೆ ಎಂದು ಆರ್ಥಿಕ ಇಲಾಖೆ ಅಭಿಪ್ರಾಯ ನೀಡಿದೆ. ಅದರಂತೆ 257 ಕಡತ ಹೊಂದಿರುವ ಖಾಲಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಅನುಮೋದಿಸಿದೆ ಎಂದು ತಿಳಿಸಿದೆ.

ಆದರೆ ಅಂತಿಮವಾಗಿ ಜಾಹಿರಾತು ನೀಡುವ ಸಂಬಂಧ ಗೊಂದಲ ಸೃಷ್ಟಿಯಾಗಿ ಈಗಾಲೇ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಅನುದಾನ ದೊರೆತಿರುವುದಿಲ್ಲ. ಈಗಾಗಲೇ ನೇಮಕಾತಿಗೊಂಡ ಶಿಕ್ಷಕರುಗಳ ಕುಟುಂಬಗಳು ಸಂಕಷ್ಟದಲ್ಲಿವೆ. ಆದ್ದರಿಂದ ಈ ನೇಮಕಾತಿ ಸಂಬಂಧ ಆಗಿರುವ ತೊಂದರೆ ನಿವಾರಣೆ ಮಾಡಿ, ನೇಮಕಾತಿ ಆದೇಶವನ್ನು ನೀಡಿ ಮತ್ತು ಅನುದಾನ ಬಿಡುಗಡೆ ಮಾಡುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಗೆ ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಶೂನ್ಯವೇಳೆ ಪ್ರಶ್ನೆಗೆ ಬೇಗ ಬೇಗ ಉತ್ತರವನ್ನು ಕೊಡಿಸಬೇಕು. ಇವತ್ತಿನಿಂದ ಶುಕ್ರವಾರದವರೆಗೆ ಕೆಲವಾದರೂ ಉತ್ತರ ಕೊಡಿಸಿ ಮತ್ತು ಲಿಖಿತ ಮೂಲಕ ಉತ್ತರವನ್ನು ಕೊಡಿಸಿ. ಮಾನ್ಯ ನಾರಾಯಣಸ್ವಾಮಿಯವರೇ ತಾವು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## 4.ವರದಿಯನ್ನೊಪ್ಪಿಸುವುದು

**ಡಾ: ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷನಾದ ನಾನು, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 215ರ ರೀತ್ಯಾ ಸಮಿತಿಯ 98ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು. ಈಗ ಮಾನ್ಯ ಎಂ. ನಾರಾಯಸ್ವಾಮಿಯವರೇ ತಾವು ಮಾತನಾಡಿ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ,

**ಶ್ರೀ ಕೆ.ವಿ.ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ):-** ನಾನು ಮೊನ್ನೆ ಮೂರು ಪ್ರಶ್ನೆಗಳನ್ನು ಕೇಳಿದ್ದೆ. ಅದಕ್ಕೂ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೆಲ್ಲರೂ ಕೇಳಿರುವಂತಹ ಪ್ರಶ್ನೆಗಳಿಗೆ ಉತ್ತರ ಕೊಡಿಸುವುದಕ್ಕೆ ನಾನು ಈಗಾಗಲೇ ಮಾನ್ಯ ಸಭಾನಾಯಕರಿಗೆ ಹೇಳಿದ್ದೇನೆ. ಮಾನ್ಯ ಸಭಾನಾಯಕರೇ, ಉತ್ತರ ಕೊಡಿಸುವಂತಹ ಕೆಲಸವನ್ನು ತಾವು ಬೇಗ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಉತ್ತರ ಕೊಡಿಸುವಂತಹ ಕೆಲಸವನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 5. <u>ಅಭಿನಂದನೆ</u>

### <u>ಸಭಾನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮರು ಆಯ್ಕೆ ಆಗಿರುವ ಬಗ್ಗೆ</u>

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವ್ವರೇ, ಈ ಮೇಲ್ಮನೆ ಸಭಾನಾಯಕರಾದಂತಹ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಮರು ಆಯ್ಕೆಯಾಗಿದ್ದಾರೆ. ಅವರಿಗೂ ಕೂಡ ಒಂದು ಆದರ್ಶಮಯವಾದಂತಹ ಚುನಾವಣೆಯನ್ನು ಮಾಡಿದ್ದಾರೆ. ಬಹುತರವಾಗಿ ಇದು 'ಹಿರಿಯರ ಮನೆ', 'ಕುಬೇರರ ಮನೆ' ಎಂದು ಬಹಳ ಜನರು ಟೀಕೆ-ಟಿಪ್ಪಣಿಗಳನ್ನು ಹೊರಗಡೆಯ ಮಾಧ್ಯಮ ಮಿತ್ರರಿಂದ ನಾನು ಕೇಳಿದ್ದೇನೆ. ಆದರೆ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಒಂದು ಪೈಸೆಯೂ ಖರ್ಚು ಮಾಡದೇ, ಅಷ್ಟೇ ಪ್ರಾಮಾಣಿಕವಾದ ನಿಯತ್ತಿನಿಂದ ಅವರು ಮತ್ತೊಮ್ಮೆ ಮರು ಆಯ್ಕೆಯಾಗಿದ್ದಾರೆ. ಈ ಸದನದ ಮಾನ್ಯ ಸದಸ್ಯರೆಲ್ಲರ ಪರವಾಗಿ ನಾನು ಅವರಿಗೆ ಹೃತ್ಪೂರ್ವಕವಾಗಿ ಅಭಿನಂದನೆ ಸಲ್ಲಿಸುವುದಕ್ಕೆ ಬಯಸುತ್ತೇನೆ. ಶತಮಾನ ಇತಿಹಾಸವಿರುವಂತಹ ಈ 'ಚಿಂತಕರ ಚಾವಡಿ' ಏನಿದೆ, ಇದಕ್ಕೆ ಇನ್ನಷ್ಟು ಮೆರುಗು ತರುವಂತಹ ಕೆಲಸ ತಮ್ಮಿಂದಾಗಲಿ ಎಂದು ನಾನು ಈ ಸಂದರ್ಭದಲ್ಲಿ ಆಶಯ ಮಾಡುತ್ತಾ, ನಾನು ಮತ್ತೊಮ್ಮೆ ವಿನಯಪೂರ್ವಕವಾಗಿ ಹೇಳುತ್ತೇನೆ. ತಮ್ಮಂತೆಯೇ ಬಾನಗಲದುದ್ದಕ್ಕೂ ಮತ್ತು ಚುನಾವಣೆಯುದ್ದಗಲಕ್ಕೂ ಕೂಡ ಇದೇ ರೀತಿ ಅಂದರೆ ತಾವು ಯಾವ ರೀತಿ ಚುನಾವಣೆ ಮಾಡಿದ್ದೀರೋ, ಅದೇ ರೀತಿ ಚುನಾವಣೆಯಾಗುವಂತಹ ವ್ಯವಸ್ಥೆ ಬರಲಿ ಎಂದು ನಾನು ಅಪೇಕ್ಷೆ ಮಾಡುತ್ತಾ, ...

**ಸಭಾಪತಿಯವರು:-** ಮಾನ್ಯ ಸದಸ್ಯರೆಲ್ಲರೂ ಅವರನ್ನು ಅನುಕರಣೆ ಮಾಡುವಂತೆ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸದಸ್ಯರೆಲ್ಲರೂ ಅವರನ್ನು ಅನುಕರಣೆ ಮಾಡಲಿ ಎಂದು ಹೇಳುತ್ತಾ, ಮತ್ತೊಮ್ಮೆ ಅವರಿಗೆ ಹೃದಯಪೂರ್ವಕವಾದಂತಹ ಅಭಿನಂದನೆಗಳನ್ನು ಸಲ್ಲಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾನಾಯಕರಿಗೆ ಅಭಿನಂದನೆಗಳು. ಇದರ ಜೊತೆಗೆ ಮಾನ್ಯ ಎಸ್.ಆರ್ ಪಾಟೀಲ್‌ರೇ,

**ಸಭಾಪತಿಯವರು:-** ಮಾನ್ಯ ಅರುಣ ಶಹಾಪೂರವರೇ ನಾನು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಆಮೇಲೆ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರ ಮೇಲೆ ನಮಗೆ ವಿಶೇಷವಾದ ಗೌರವ ಮತ್ತು ಪ್ರೀತಿ. ಅವರದು ಹೋರಾಟದ ಬದುಕು. ಇದು ಬಹಳ ಜನರಿಗೆ ಗೊತ್ತಿಲ್ಲ. ಅವರು ಮೂಲತಃ ಫೋಟೋಗ್ರಾಫರ್. ಒಂದು ಕಿರಾಣಿ ಅಂಗಡಿಯಲ್ಲಿ ಕೆಲಸಕ್ಕೆ ಇದ್ದವರು. ಸಂಘಟನೆ ಮತ್ತು ಹೋರಾಟದ ಮೂಲಕ ವ್ಯಕ್ತಿತ್ವವನ್ನು ಕಟ್ಟಿಕೊಂಡಂಥವರು. ನಾಯಕರಾಗಿ ಬೆಳೆದಂತಹವರು. ಆನಂತರ ಸಾರ್ವಜನಿಕ ಬದುಕಿಗೆ ಬಂದರು. ಬಹುಶಃ ವಿಧಾನ ಪರಿಷತ್ತಿನ ಚುನಾವಣೆಯನ್ನು ಹೇಗೆ ಮಾಡಬಹುದು ಎಂದು ಹೇಳಿ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಇಡೀ ರಾಜ್ಯಕ್ಕೆ ತೋರಿಸಿಕೊಟ್ಟವಂತಹವರು. ಮೂರು ಕಾಸು ಇಲ್ಲದೇ ಇವತ್ತು ವಿಧಾನ ಪರಿಷತ್ತಿಗೆ ಬಂದಂತಹವರು. ಇವತ್ತು ಬೇರೆ ಬೇರೆಯವರು ವಿಧಾನಸಭೆಗಿಂತ ವಿಧಾನ ಪರಿಷತ್ತಿನ ಚುನಾವಣೆಯ ವಹಿವಾಟು ಎತ್ತರಕ್ಕೆ ಹೋಗಿದೆ ಎಂದು ಹೇಳಿ, ಮಾನ್ಯ ಈಶ್ವರಪ್ಪನವರು ಟೀಕೆ ಮಾಡುತ್ತಾರೆ. ನಮ್ಮ ಮಾಜಿ ಉಪ ಮುಖ್ಯಮಂತ್ರಿಗಳು ಟೀಕೆ ಮಾಡುತ್ತಿದ್ದಾರೆ. ಏಕೆಂದರೆ ಮಾನ್ಯ ಈಶ್ವರಪ್ಪನವರಿಗೆ ಇಲ್ಲಿ ವಿರೋಧ ಪಕ್ಷದ ನಾಯಕರಾಗಿ ಅವಕಾಶ ಮಾಡಿಕೊಟ್ಟಿದ್ದು ವಿಧಾನ ಪರಿಷತ್ತು, ಇರಲಿ. ಈ ನಡುವೆ, ಅವರ ಸೈದ್ಧಾಂತಿಕ ವ್ಯಕ್ತಿತ್ವ ಮತ್ತು ಹೋರಾಟದ ನಿಲುವಿದೆಯಲ್ಲಾ, ಸದನದ ಇಡೀ ಮಾನ್ಯ ಸದಸ್ಯರೆಲ್ಲರ ಪರವಾಗಿ ನಾನು ಅವರಿಗೆ ಅಭಿನಂದಿಸುತ್ತೇನೆ. ಕರ್ನಾಟಕ ರಾಜ್ಯಕ್ಕೆ ಇವತ್ತು ಅವರು ಮಾದರಿಯಾಗಿದ್ದಾರೆ. ಅವರು ಓದಿದ್ದು ಏಳು-ಎಂಟು ತರಗತಿ ಇರಬಹುದು. ಅವರ ಮಾತು ಮತ್ತು ವಿಚಾರ ಹೇಗಿದೆ? ಹಾಗಾಗಿ ಸಭಾನಾಯಕರ ಸ್ಥಾನಕ್ಕೆ ಅತ್ಯಂತ ಶಕ್ತಿ ತುಂಬಿ, ಘನತೆ-ಗೌರವವನ್ನು ತಂದು ಕೊಟ್ಟಿದ್ದಾರೆ. ವಿಧಾನ ಪರಿಷತ್ತಿಗೂ ಕೂಡ ಘನತೆ-ಗೌರವ ತಂದು ಕೊಡುತ್ತಿದ್ದಾರೆ. ಇವತ್ತು ಬಹಳ ಕಡಿಮೆ ವೆಚ್ಚದಲ್ಲಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದಂತಹ ಅವರಿಗೆ ನಾನು ತಮ್ಮ ಮೂಲಕ ಮತ್ತು ನಾಡಿನ ಜನರ ಪರವಾಗಿ ವಿಶೇಷವಾದ ಅಭಿನಂದನೆಗಳನ್ನರ್ಪಿಸುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀನಿವಾಸ ಕೋಟ ಪೂಜಾರಿಯವರು ಗೆದ್ದಿರುವುದಕ್ಕೆ ನಾನು ತಮ್ಮ ಮೂಲಕ ಅವರಿಗೆ ಹೃತ್ಪೂರ್ವಕವಾದಂತಹ ಅಭಿನಂದನೆಗಳನ್ನರ್ಪಿಸುತ್ತೇನೆ. ಎಲ್ಲೋ ಒಂದು ಕಡೆ ಮಾನಸಿಕವಾಗಿ ನನಗೆ ಸ್ವಲ್ಪ ನೋವಾಗಿದ್ದು, ಮಾನ್ಯ ಎಸ್.ಆರ್. ಪಾಟೀಲ್‌ರವರು ಇರಬೇಕಿತ್ತು. ಮಾನ್ಯ ಕೋಟ ಶ್ರೀನಿವಾಸ ಪೂಜಾರಿ ವ್ಯಕ್ತಿತ್ವ ಹೇಗೋ ಅದೇ ತರಹ ಮಾನ್ಯ ಎಸ್. ಆರ್. ಪಾಟೀಲ್‌ರದು. ಆದರೆ ನಿಮ್ಮಂತಹವರು ಮತ್ತೊಮ್ಮೆ ಈ ಸದನಕ್ಕೆ ಬರಬೇಕು. ನಿಮ್ಮಂತಹವರಿದ್ದರೇ, ಈ ಸದನದ ಗೌರವ ಹೆಚ್ಚಾಗುತ್ತದೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರ ಯಾವ ರೀತಿ ನಡವಳಿಕೆ ಇದೆಯೋ, ಅದೇ ತರಹ ತಮ್ಮ ನಡುವಳಿಕೆಯೂ ಇದೆ. ತಾವು ಕೂಡ ಈ ಸದನಕ್ಕೆ ಬರುವಂತೆ ಆಗಲಿ ಎಂದು ನಾನು ಮಾನ್ಯ ಸಭಾಪತಿಯವರ ಮೂಲಕ ಆಶಿಸುತ್ತೇನೆ.

---

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸದಸ್ಯರಿಗೆ ನನ್ನ ಅನಂತ ಕೃತಜ್ಞತೆಗಳು.

(ಮುಂದು)

(1103)15.12.2021/1.20/ಎಂ.ಎಂ-ಎಂ.ಡಿ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸದಸ್ಯರಾದ ಎಸ್.ಆರ್. ಪಾಟೀಲ್‌ರವರ ಅನುಭವ ಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಸಾಕು. ದಯಮಾಡಿ ಸ್ವಲ್ಪ ಅಧ್ಯಕ್ಷರ ಕಡೆಗೆ ನೋಡಿ. ನೀವೂ ಹಾಗೆ ಮಾಡಿದರೆ ಹೇಗೆ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಳುವ ಪಕ್ಷದ ಸದಸ್ಯರು ನಮ್ಮ ಎಸ್.ಆರ್. ಪಾಟೀಲರ ಬಗ್ಗೆ ಬಹಳಷ್ಟು ಒಳ್ಳೆಯ ಮಾತನ್ನು ಹೇಳಿದರು, ಅದು ಬಹಳ ಸಂತೋಷದ ವಿಚಾರ.

**ಸಭಾಪತಿಯವರು**:- ಅವರು ನಿಮ್ಮ ಮೇಲೆಯೂ ಹೇಳಿದರು. ನೀವು ಅವರತ್ತ ಲಕ್ಷ್ಯ ಕೊಡಲಿ ಎಂದು.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಇಷ್ಟೇ. ಏನು ನಮ್ಮ ಎಸ್.ಆರ್.ಪಾಟೀಲರು ಹೇಳಿದರು ಚಿಂತಕರ ಚಾವಡಿ ಹೋಗಿ ಕುಬೇರರ ಚಾವಡಿಯಾಗಿದೆ ಎಂದು ಹೊರಗಡೆ ಬರೆಯುತ್ತಿದ್ದಾರೆ ಎಂದು ಹೇಳಿದರು. ಅದಕ್ಕೆ 'ಹಂಸಲೇಖ' ಅವರು ಒಂದು ಚುಟುಕು ಬರೆದಿದ್ದರು. 'ಮೇಲ್ಮನೆ ಹೋಗಿ ಕೆಳಮನೆಯಾಗಿದೆ, ಕೆಳಮನೆ ಹೋಗಿ ನೆಲಮನೆಯಾಗಿದೆ' ಎಂದು. ಇಲ್ಲಿ ಕುಳಿತಿರುವ ನಾವೆಲ್ಲರೂ ಸಹ ಏನು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಒಂದು ಪರಂಪರೆಯನ್ನು ಹಾಕಿಕೊಂಡಿದ್ದಾರೆ ಅದನ್ನು ಮನಃಪೂರ್ವಕವಾಗಿ ಅನುಸರಿಸಿಕೊಂಡಿದ್ದರೆ ನಾವು ಎಸ್.ಆರ್.ಪಾಟೀಲರ ಮೇಲೂ ಹೇಳಬಹುದು. ಎಸ್.ಆರ್.ಪಾಟೀಲರು ಕಾಂಗ್ರೆಸ್ ಪಕ್ಷದ ಒಬ್ಬ ನಿಷ್ಠಾವಂತ ಕಾರ್ಯಕರ್ತರು. ಕಾಂಗ್ರೆಸ್ ಪಕ್ಷದಲ್ಲಿ ಒಂದು ಪಾಲಿಸಿ ಇದೆ. ನಾಲ್ಕು ಟರ್ಮ್ ಆದಮೇಲೆ ಆಗುವುದಿಲ್ಲ. ಅವರನ್ನು ಚುನಾವಣೆಗೆ ನಿಲ್ಲಬೇಡಿ ಎಂದು ಹೇಳಿರಲಿಲ್ಲ. ಆದರೆ ಚುನಾವಣೆಗೆ ಎರಡನೇ ಸ್ಥಾನಕ್ಕೆ ನಿಂತುಕೊಳ್ಳಲು ಹೇಳಿದ್ದರು. ಅವರನ್ನು ಯಾರೂ ಬಿಟ್ಟುಕೊಡುವುದಿಲ್ಲ. ಅವರು ಮುಂದೆ ಒಳ್ಳೆಯ ಸ್ಥಾನದಲ್ಲಿರುತ್ತಾರೆ. ಅದರ ಬಗ್ಗೆ ಯಾರಿಗೂ ಕಳಕಳಿ ಬೇಡ. ಎಲ್ಲೋ ಒಂದು ಕಡೆ ಕಾಂಗ್ರೆಸ್ ಪಕ್ಷ ತಪ್ಪು ಮಾಡಿದೆ ಎನ್ನುವ ರೀತಿಯಲ್ಲಿ ಹೇಳಿ ಬಿಂಬಿಸುವುದು ಸರಿಯಲ್ಲ. ಅವರಿಗೆ ತಕ್ಕನಾದ ಗೌರವವನ್ನು ಕಾಂಗ್ರೆಸ್ ಪಕ್ಷದ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಶ್ರೀಮತಿ ಸೋನಿಯಾ ಗಾಂಧಿ ಮತ್ತು ಶ್ರೀ ರಾಹುಲ್ ಗಾಂಧಿಯವರು ಕೊಡುತ್ತಾರೆ. ಆ ವಿಶ್ವಾಸ ನನಗೂ ಇದೆ, ಅವರಿಗೂ ಸಹ ಇದೆ.

**ಸಭಾಪತಿಯವರು**:- ಈಗ ಮಾನ್ಯ ಲಿಂಗಪ್ಪನವರು.

**ಶ್ರೀ ಸಿ.ಎಂ. ಲಿಂಗಪ್ಪ:-** ಮಾನ್ಯ ಪುಟ್ಟಣ್ಣನವರು ಕಾಂಗ್ರೆಸ್ ಪಕ್ಷಕ್ಕೆ ಬಂದು ನಿಂತುಕೊಳ್ಳುತ್ತಾರೆ.

**ಶ್ರೀ ಸಿ.ಸಿ.ಪಾಟೀಲ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್. ಪಾಟೀಲರು ನಮ್ಮ ಭಾಗದವರು. ಅವರಿಗೆ ಆದಷ್ಟು ಬೇಗ ಒಳ್ಳೆಯ ಸ್ಥಾನ ಮಾನವನ್ನು ಕೊಡಿಸಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಅನ್ಯಥಾ ಭಾವಿಸಬೇಡಿ. ನೀವು ಇಲ್ಲಿ ಪಕ್ಷವನ್ನೇಕೆ ತರುತ್ತೀರಿ? ನಾನು ವ್ಯಕ್ತಿಗತವಾಗಿ ಹೇಳಿದ್ದೇನೆ ಅಷ್ಟೇ.

**ಶ್ರೀ ಸಿ.ಎಂ. ಲಿಂಗಪ್ಪ:-** ಮಾನ್ಯ ಪುಟ್ಟಣ್ಣನವರೇ, . . .

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, . . .

**ಶ್ರೀ ಪುಟ್ಟಣ್ಣ:-** ಇಲ್ಲಿ ಪಕ್ಷ ಎಂದು ಹೇಳಿ ರಾಜಕಾರಣವನ್ನು ತರಬೇಡಿ. ರಾಜಕೀಯಕ್ಕೋಸ್ಕರ ಇದನ್ನು ಹೇಳಿದ್ದಲ್ಲ. ಅನ್ಯಥಾ ಭಾವಿಸಬೇಡಿ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಸಾಕು ಬಿಡಿ ಎಷ್ಟು ಸಲ ಹೇಳುತ್ತೀರಿ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಸಹ ರಾಜಕಾರಣಿಗಳೇ. ಇಲ್ಲಿ ರಾಜಕಾರಣ ಬಿಟ್ಟು ಯಾರೂ ಇಲ್ಲ. ರಾಜಕಾರಣ ನಮಗೇನೂ ಅರ್ಥವಾಗುವುದಿಲ್ಲ ಎಂದೇನೂ ಇಲ್ಲ. ಆದ್ದರಿಂದ ಮಾತು ಮೀರಿಸುವುದು ಬೇಡ ಇಲ್ಲಿಗೆ ನಿಲ್ಲಿಸುವುದು ಒಳ್ಳೆಯದು.

**ಸಭಾಪತಿಯವರು:-** ಆಯಿತು, ನಿಲ್ಲಿಸುವುದಕ್ಕೆ ಹೇಳಿದ್ದೇನೆ.

**ಶ್ರೀ ಸಿ.ಎಂ.ಲಿಂಗಪ್ಪ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ, ಇಲ್ಲಿ ಮಾನ್ಯ ಎಂ.ಸಿ. ನಾಣಯ್ಯನವರನ್ನು ನೆನೆಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಎಷ್ಟೋ ಸಂದರ್ಭಗಳಲ್ಲಿ ತಾವು ಕೂಡ ಗಮನಿಸಿದ್ದೀರಿ. ಎಂ.ಸಿ. ನಾಣಯ್ಯನವರಿಗೆ ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂತಹ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವಂತಹ ಸಾಮರ್ಥ್ಯ ಇತ್ತು. ಬಹುಶಃ ಅದಾದ ಮೇಲೆ ನಾನು ನೋಡುತ್ತಿರುವುದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರನ್ನು. ಬಹುಶಃ ಅವರಿಗೆ ಅವರ ವಿದ್ಯೆ, ಅವರ ಸಾಮರ್ಥ್ಯ, ಇವೆಲ್ಲಾ ಹೇಳಿದರೂ ಎಷ್ಟೇ ಇರಲಿ ಅವನ್ನೆಲ್ಲಾ ಮೀರಿ ಒಂದು ಸಾಮರ್ಥ್ಯವನ್ನು ಬೆಳೆಸಿಕೊಂಡು ಸದರಿ Treasury Bench ನ ಯಾವುದೇ ಮಂತ್ರಿಗೆ ಸಂಬಂಧಪಟ್ಟಂತಹ ಪ್ರಶ್ನೆಗಳಿಗೆ ಸಮರ್ಪಕವಾಗಿ ಅವರು ಉತ್ತರವನ್ನು ಕೊಡುತ್ತಾರಲ್ಲಾ ಅನೇಕ ಸಲ ನನಗೆ ಆಗ ಮಾನ್ಯ ಎಂ.ಸಿ. ನಾಣಯ್ಯನವರ ನೆನಪು ಬರುತ್ತದೆ. ಅದಕ್ಕೆ ನಿಮಗೆ ವಂದನೆಗಳು.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾನು ನಿಜವಾಗಲೂ ನಮ್ಮ ಕುರ್ಚಿಯಿಂದ ಸಭಾನಾಯಕರಿಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಎತ್ತಿ ಹಿಡಿಯುವ ಕೆಲಸ ಮಾಡಿದ್ದಾರೆ ಅದಕ್ಕೆ ಅವರಿಗೆ ಅಭಾರಿಯಾಗಿರುತ್ತೇನೆ ಎಂಬ ಮಾತನ್ನು ಹೇಳಬಯಸುತ್ತೇನೆ.

**ಸಭಾಪತಿಯವರು:-** ಸದನದ ಪರವಾಗಿ ಸಭಾನಾಯಕರಿಗೆ ಅಭಿನಂದನೆಗಳು. ಈಗ ಮಾನ್ಯ ಎಂ. ನಾರಾಯಣಸ್ವಾಮಿಯವರು ಚುಟುಕಾಗಿ ಮಾತನಾಡಬೇಕು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## 6. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಮುಂದುವರೆದ ಚರ್ಚೆ

**ವಿಷಯ:**- ಬೆಂಗಳೂರು ನಗರ ಚೀಫ್ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಕೇಸ್ ನಂ. ಪಿ.ಸಿ.ಆರ್. ನಂ. 19856/2021ರಂತೆ ನ್ಯಾಯಾಲಯದ ಆದೇಶ ದಿನಾಂಕ 25-11-2021ರ ಮೇರೆಗೆ ಈಗಿನ ಸರ್ಕಾರದ ಸಂಪುಟ ಸದಸ್ಯರೊಬ್ಬರು ಹಾಗೂ ಹಾಲಿ ಶಾಸಕರು ಸೇರಿದಂತೆ ಇತರೆ ಮೂರು ಮಂದಿ ಮೇಲೆ ಆರೋಪಿಗಳೆಂದು ತೀರ್ಮಾನಿಸಿ, ಇವರೆಲ್ಲಾ ಸೇರಿ ಶ್ರೀ ಅಣ್ಣಯ್ಯಪ್ಪ ಮತ್ತು ಇತರರ ಜಮೀನಿಗೆ ನಕಲಿ ದಾಖಲೆಗಳನ್ನು, ನಕಲಿ ಮಾಲೀಕರನ್ನು ಸೃಷ್ಟಿ ಮಾಡಿ ಅವರಿಂದ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾವಣಿ ಮಾಡಿಸಿರುವುದು ಮೇಲ್ನೋಟಕ್ಕೆ ಕಾನೂನು ಬಾಹಿರ ಎಂದು ತೀರ್ಮಾನಿಸಿ ಇವರ ವಿರುದ್ಧ ಮೊಕದ್ದಮೆ ಹೂಡಬೇಕೆಂದು ಮಹತ್ತರವಾದ ತೀರ್ಪನ್ನು ನೀಡಿದೆ. ಆದರೆ ಸರ್ಕಾರವು ನ್ಯಾಯಾಲಯದ ಆದೇಶದಂತೆ ತಪ್ಪಿತಸ್ಥರ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳದೇ ಅವರನ್ನು ರಕ್ಷಿಸುತ್ತಿರುವುದು ನ್ಯಾಯಾಲಯದ ನಿಂದನೆ ಮಾಡಿದಂತಾಗುತ್ತಿರುವ ಬಗ್ಗೆ.

- - - - -

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು 59ನೇ ನಿಯಮದ ಮೇರೆಗೆ ಮುಂಬರುವ ಪ್ರಸಕ್ತ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಪ್ರಸ್ತಾಪಿಸಲು ಈ ಕೆಳಕಂಡ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಮಂಡಿಸುತ್ತಿದ್ದೇನೆ. ಬೆಂಗಳೂರು ನಗರ ಚೀಫ್ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಕೇಸ್ ನಂ. ಪಿ.ಸಿ.ಆರ್. ನಂ. 19856/2021ರಂತೆ ನ್ಯಾಯಾಲಯದ ಆದೇಶ ದಿನಾಂಕ 25-11-2021ರ ಮೇರೆಗೆ ಈಗಿನ ಸರ್ಕಾರದ ಸಂಪುಟ ಸದಸ್ಯರೊಬ್ಬರು ಹಾಗೂ ಹಾಲಿ ಶಾಸಕರು ಹಾಗೂ ಮಾಜಿ ಸಚಿವರು ಸೇರಿದಂತೆ ಇತರೆ ಮೂರು ಮಂದಿ ಮೇಲೆ ಆರೋಪಿಗಳೆಂದು ತೀರ್ಮಾನಿಸಿ, ಇವರೆಲ್ಲಾ ಸೇರಿ ಶ್ರೀ ಅಣ್ಣಯ್ಯಪ್ಪ ಮತ್ತು ಇತರರ ಜಮೀನಿಗೆ ನಕಲಿ ದಾಖಲೆಗಳನ್ನು, ನಕಲಿ ಮಾಲೀಕರನ್ನು ಸೃಷ್ಟಿ ಮಾಡಿ ಅವರಿಂದ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾವಣಿ ಮಾಡಿಸಿರುವುದು ಮೇಲ್ನೋಟಕ್ಕೆ ಕಾನೂನು ಬಾಹಿರ ಎಂದು ತೀರ್ಮಾನಿಸಿ ಇವರ ವಿರುದ್ಧ ಮೊಕದ್ದಮೆ ಹೂಡಬೇಕೆಂದು ಮಹತ್ತರವಾದ ತೀರ್ಪನ್ನು ನೀಡಿದೆ. ಆದರೆ ಸರ್ಕಾರವು ನ್ಯಾಯಾಲಯದ ಆದೇಶದಂತೆ ತಪ್ಪಿತಸ್ಥರ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳದೇ ಅವರನ್ನು ರಕ್ಷಿಸುತ್ತಿರುವುದು ನ್ಯಾಯಾಲಯದ ನಿಂದನೆ ಮಾಡಿದಂತಾಗುತ್ತಿದ್ದು, ಈ ವಿಚಾರವು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿದ್ದು ಆದ್ದರಿಂದ ದಿನಾಂಕ 15.12.2021ರಂದು ಈ ವಿಷಯವನ್ನು ಸದನದಲ್ಲಿ ಚರ್ಚಿಸಲು ನಿಲುವಳಿ ಸೂಚನೆಯನ್ನು ನೀಡುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ನಿಲುವಳಿ ಸೂಚನೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಗೀಕಾರಕ್ಕೆ ಅರ್ಹವಲ್ಲ. Any matter pending-adjudication cannot be discussed in the House. ಮಾನ್ಯ ಸದಸ್ಯರು ಮಾತನಾಡಬೇಕಾದರೆ ಈ ವಿಷಯ ನ್ಯಾಯಾಲಯದಲ್ಲಿದೆ ಎಂದು ಹೇಳುತ್ತಿದ್ದಾರೆ. ನ್ಯಾಯಾಂಗದಲ್ಲಿ ಒಂದು ಪ್ರಕರಣವಿದ್ದು ನ್ಯಾಯಾಂಗ ಅದನ್ನು criminal prosecution ಗೆ ವರ್ಗಾಯಿಸಿಕೊಂಡು trial ಮಾಡಬೇಕಾದರೆ ಸನ್ಮಾನ್ಯ ಸದಸ್ಯರು you are barred in discussing the issue here.

**Sri M.NARAYANASWAMY:-** I am very sorry to say this.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಮಾನ್ಯ ಸಚಿವರು ಹೇಳಲಿ.

**ಶ್ರೀ ಜೆ.ಸಿ. ಮಾಧುಸ್ವಾಮಿ**:- ನಾನು ನನ್ನ ಕೆಲಸ ಮಾಡಬೇಕಲ್ಲವೇ? ನೀವು ಬೇಕಾದರೆ Practice and Procedure of Parliament – Kaul and Shekdar ನಿಯಮದ ಪುಸ್ತಕವನ್ನು ತೆಗೆದುಕೊಂಡು ಓದಿ. ನ್ಯಾಯಾಂಗದಲ್ಲಿ ಪೆಂಡಿಂಗ್ ಇದೆ ಎನ್ನುವ ಪದ ನಿಮ್ಮ ಬಾಯಿಂದ ಬರಲಿ ಎನ್ನುವುದನ್ನಷ್ಟೇ ನಾನು ಕಾಯುತ್ತಿದ್ದೆ.

**ಶ್ರೀ ಎಂ. ನಾರಾಯಣಸ್ವಾಮಿ**:- ಇದು ನ್ಯಾಯಾಂಗದಲ್ಲಿ ಪೆಂಡಿಂಗ್ ಇಲ್ಲ.

**Sri J.C.MADHUSWAMY:-** It is there. ನನ್ನ ಹತ್ತಿರ ಕೇಸ್ ಇದೆಯಲ್ಲಾ. ಅದನ್ನು ಓದುತ್ತೇನೆ.

*"The complainant Sri Madhappa has filed private complaint in PCR no. 19856/2021 before Additional Chief Metropolitan Magistrate, Bengaluru against accused no. 1 to 5 under section 200 of CrPC for the offences punishable under section 120(b), 420, 427, 465, 467 and 471 of IPC. Learned ACMM to cognizance of the offences allied and registered a criminal case and issued summons to accused no. 1 to 5. As per the daily status report the next date of hearing is 23-12-2021. Since it is a criminal case registered in pursuance of a private complaint filed by the complainant Sri Madhappa, the case has to be prosecuted by the very complainant himself and the state has no role to play in the said case. If the Learned ACMM referred private complaint to the jurisdiction of police for investigation and report under section 156(3) of CrPC, then the matter would have*

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*been different. Therefore, the question of initiating contempt proceedings against the...."*

ನಾನು ಕೇಸ್ ಪೆಂಡಿಂಗ್ ಇದೆ. ಮುಂದಿನ ವಿಚಾರಣೆ ದಿನಾಂಕ 23-12-2021ರಂದು ಇದೆ ಎಂದು ನಿಮಗೆ ಹೇಳುತ್ತಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಆಗಿದೆ. ಎಫ್.ಐ.ಆರ್ ಅನ್ನು ದಾಖಲು ಮಾಡಬೇಕು, ಸಮನ್ಸ್ ಆಗಬೇಕೆಂದು ಹೇಳಿಲ್ಲವೇ?

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಮಾನ್ಯ ಸಚಿವರು ಮಾತನಾಡುವುದನ್ನು ಕೇಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಪಿ.ಸಿ.ಆರ್., ಆಗಿದೆ ಎಂದರೆ ಎಫ್.ಐ.ಆರ್.... Sri S.R.Patil should come to his rescue. ಪಿ.ಸಿ.ಆರ್. ಮೇಲೆ ಕ್ರಿಮಿನಲ್ ಕೇಸ್ ಮಾಡಿದ್ದಾರೆ, ಸಿ.ಸಿ. ನಂಬರ್ ಕೊಟ್ಟಿದ್ದಾರೆ, ಟ್ರಯಲ್ ಪ್ರಾರಂಭವಾಗಿದೆ, 23ಕ್ಕೆ ಟ್ರಯಲ್ ಇದೆಯೆಂದು ನಾನು ಕಾನೂನು ಸಚಿವನಾಗಿ ಇಲ್ಲಿ ನಿಂತುಕೊಂಡು ಬಂದರೂ ನಾವು ಚರ್ಚೆ ಮಾಡುತ್ತೇವೆ ಎಂದರೆ I cannot help it out.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಯವರು ಹೇಳಿರುವುದಕ್ಕೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು 62ರ ಪ್ರಕಾರ *ನ್ಯಾಯಾಧಿಕರಣಗಳು, ಆಯೋಗಗಳು ಮುಂತಾದವುಗಳ ಮುಂದಿರುವ ವಿಷಯಗಳನ್ನು ಕುರಿತು ಚರ್ಚಿಸಲು ನಿಲುವಳಿ ಸೂಚನೆ ತರುವುದು* ಇದನ್ನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ. ನಂತರದ ಪ್ಯಾರಾದಲ್ಲಿ *ಪರಂತು, ಅಂಥ ವಿಚಾರವನ್ನು ಚರ್ಚಿಸಲು ಅವಕಾಶ ಕೊಡುವುದರಿಂದ ಶಾಸನಬದ್ಧ ನ್ಯಾಯಾಧಿಕರಣ, ಪ್ರಾಧಿಕಾರ, ಆಯೋಗ ಅಥವಾ ವಿಚಾರಣಾ ನ್ಯಾಯಾಲಯದವರು ಆ ವಿಷಯವನ್ನು ಪರಿಶೀಲಿಸಲು ಬಾಧಕವುಂಟಾಗುವ ಸಂಭವವಿಲ್ಲವೆಂದು ಸಭಾಪತಿಯವರಿಗೆ ಮನವರಿಕೆಯಾದರೆ ಅವರು ತಮ್ಮ ವಿವೇಚನಾನುಸಾರ ವಿಚಾರಣೆಯ ಕಾರ್ಯವಿಧಾನ ಅಥವಾ ವಿಷಯ ಅಥವಾ ಹಂತಕ್ಕೆ ಸಂಬಂಧಪಟ್ಟಂತೆ, ಅಂಥ ವಿಷಯವನ್ನು ಕುರಿತು ಸಭೆಯಲ್ಲಿ ಚರ್ಚೆ ನಡೆಸಲು ಅವಕಾಶ ಕೊಡಬಹುದು.*

ಅದಲ್ಲದೇ, ಮಾನ್ಯ ನಾರಾಯಣಸ್ವಾಮಿಯವರ ಬೇಡಿಕೆ ಏನೆಂದರೆ, the court has directed to file an FIR against the Minister. ಅವರು ಎಫ್.ಐ.ಆರ್., ಫೈಲ್ ಆಗಿದೆ ಎಂದು ಹೇಳುತ್ತಾರೆ. ಒಬ್ಬ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಫ್.ಐ.ಆರ್., ಆಗಿರುವಂತಹ ಮಂತ್ರಿ ಇರಬಹುದೇ ಎಂಬುದು ಮಾನ್ಯ ನಾರಾಯಣಸ್ವಾಮಿಯವರ ಪ್ರಶ್ನೆಯಾಗಿದೆ.

**ಸಭಾಪತಿಯವರು:-** ಸರಿ, ಒಂದು ನಿಮಿಷ ನಾನು ಹೇಳುತ್ತೇನೆ. ಅವರು ಇದನ್ನು ತರುವುದಕ್ಕೆ ಮೊದಲೇ ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದೇನೆ. ಐದು ನಿಮಿಷ ಹೇಳಲಿ ನಂತರ ತೀರ್ಮಾನ ಹೇಳುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಅವರು ಪ್ರಸ್ತಾಪ ಮಾಡಬಾರದು ಎಂಬುದು ನನ್ನ ಆಕ್ಷೇಪಣೆಯಾಗಿದೆ.

**ಸಭಾಪತಿಯವರು:-** ಈಗ ನಾನು ಹೇಳಿಬಿಟ್ಟಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ**:- ಮಾನ್ಯ ಸಭಾಪತಿಯವರೇ, ಕ್ರಿಮಿನಲ್ ಕೇಸ್ ಇದೆ, ಅವರು ಕೇಸ್ ಹೇಳುವವರೆಗೂ ನಾನು ಎದ್ದಿರಲಿಲ್ಲ. When he has said to the House, ಪ್ರಕರಣ ಕೋರ್ಟ್ ಮುಂದಿದೆ ಎನ್ನುವುದು ಅವರಿಗೆ ಗೊತ್ತಿದ್ದರೂ ಇಲ್ಲಿ ಚರ್ಚೆ ಮಾಡಬಹುದೇ ಎನ್ನುವುದಷ್ಟೇ ನನ್ನ issue.

**ಸಭಾಪತಿಯವರು:-** ಅದು ನನ್ನ ಕಡೆಯೂ ಇದೆ.

**ಶ್ರೀ ಎಂ. ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, ಪ್ರಕರಣ ಪೆಂಡಿಂಗ್ ಇಲ್ಲ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಚರ್ಚೆ ಬೇಡ.

**ಶ್ರೀ ಎಂ. ನಾರಾಯಣಸ್ವಾಮಿ**:- ಪ್ರಕರಣವನ್ನು prosecution ಮಾಡಿ , ಐ.ಪಿ.ಸಿ., ಸೆಕ್ಷನ್ ಮೇಲೆ ಎಫ್.ಐ.ಆರ್. ದಾಖಲು ಮಾಡಿ ಅವರಿಗೆ ಸಮನ್ಸ್ ಕೊಡಬೇಕೆಂದು ಹೇಳಿದೆ. This is not at all a pending.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಸರ್ಕಾರಕ್ಕಿರುವ ಮಾಹಿತಿಯಂತೆ ಪ್ರಕರಣ ದಿನಾಂಕ 23.12.2021ಕ್ಕೆ ಪೋಸ್ಟಿಂಗ್ ಆಗಿದೆ. ಡಿಸೆಂಬರ್, 23ನೇ ತಾರೀಖು ಪ್ರಕರಣದ ಹಿಯರಿಂಗ್ ಇದೆ. ಪ್ರಕರಣ ಅಲ್ಲಿ ನಡೆಯುತ್ತಿದೆ.

**ಶ್ರೀ ಎಂ. ನಾರಾಯಣಸ್ವಾಮಿ**:- ಆದೇಶದ ಕೊನೆಯ ಪುಟದಲ್ಲಿರುವುದನ್ನು ನೋಡಬೇಕು.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಸ್ವಲ್ಪ ತಡೆಯಿರಿ. ಮಾನ್ಯ ಸಚಿವರು ಹೇಳಲಿ. ಏತಕ್ಕೆ ಮಾತನಾಡುತ್ತೀರಿ?

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ನಾರಾಯಣಸ್ವಾಮಿಯವರೇ, ನಾವು ಸರ್ಕಾರ ನಡೆಸುವವರು.

**ಶ್ರೀ ಎಂ. ನಾರಾಯಣಸ್ವಾಮಿ:-** ಸುಮ್ಮನೇ ದಾರಿ ತಪ್ಪಿಸುವ ಕೆಲಸವಾಗುತ್ತದಲ್ಲಾ?

**ಸಭಾಪತಿಯವರು:-** ಒಂದು ನಿಮಿಷ ಇರಿ. ಮಾನ್ಯ ಸಚಿವರು ಮಾತನಾಡುತ್ತಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ**:- ಮಾನ್ಯ ಸಭಾಪತಿಯವರೇ, civil miscellaneous petition ಅನ್ನು ಅವರು ಕ್ರಿಮಿನಲ್ ಕೇಸ್ ಆಗಿ ತೆಗೆದುಕೊಂಡು ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆಯನ್ನು ಮಾಡುತ್ತಿದ್ದಾರೆ ಅಂದ ಮೇಲೆ ಕೋರ್ಟ್ ಕ್ರಿಮಿನಲ್ ಕೇಸ್‌ನಲ್ಲಿ ವಿಚಾರಣೆ ಮಾಡುತ್ತಿದೆ.

(ಮುಂದು)

(1104) 15-12-2021 KH/MD 1-30

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು):-**

ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹೇಳಿದ ಹಾಗೆ ಬೇರೆ ಬೇರೆ ಪ್ರಕರಣಗಳಲ್ಲಿ ಪರ್ಮಿಟ್ ಮಾಡಬಹುದು. ನಾಳೆ ದಿವಸ attempt to murder ಪ್ರಕರಣದಲ್ಲಿಯೂ ನಾವು ಚರ್ಚೆ ಮಾಡಿಕೊಂಡು ಕುಳಿತುಕೊಂಡು ಬಿಟ್ಟರೆ ಗತಿ ಏನು?

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈ ಪ್ರಕರಣ ಬಾಕಿ ಇಲ್ಲ. ನ್ಯಾಯಾಲಯ ಆದೇಶ ಮಾಡಿದೆ. ಅವರ ಮೇಲೆ prosecution ಆಗಿದೆ. IPC sections ಅನ್ನು... ಅವರ ಮೇಲೆ ಎಫ್.ಐ.ಆರ್., ದಾಖಲಿಸಿ ಎಂದು ಕೋರ್ಟ್ ಹೇಳಿದೆ. It is not a pending case at all. IPC section 420 ಇದೆ.

**ಡಾ: ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮೊದಲು ಇದು ಸಿವಿಲ್ ಕೇಸ್ ಇತ್ತು.

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ, ಒಂದು ನಿಮಿಷ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, criminal case ಗೆ convert ಆಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಎರಡು ಕೋರ್ಟ್‌ಗಳಲ್ಲಿ ಖುಲಾಸೆ ಆಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಒಂದು ನಿಮಿಷ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಒಂದೆರಡು ಉದಾಹರಣೆಗಳನ್ನು ಕೊಡುತ್ತಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ನಿಮಿಷ. ನಾನು ಹೇಳುವುದನ್ನು ಕೇಳಿ. ಇಲ್ಲಿಯವರೆಗೆ ಸರ್ಕಾರ ನನಗೆ ಸ್ಪಷ್ಟವಾದ ಮಾಹಿತಿಯನ್ನು ಕೊಟ್ಟಿರಲಿಲ್ಲ. ನಾನು ತಮಗೆ ಮಾತನಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ. ಈ ಹಿನ್ನೆಲೆಯಲ್ಲಿ ಸರ್ಕಾರದವರು ಕೆಲವು ವಿಷಯಗಳನ್ನು ನೀಡಿದಾಗ ಆ ವಿಷಯಗಳನ್ನು ನಾನು ಪರಿಗಣಿಸಬೇಕಾಗುತ್ತದೆ. ಈ ಪ್ರಕರಣ ನ್ಯಾಯಾಲಯದಲ್ಲಿ ಇದೇ ಎನ್ನುವ ದಾಖಲೆಯೊಂದಿಗೆ ಸದನದಲ್ಲಿ ಕಾನೂನು ಮಂತ್ರಿಗಳು ಹೇಳಿದಾಗ ಅದರ ಬಗ್ಗೆ ನಾನು ತೀರ್ಮಾನ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಇವತ್ತು ನಾನು ಏನು ಹೇಳುತ್ತೇನೆಂದರೆ, ನ್ಯಾಯಾಲಯದಲ್ಲಿ ಇಲ್ಲ ಎಂದರೆ . . .

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ನಿಮಿಷ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅಂತಿಮ ತೀರ್ಮಾನ ತಮ್ಮದೇ. ತೀರ್ಮಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಬೇರೆ ಸದಸ್ಯರಾಗಿ . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು. ಹೇಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಚಿವರೇ ಒಂದು ನಿಮಿಷ. ಈಗಾಗಲೇ ಕಾನೂನು ಮಂತ್ರಿಗಳು ಹೇಳಿದ್ದು. . .

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಾದ ಎಸ್.ಆರ್.ಪಾಟೀಲ್‌ರವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

---

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸದಸ್ಯರಾದ ನಸೀರ್ ಅಹ್ಮದ್‌ರವರೇ, ಒಂದು ನಿಮಿಷ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಚಿವರೇ ಒಂದು ನಿಮಿಷ. ಮಾನ್ಯ ಸಭಾಪತಿಯವರು ನನ್ನನ್ನು ಕರೆದಿದ್ದಾರೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನವನ್ನು ಸೆಳೆಯುತ್ತೇನೆ. Because you are a Learned Advocate. ತಾವು ನನ್ನ ಸಹಾಯಕ್ಕೆ ಬರಬೇಕು.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಚಿವರೇ ಒಂದು ನಿಮಿಷ. ಕಾನೂನು ಮಂತ್ರಿಗಳು ಹೇಳಿರುವಂತಹದ್ದು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕ್ರಿಮಿನಲ್ ಕೇಸ್ ಇರುವವರು ಎಫ್‌ಐಆರ್ ದಾಖಲಾಗಿದ್ದರೂ ಸಹ ನಾವು ಏನು ಮಾತನಾಡುವುದಕ್ಕೆ ಆಗುವುದಿಲ್ಲ. It is not a pending case at all. It is clearly said. ಅವರ ಮೇಲೆ ಕ್ರಮ ಆಗಬೇಕೆಂದು ಹೇಳಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಏನು ಮಾತನಾಡುವುದಕ್ಕೆ ಆಗುವುದಿಲ್ಲ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ, ಒಂದು ನಿಮಿಷ. ನಾನು ಮಾತನಾಡಿ ಮುಗಿಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಬೇಡ ಸರ್. ನಾನು ಓದುತ್ತೇನೆ. Cognizance if taken for the offences.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಕಾನೂನು ಸಚಿವರೇ ಮಾನ್ಯ ನಸೀರ್ ಅಹ್ಮದ್‌ರವರಿಗೆ ಅವಕಾಶ ಕೊಡಿ. ಮಾತನಾಡಲಿ.

**ಸಭಾಪತಿಯವರು:-** ಮಾನ್ಯ ಸಚಿವರೇ ಒಂದು ನಿಮಿಷ. ಮಾನ್ಯ ನಸೀರ್ ಅಹ್ಮದ್‌ರವರೇ ಒಂದು ನಿಮಿಷ ಮಾತನಾಡಿ. ಉಳಿದವರು ಯಾರು ಮಾತನಾಡಬೇಡಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, discretion ತಮ್ಮದಾಗಿರುತ್ತದೆ. ತಾವು ಏನು ತೀರ್ಮಾನ ಮಾಡುತ್ತೀರಿ. ಅದನ್ನು ಸಂಪೂರ್ಣ ಸದನ ಒಪ್ಪುತ್ತದೆ. ಆದರೆ, ಕೆಲವು ವಿಷಯಗಳ ಬಗ್ಗೆ highlight ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಒಂದು ವಿಷಯ ಹೈಕೋರ್ಟ್‌ನಲ್ಲಿ ಇದೆ. ಹೈಕೋರ್ಟ್‌ನಲ್ಲಿರುವಂತಹ ವಿಷಯದ ಬಗ್ಗೆ ತಾವು ತೀರ್ಪು ಕೊಡುವವರೆಗೆ ಕಾಯಲಿಲ್ಲ. ತಾವು ಕ್ಯಾಬಿನೇಟ್‌ನಲ್ಲಿ ತೀರ್ಮಾನ ಮಾಡಿ, when the matter is before the High Court, ನಮ್ಮ Islamia Institute of Technology ಗೆ 5 ಎಕರೆ ಜಮೀನನ್ನು ಹಂಚಿಕೆ ಮಾಡುತ್ತೀರಿ. Is it not sub-judice? ಇದಕ್ಕೆ ತಾವು ತಾರತಮ್ಯ ಏಕೆ ಮಾಡುತ್ತೀರಿ? ಒಂದು ವಿಷಯ ಹೈಕೋರ್ಟ್‌ನಲ್ಲಿ ಇದ್ದಾಗ ತಾವು ಗ್ರ್ಯಾಂಟ್ ಮಾಡುವುದಕ್ಕೆ ಹೋಗುತ್ತೀರಿ. ಇನ್ನೊಂದು ವಿಷಯದ ಬಗ್ಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಇಲ್ಲವೆಂದು ಹೇಳುತ್ತೀರಿ. Then what does it mean? ದಯವಿಟ್ಟು as a Law Minister you should explain it to me.

**Sri J.C.MADHUSWAMY:-** I will explain it to you.

**Sri NASEER AHMED:-** You should explain it to me. ಒಂದು ವಿಷಯ ಹೈಕೋರ್ಟ್‌ನಲ್ಲಿದ್ದಾಗ, how could you grant a land?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ನಸೀರ್ ಅಹ್ಮದ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಒಂದು ಸಾವಿರ ಪ್ರಕರಣ ಕೋರ್ಟ್‌ನಲ್ಲಿದ್ದರೂ ಕೋರ್ಟ್ ಮಾಡಬಾರದು ಎಂದು ತಡೆಯಾಜ್ಞೆ ಕೊಟ್ಟಿದ್ದರೆ, injunction ಕೊಟ್ಟಿದ್ದರೆ, specific interim order ಮಾಡಿದ್ದರೆ ಸರ್ಕಾರ act ಮಾಡುವುದಿಲ್ಲ. Otherwise, we are not barred. ಸದನದಲ್ಲಿ ಚರ್ಚೆ ಮಾಡಬಹುದೇ, ಬೇಡ ಎನ್ನುವ ಬಗ್ಗೆ ಸದನದ ನಿಯಮ ಬೇರೆ. ನನ್ನ ಗೆಳೆಯರಾದ ಮಾನ್ಯ ಎಂ.ನಾರಾಯಣಸ್ವಾಮಿಯವರನ್ನು convince ಮಾಡುವುದಕ್ಕೆ... ಎಫ್‌ಐಆರ್ ಮಾಡಿರುತ್ತಾರೆ. "Register this case as criminal case in Register No. 3" ಎಂದರೆ ಕೋರ್ಟ್ ರಿಜಿಸ್ಟರ್ ಮಾಡಿಕೊಂಡು ಬಿಟ್ಟಿತು. "Issue summons to accused no. 1 to 5" ಎಂದು ಹೇಳಿದೆ. ಅದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರೇ ನನ್ನ ಸಹಾಯಕ್ಕೆ ಬನ್ನಿ ಎಂದು ಹೇಳಿದೆ. It's already there. 25th day of November 2021 ರಲ್ಲಿಯೇ civil miscellaneous petition ಅನ್ನು ಅವರೇ convert ಮಾಡಿ, ಕ್ರಿಮಿನಲ್ ಕೇಸ್ ಅನ್ನು ದಾಖಲಿಸಿಕೊಂಡು ಬಿಟ್ಟಿದ್ದಾರೆ. ನಮಗೆ ನ್ಯಾಯಾಲಯದ ಮುಂದೆ ಎಫ್‌ಐಆರ್., ಮಾಡಿ ಎಂದು ಅವರು ಯಾರು ಕೂಡ ನಿರ್ದೇಶನ ಕೊಟ್ಟಿಲ್ಲ. ಅಲ್ಲಿಯವರೆಗೆ ಸಿವಿಲ್ ಕೇಸ್ ಆಗಿತ್ತು. ನಾನೇ ಅಸೆಂಬ್ಲಿಯೊಳಗೆ ಬೇಕಾದಷ್ಟು ಸಿವಿಲ್ ಕೇಸ್ ಬಗ್ಗೆ ಚರ್ಚೆ ಮಾಡಿದ್ದೇನೆ. ನಮ್ಮ ಸ್ಪೀಕರ್ ಮೇಲೆ ಒಂದು ನೋಟೀಸ್ ಇತ್ತು ಮಾಡಿದ್ದೇವೆ. But we are barred. ನಮ್ಮ ಯಾವುದೇ ಚರ್ಚೆಗಳು ಆ hearing ಮೇಲೆ, ಆ ಪ್ರಕರಣದ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೇಲೆ ಪ್ರಭಾವ ಬೀರುವಂತಹದ್ದು ಆಗಿರಬಾರದು ಮತ್ತು ನ್ಯಾಯಾಲಯ ತೀರ್ಮಾನ ಕೊಡುವುದಕ್ಕಿಂತ ಮೊದಲೇ ನಾವು ಮಾತನಾಡುವುದು it's prejudicial, ಹೇಗೆ ಮಾತನಾಡುತ್ತೀರಿ?

**Mr.CHAIRMAN:-** Now the matter is pending before the court.

**Sri J.C.MADHUSWAMY:-** Yes. ಮಾನ್ಯ ಸಭಾಪತಿಯವರೇ, ದಯಮಾಡಿ ಇದಕ್ಕೆ ಅವಕಾಶ ಕೊಡಕೂಡದು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, “Cognizance is taken for offences punishable under sections 120(b), 420, 427, 465, 467 and 471 of IPC against accused no. 1 to 5. Register the case as a criminal case.” ಎಂದು ಇವತ್ತಿನ ದಿವಸ ಕ್ಲಿಯರ್ ಆಗಿ ಹೇಳಿದೆ. ಇದು ಆಗಿ ಹೋಗಿದೆ. **(ಗೊಂದಲ)** ಇದನ್ನು ಬಿಟ್ಟು ಇವತ್ತು ಮಾತನಾಡಬಾರದು ಎಂದರೆ ಹೇಗೆ?

**ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಒಂದು ನಿಮಿಷ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವತ್ತು ಸರ್ಕಾರದಲ್ಲಿರುವಂತಹ ಹಾಲಿ ಮಂತ್ರಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೋರ್ಟ್‌ನಲ್ಲಿ case trial ನಲ್ಲಿದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವತ್ತು ತಾವು ಭ್ರಷ್ಟಾಚಾರ ಮಾಡಿ ನೂರಾರು ಕೋಟಿ ಲೂಟಿ ಮಾಡಿರುವಂತಹವರನ್ನು ರಕ್ಷಣೆ ಮಾಡುವುದಕ್ಕೆ ಬರುತ್ತಿದ್ದೀರಿಯೇ?

**ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಒಂದು ನಿಮಿಷ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವರು ಮಾತನಾಡಬಾರದು ಎಂದರೆ ಹೇಗೆ? ಅಂತಹ ಮಂತ್ರಿಯನ್ನು ತಮ್ಮ ಸಂಪುಟದಲ್ಲಿಟ್ಟುಕೊಂಡು ಅವರನ್ನು ರಕ್ಷಣೆ ಮಾಡುತ್ತೀರಿಯೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ನ್ಯಾಯಾಲಯಕ್ಕಿಂತ ದೊಡ್ಡವರಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನ್ಯಾಯಾಲಯವೇ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಕ್ಲಿಯರ್ ಆಗಿ ಹೇಳಿದೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಶ್ರೀ ಜೆ.ಸಿ.ಮಾಧುಸ್ವಾಮಿ:-** ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದರೆ ಏನು ಮಾಡುವುದಕ್ಕೆ ಆಗುತ್ತದೆ? How can you do this?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ, ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ಯಾರೂ ಮಾತನಾಡಬೇಡಿ. ಮಾನ್ಯ ಎಂ.ನಾರಾಯಣಸ್ವಾಮಿಯವರೇ,

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಕೇಳಿರುವ ಬಗ್ಗೆ ರೆಫರ್ ಮಾಡಿದ್ದಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ಕೂಡ ವಕೀಲರಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಪ್ರಕರಣ PCR No. 19856/2021 private complaint ಅನ್ನು ಫೈಲ್ ಮಾಡಿದ್ದಾರೆ. Complainant Sri Madhappa against accused no. 1 to 5 ಇದ್ದಾರೆ. ಅದರಲ್ಲಿ ಸದಸ್ಯರು, ಹಾಲಿ ಸಚಿವರು, ಮಾಜಿ ಮಂತ್ರಿಗಳು ಮತ್ತು ಹಾಲಿ ಶಾಸಕರು ಇದ್ದಾರೆ. ನಾನು ಅವರ ಹೆಸರುಗಳನ್ನು ಹೇಳುವುದಿಲ್ಲ. ಅವರು ವಕೀಲರೇ, ನಾನು ಕೂಡ ವಕೀಲನೇ. ಈ legal aspect ನಲ್ಲಿ ಏನಿದೆ ಎಂದರೆ, private complaint ಅನ್ನು ಫೈಲ್ ಮಾಡಿದ ಕೂಡಲೇ ಮ್ಯಾಜಿಸ್ಟ್ರೇಟ್‌ರವರು investigation ಗಾಗಿ ಪೊಲೀಸ್ ಠಾಣೆಗೆ ರೆಫರ್ ಮಾಡುತ್ತಾರೆ. I think it is under section 165 of IPC. ಇದು section 200 of CrPC ಕೆಳಗೆ private complaint ಆಗಿದೆ. ಜಡ್ಜ್‌ಗೆ ಏನು discretionary ಇರುತ್ತದೆ. He can refer it to the Police Station. ಯಾರು higher authority ಇರುತ್ತಾರೋ ಅವರಿಗೆ according to the gravity of the case DySP ಗೆ ಮಾಡಬಹುದು, SP ಗೆ refer ಮಾಡಬಹುದು. ಮತ್ತೆ ಅವರು ತನಿಖೆ ಮಾಡಿ B-Report ಹಾಕಬಹುದು. ಚಾರ್ಜ್‌ಶೀಟ್ ಹಾಕಿ ಕಳುಹಿಸಬಹುದು. ಇಲ್ಲದಿದ್ದರೆ ಮ್ಯಾಜಿಸ್ಟ್ರೇಟ್ evidence ಮಾಡಿಸಬಹುದು. ಎಲ್ಲಾ ಸಾಕ್ಷಿಗಳನ್ನು ಕರೆದು evidence ಮಾಡಿಸಿ, case prima facie ಇದೆ ಎಂದು ಅನಿಸಿದರೆ ಅವರು cogniznce ಗೆ ತೆಗೆದುಕೊಳ್ಳಬಹುದು. ಈ ಪ್ರಕರಣದಲ್ಲಿ ಅವರು congnizance ತೆಗೆದುಕೊಂಡಿದ್ದಾರೆ. ತಾವು you will not defer, ಆದೇಶ ಮಾಡಿದ್ದಾರೆ. Cognizance is taken for the offence punishable under sections 120(b), 420, 427, 465, 467 and 471 of IPC against accused no. 1 to 5. Register this case as a criminal case in Register No. 3. Issue summons to accused no. 1 to 5. ಈ 5 accused ಗಳಿಗೆ summons issue ಮಾಡಿ, ಅಲ್ಲಿಯೇ trial ನಡೆಯುವುದು. ನಾನು ಇದಕ್ಕೆ defer ಆಗುವುದಿಲ್ಲ. ಆದರೆ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹೇಳಿದ ಹಾಗೆ facts ಅನ್ನು ಮುಚ್ಚಿಡುವುದಕ್ಕೆ ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಇದ್ದದ್ದನ್ನು ಇದ್ದ ಹಾಗೆ ಹೇಳಬೇಕಾಗುತ್ತದೆ. ಸದನವನ್ನು ನಾವು mislead ಮಾಡುವುದಿಲ್ಲ. ಇದ್ದ facts ಕಾನೂನು ಪ್ರಕಾರವೇ ಹೇಳಬೇಕಾಗುತ್ತದೆ. ನಿಯಮ 59ರ ಕೆಳಗೆ ಮಾನ್ಯ ಎಂ.ನಾರಾಯಣಸ್ವಾಮಿಯವರು, ನಮ್ಮ ಎಲ್ಲಾ ಸ್ನೇಹಿತರು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 62ರ ಕೆಳಗೆ ಏನಿದೆ ಎಂದರೆ; **“ನ್ಯಾಯಾಧಿಕರಣಗಳು, ಆಯೋಗಗಳು ಮುಂತಾದವುಗಳ ಮುಂದಿರುವ ವಿಷಯಗಳನ್ನು ಕುರಿತು ಚರ್ಚಿಸಲು ನಿಲುವಳಿ ಸೂಚನೆ ತರುವುದು: ಯಾವುದೇ ನ್ಯಾಯಿಕ ಅಥವಾ ನ್ಯಾಯಿಕ ಸ್ವರೂಪದ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಯಾವುದೇ ಶಾಸನಬದ್ಧ ನ್ಯಾಯಾಧಿಕರಣ ಅಥವಾ ಶಾಸನಬದ್ಧ ಪ್ರಾಧಿಕಾರದ ಮುಂದೆ ಅಥವಾ ಯಾವುದೇ ವಿಷಯದ ಬಗ್ಗೆ ವಿಚಾರಣೆ ಅಥವಾ ತನಿಖೆ ನಡೆಸಲು ನೇಮಿತವಾದ ಯಾವುದೇ ಆಯೋಗ ಅಥವಾ ವಿಚಾರಣಾ ನ್ಯಾಯಾಲಯದ ಮುಂದೆ ಬಾಕಿ ಇರುವ ವಿಷಯದ ಮೇಲೆ ಚರ್ಚಿಸುವ ಯಾವುದೇ ನಿಲುವಳಿ ಸೂಚನೆಯನ್ನು ತರಲು ಸಾಮಾನ್ಯವಾಗಿ ಅವಕಾಶವನ್ನು ಕೊಡತಕ್ಕದ್ದಲ್ಲ.”**

ಇದಕ್ಕೆ ನಾನು ಒಪ್ಪುತ್ತೇನೆ. ಮುಂದೆ ಇದಕ್ಕೆ exception ಇದೆ.

**“ಪರಂತು, ಅಂಥ ವಿಚಾರವನ್ನು ಚರ್ಚಿಸಲು ಅವಕಾಶ ಕೊಡುವುದರಿಂದ ಶಾಸನಬದ್ಧ ನ್ಯಾಯಾಧಿಕರಣ, ಪ್ರಾಧಿಕಾರ, ಆಯೋಗ ಅಥವಾ ವಿಚಾರಣಾ ನ್ಯಾಯಾಲಯದವರು ಆ ವಿಷಯವನ್ನು ಪರಿಶೀಲಿಸಲು ಬಾಧಕವುಂಟಾಗುವ ಸಂಭವವಿಲ್ಲವೆಂದು ಸಭಾಪತಿಯವರಿಗೆ ಮನವರಿಕೆಯಾದರೆ ಅವರು ತಮ್ಮ ವಿವೇಚನಾನುಸಾರ ವಿಚಾರಣೆಯ ಕಾರ್ಯವಿಧಾನ ಅಥವಾ ವಿಷಯ ಅಥವಾ ಹಂತಕ್ಕೆ ಸಂಬಂಧಪಟ್ಟಂತೆ, ಅಂಥ ವಿಷಯವನ್ನು ಕುರಿತು ಸಭೆಯಲ್ಲಿ ಚರ್ಚೆ ನಡೆಸಲು ಅವಕಾಶ ಕೊಡಬಹುದು.”**

ತಮಗೆ ಅವಕಾಶ ಇದೆ. You have got an unfettered discretionary power.

**ಸಭಾಪತಿಯವರು:-** ನನಗೆ ಇದೆ ನಾನು ಇದರ ಬಗ್ಗೆ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಎಂತಹ ವಿಚಾರಗಳನ್ನು ಚರ್ಚೆ ಮಾಡಬೇಕೆನ್ನುವುದರ ಬಗ್ಗೆಯೂ ತಾವು ಷರತ್ತು ಹಾಕಬಹುದು.

**ಸಭಾಪತಿಯವರು:-** ಮಾನ್ಯ ಎಸ್.ಆರ್. ಪಾಟೀಲ್‌ರವರೇ ನಾನು ಈ ನಿಯಮವನ್ನು ಓದಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಏಕೆಂದರೆ, ಇದನ್ನು ಏಕೆ ವಿಚಾರಣೆ ತೆಗೆದುಕೊಳ್ಳುತ್ತೇವೆ ಎಂದರೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, basically he is an Advocate. ಅವರು cognizance ಅನ್ನು ತೆಗೆದುಕೊಂಡಿದ್ದಾರೆ, summons issue ಮಾಡಿದ್ದಾರೆ. Summons issue ಮಾಡಿದ ನಂತರ ಅವರು ಆರೋಪಿಯಾಗಿ ನ್ಯಾಯಾಲಯದ ಮುಂದೆ ಹೋಗಬೇಕು;

(ಮುಂದು)

(1105) ಎಸ್‌ಪಿಆರ್/ಎಕೆ 1:40 15/12/2021

(ಸಭಾಪತಿಯವರು ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಅಥವಾ ಉನ್ನತ ನ್ಯಾಯಾಲಯಗಳಿಗೆ ಅರ್ಜಿ ಸಲ್ಲಿಸಿ, ಅದನ್ನು ಪ್ರಶ್ನಿಸಬಹುದು. ಅದು ಬೇರೆ ವಿಚಾರ; ಅದನ್ನು ನಾವು ಒಪ್ಪಿಕೊಳ್ಳಬಹುದು. ಆದರೆ ಈ ವಿಚಾರದಲ್ಲಿ ತಮಗೆ ಅಧಿಕಾರವಿದೆ. ಭಾರತೀಯ ದಂಡ ಸಂಹಿತೆಯ ಕಲಂಗಳನ್ವಯ ಇಂತಹ ಘೋರ ಅಪರಾಧಗಳ ಕ್ರಿಮಿನಲ್ ಪ್ರಕರಣಗಳಲ್ಲಿ ರಾಜ್ಯದ ಶಾಸಕ ಮತ್ತು ಸಚಿವರು ಆರೋಪಗಳನ್ನೆದುರಿಸುವ ಸಂದರ್ಭದಲ್ಲಿ, ಸಾರ್ವಜನಿಕ ಬದುಕಿನಲ್ಲಿ ನಾವು ಸ್ವಚ್ಛತೆ, ಪ್ರಾಮಾಣಿಕತೆ, ನಿಷ್ಠೆ, ಬದ್ಧತೆಗಳನ್ನಿಟ್ಟುಕೊಂಡು, ಕಾಪಾಡಿಕೊಳ್ಳಬೇಕು. ಸಮಾಜವು ನಮ್ಮನ್ನು ನೋಡುತ್ತದೆ. ಸಾರ್ವಜನಿಕವಾಗಿ ನಾವು ಸ್ವಚ್ಛವಾಗಿರುತ್ತೇವೆ; ಏಕೆಂದರೆ ಜನರು ನಮ್ಮನ್ನು ನೋಡುತ್ತಾರೆ; ಬಹಳಷ್ಟು ಜನರು ನಮ್ಮನ್ನನುಸರಿಸುತ್ತಾರೆ. ಸದರಿ ಮಂತ್ರಿಗಳು ಬಹಳ ದೊಡ್ಡ ಸ್ಥಾನದಲ್ಲಿದ್ದಾರೆ. ಇವರುಗಳ ಮೇಲೆ ಇಂತಹ ಪ್ರಕರಣಗಳು ದಾಖಲಾದಾಗ, ತಾವು ತಮ್ಮ ವಿವೇಚನೆಗನುಗುಣವಾಗಿ ಕೆಲವು ಷರತ್ತುಗಳನ್ನು ವಿಧಿಸಿ, ಈ ವಿಷಯದ ಬಗ್ಗೆ ಚರ್ಚಿಸಲು ಅವಕಾಶ ನೀಡುವ ಅಧಿಕಾರವು ನಿಮಗಿದೆ, ಪೀಠಕ್ಕೆ ಇದೆ. ಹೀಗಾಗಿ ತಾವು ಯೋಚನೆ ಮಾಡಿ, ಈ ವಿಷಯದಲ್ಲಿ ಯಾವ ರೀತಿಯಾಗಿ ಚರ್ಚೆಯನ್ನು ಮಾಡಬೇಕು ಹಾಗೂ ಅದು ಪೂರ್ವಾಗ್ರಹ ಪೀಡಿತವಾಗಿರಬಾರದು ಹಾಗೂ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ವ್ಯಾಜ್ಯವು ಸಬ್-ಜುಡೀಸ್ ಆಗದಂತೆ ಕೆಲವು ಕಟ್ಟಾಳೆಗಳನ್ನು ವಿಧಿಸಿ, ಅದರ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸುವಂತಹ unfettered discretionary power ತಮಗಿದೆ. ಹೀಗಾಗಿ ತಾವು ಸದರಿ ವಿವೇಚನಾಧಿಕಾರವನ್ನು ಚಲಾಯಿಸಿ. ಸಾರ್ವಜನಿಕ ಬದುಕಿನಲ್ಲಿ ನಾವುಗಳೆಲ್ಲರೂ ಸ್ವಚ್ಛತೆಯಿಂದಿರಬೇಕು, ಪ್ರಾಮಾಣಿಕತೆ, ಬದ್ಧತೆಗಳನ್ನು ಹೊಂದಿರಬೇಕು. ನಮ್ಮ ವಿರುದ್ಧ ಯಾವುದೇ ಪ್ರಕರಣಗಳಿರಬಾರದು. ಏಕೆಂದರೆ ಇಡೀ ರಾಜ್ಯದ ಆರೂವರೆ ಕೋಟಿ ಜನರಿಗೆ ನಾವು ಮಾದರಿಯಾಗಿರಬೇಕು. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು, ಕೆಲವು ಷರತ್ತುಗಳನ್ನು ವಿಧಿಸಿ ಅವಕಾಶ ಮಾಡಿಕೊಡಲು ತಮಗೆ ಅಧಿಕಾರವಿದೆ. ಹೀಗಾಗಿ ತಾವು ನಮಗೆ ಅವಕಾಶವನ್ನು ನೀಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮೊದಲು ಸರ್ಕಾರದ ನಿಲುವನ್ನು ಕೇಳೋಣ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, I won't accept what the Hon'ble Leader of Opposition told just now. ಕ್ರಿಮಿನಲ್ ಪ್ರಕರಣಗಳನ್ನೂ ಸಹ ಸಭಾಪತಿಯವರ ವಿವೇಚನೆಗೆ ಬಿಡುತ್ತೇವೆಂದು ಅವರು ಯಾವ ಕಾರಣಕ್ಕಾಗಿ ಹೇಳಿದ್ದಾರೆಂದು ನನಗೆ ಗೊತ್ತಾಗಲಿಲ್ಲ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರು ಪೂರ್ಣ ಪ್ರಮಾಣದಲ್ಲಿ ವಕೀಲಿಕೆಯನ್ನು ಮಾಡಲಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಪೂರ್ಣ ಪ್ರಮಾಣದಲ್ಲಿ ವಕೀಲಿಕೆಯನ್ನು ಮಾಡಿದಂತೆ ನನಗೂ ಸಹ ಕಾಣಲಿಲ್ಲ. ಬೇಕಾದಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತವೆ. ಈ ಸಂಗತಿಯನ್ನು ನಾನೂ ಸಹ ಒಪ್ಪಿಕೊಂಡಿದ್ದೇನೆ. ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಯಲ್ಲಿದೆ ಎನ್ನುವ ಕಾರಣಕ್ಕಾಗಿ it never bars the jurisdiction of the Government or some Assembly. ಹಲವಾರು ಪ್ರಕರಣಗಳ ಬಗ್ಗೆ ನಾವು ವಿಧಾನಸಭೆಯಲ್ಲಿ ಚರ್ಚಿಸಿದ್ದೇವೆ. We are privileged to discuss it. ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಯಲ್ಲಿದೆ ಅದರಲ್ಲೂ ಕ್ರಿಮಿನಲ್ ಪ್ರಕರಣಗಳ ಬಗ್ಗೆ ಚರ್ಚಿಸಿದಾಗ, ಅದು ಅವರ ಮೇಲೆ ಖಂಡಿತವಾಗಿಯೂ ಸಹ ಪ್ರಭಾವ ಬೀರುತ್ತದೆ. ನಾವು ಮಾತನಾಡುತ್ತಿರುವಾಗ ನಮ್ಮ ಬಳಿ ಯಾವ ರೀತಿಯ ಸಾಕ್ಷ್ಯಾಧಾರಗಳಿವೆ? ನ್ಯಾಯಾಲಯವು ಯಾವುದನ್ನು ಪರಿಗಣಿಸುತ್ತಿದೆ, ನ್ಯಾಯಾಲಯದಲ್ಲಿ ಯಾರನ್ನು ಸಾಕ್ಷಿಯನ್ನಾಗಿ ಮಾಡಲಾಗುತ್ತಿದೆ ಇಂತಹ ಅಂಶಗಳ ಬಗ್ಗೆ ನಾವು ಚರ್ಚೆಯನ್ನು ಮಾಡುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಯಾರೇ ಪ್ರಜ್ಞಾವಂತರು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಕ್ರಿಮಿನಲ್ ಪ್ರಕರಣಗಳ ಬಗ್ಗೆ ಯಾವುದೇ ಚುನಾಯಿತ ಸಭೆಯಲ್ಲಿ ಮಾತನಾಡುವುದು ವಾಡಿಕೆ ಮತ್ತು ಸಂಪ್ರದಾಯಗಳಲ್ಲ.

**ಸಭಾಪತಿಯವರು:-** ಇದು ಸರಿಯಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ತಾವು ಇದನ್ನು ತಿರಸ್ಕರಿಸಬೇಕು; ಇದರಿಂದ ಕೆಟ್ಟ ಪರಿಣಾಮವುಂಟಾಗಿ, ಮುಂದಿನ ದಿನಗಳಲ್ಲಿ ಯಾರು ಮತ್ತು ಏನು ಬೇಕಾದರೂ ಪ್ರಸ್ತಾಪಿಸುವುದಕ್ಕೆ ಅವಕಾಶವಾಗುತ್ತದೆ. ಆಗ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರಿಮಿನಲ್ ಪ್ರಕರಣಗಳೆಲ್ಲವೂ ಸಹ ಇಲ್ಲಿ ಚರ್ಚೆಯಾಗುವುದಕ್ಕೆ ಪ್ರಾರಂಭವಾಗುತ್ತವೆ. ಆಗ ಸದನದ ಗತಿ ಏನಾಗುತ್ತದೆ?

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಮತ್ತು ನಮ್ಮ ವಿರೋಧ ಪಕ್ಷದ ನಾಯಕರು ಇವರಿಬ್ಬರೂ ಕಾನೂನು ಮತ್ತು ನಿಯಮಗಳ ಬಗ್ಗೆ ಹೇಳಿದ್ದಾರೆ. ಇಲ್ಲಿ ಸದನದ ನೈತಿಕತೆಯ ಬಗ್ಗೆ ಪ್ರಶ್ನೆಯಿದೆ ವಿನಃ ಕಾನೂನು ಮತ್ತು ನಿಯಮಗಳ ಬಗ್ಗೆ ಅಲ್ಲ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರಲಿಕ್ಕೆ ಬಯಸುತ್ತೇನೆ. ಶ್ರೀ ಎಲ್.ಕೆ.ಅಡ್ವಾಣಿ ಮತ್ತು ಶ್ರೀ ಶರದ್ ಯಾದವ್‌ರವರುಗಳ ವಿರುದ್ಧ ಹವಾಲಾ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯು ದಾಖಲಾಗಿತ್ತು; ಅವರುಗಳು ತತ್‌ಕ್ಷಣವೇ ರಾಜಿನಾಮೆಯನ್ನು ನೀಡಿದರು. ನೈತಿಕತೆ ಎಂದು ಹೇಳಿದರೆ ಅದು. ಏಕೆಂದರೆ, ಭಾರತೀಯ ಜನತಾ ಪಕ್ಷದವರೇ ಬಹಳಷ್ಟು ನೈತಿಕತೆಯ ಬಗ್ಗೆ ಮಾತನಾಡುತ್ತಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಇರುವುದು ನಮಗೆ ಮಾತ್ರವೇ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಯಾವುದೇ ಪ್ರಕರಣದ ಬಗ್ಗೆ ಚರ್ಚಿಸುವ ಪ್ರಶ್ನೆಯೇ ಇಲ್ಲ. ಸಭಾಪತಿಗಳು ನ್ಯಾಯಾಧೀಶರಲ್ಲ ಮತ್ತು ನಾವುಗಳು ವಕೀಲರುಗಳಲ್ಲ. ಯಾವುದೇ ಪ್ರಕರಣದಲ್ಲಿ ಒಬ್ಬ ಮಂತ್ರಿಯ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುವಾಗ, ಮಂತ್ರಿ ಹೋಗುವುದಿಲ್ಲ, ಸರ್ಕಾರ ಹೋಗುತ್ತದೆ. ಆಗ ಯಾವುದೇ ಸರ್ಕಾರದ ವಿರುದ್ಧ ಸಾಕ್ಷಿ ನೀಡಲು ಯಾರಿಗಾದರೂ ಧೈರ್ಯವಿರುತ್ತದೆಯೇ? ಆದ್ದರಿಂದ ನೈತಿಕತೆಯ ವಿಚಾರವನ್ನಿಟ್ಟುಕೊಂಡು, ನಾನು ಶ್ರೀ ಎಂ.ನಾರಾಯಣ ಸ್ವಾಮಿಯವರು ಪ್ರಸ್ತಾಪಿಸಿದಂತೆ, ಈ ಅಂಶವನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಯಾರೇ ಒಬ್ಬ ಮಂತ್ರಿ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿದ್ದರೆ, ಅವರು ಸರ್ಕಾರದಲ್ಲಿರಬಹುದೇ ಎನ್ನುವುದು ತಮ್ಮ ವಿವೇಚನೆಗೆ ಬಿಟ್ಟ ವಿಚಾರವಾಗಿದೆ. ಏಕೆಂದರೆ, ಇದರ ಬಗ್ಗೆ ಆಡಳಿತ ಪಕ್ಷದವರೇ ಬಹಳಷ್ಟು ಭಾಷಣಗಳನ್ನು ಮಾಡಿದ್ದಾರೆ ಹಾಗೂ ಈಗಲೂ ಸಹ ಮಾಡುತ್ತಿರುತ್ತಾರೆ. ಪ್ರಥಮ ವರ್ತಮಾನ ವರದಿ ದಾಖಲಾದ ಕೂಡಲೇ ಮಂತ್ರಿಗಳಿಂದ ರಾಜೀನಾಮೆ ಪಡೆಯಬೇಕೆಂದು ಶ್ರೀ ಎಂ.ನಾರಾಯಣಸ್ವಾಮಿರವರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಯಾರೇ ದೂರುದಾರರು ನಮ್ಮ ಅಥವಾ ಆಡಳಿತ ಪಕ್ಷದ ಸದಸ್ಯರುಗಳ ಮತ್ತು ಸಭಾಪತಿಯವರ ವಿರುದ್ಧ ದೂರನ್ನು ನೀಡಬಹುದು. ನಂತರದಲ್ಲಿ ಅದರ ಬಗ್ಗೆ ತನಿಖೆಯಾಗಬೇಕು ಮತ್ತು ಅದರಲ್ಲಿ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

'ಬಿ' ವರದಿಯನ್ನು ಸಲ್ಲಿಸಬೇಕು. ಇವುಗಳೆಲ್ಲವನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಲ್ಲಿರುವ ಭಿನ್ನಾಭಿಪ್ರಾಯವೇನೆಂದರೆ, ಖಾಸಗಿ ದೂರು ದಾಖಲಾದ ಮೇಲೆ, ನ್ಯಾಯಾಧೀಶರು ಸಮನ್ಸ್‌ಗಳನ್ನು ನೀಡಿ, ಸಾಕ್ಷಿಗಳ ಹೇಳಿಕೆಗಳನ್ನು ಪಡೆದಿರುವಾಗ, the judge has come to the conclusion that these five accused have committed an offence under so and so sections of the Indian Penal Code. They have taken the cognizance here. Tom, Dick and Harry ಯಂತಹ ಯಾರೋ ಮೂರನೇ ವ್ಯಕ್ತಿಯು ದುರುದ್ದೇಶದಿಂದ ಕ್ಷುಲ್ಲಕ ಕಾರಣಕ್ಕಾಗಿ ಸುಳ್ಳು ದೂರನ್ನು ಸಲ್ಲಿಸಿದಾಗ......, ಆದರೆ ಇಲ್ಲಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್‌ರವರು ದೂರನ್ನು ಪರಿಶೀಲಿಸಿ, ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿದ್ದಾರೆ. He has come to the conclusion that these fellows have committed a mistake; they have committed an offence under so and so sections of the I.P.C. ಅವರು ಅಂತಿಮ ತೀರ್ಮಾನಕ್ಕೆ ಬಂದು ಸಮನ್ಸ್‌ಗಳನ್ನು ನೀಡಿ ಎಂದು ಹೇಳಿದ್ದಾರೆ. ಯಾವುದೇ ದಾರಿಹೋಕ ಪ್ರಧಾನ ಮಂತ್ರಿ ಆದಿಯಾಗಿ ಯಾರದೇ ವಿರುದ್ಧ ದೂರನ್ನು ನೀಡಿದ ಕೂಡಲೇ, ಅವರು ರಾಜೀನಾಮೆಯನ್ನು ನೀಡಬೇಕೆಂದು ನಾವು ಹೇಳುವುದಿಲ್ಲ. ಆದರೆ, ಪ್ರಸ್ತುತ ಪ್ರಕರಣವು ನ್ಯಾಯಾಲಯದಲ್ಲಿ ಪರಿಶೀಲನೆಯಲ್ಲಿದೆ. ಅಲ್ಲಿ ವಿಸ್ತೃತವಾಗಿ ಎಲ್ಲವನ್ನೂ ಪರಿಶೀಲಿಸಿದ್ದಾರೆ ಹಾಗೂ ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿದ್ದಾರೆ; ಅವರುಗಳ ಪಾಟೀ ಸವಾಲುಗಳೂ ಸಹ ಆಗಿವೆ. ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡಿವೆ. That Metropolitan Magistrate has come to the conclusion that these five accused seem to have committed an offence; ಈ ರೀತಿಯಾಗಿಯೂ ಸಹ ನ್ಯಾಯಾಧೀಶರು ಹೇಳಿದ್ದಾರೆ. ಹೀಗಾಗಿ ಇಲ್ಲಿ ವ್ಯತ್ಯಾಸಗಳಿವೆ, ಇಷ್ಟನ್ನು ಮಾತ್ರವೇ ನಾನು ಹೇಳಲಿಚ್ಛಿಸುತ್ತೇನೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಆರೋಪಿ ಮತ್ತು ಅಪರಾಧಿ ಇವರುಗಳ ಮಧ್ಯೆ ವ್ಯತ್ಯಾಸಗಳಿವೆ. ಆರೋಪಿಗಳೆಲ್ಲರೂ ಅಪರಾಧಿಗಳಲ್ಲ. ಯಾರೋ ಆರೋಪ ಮಾಡಿರುತ್ತಾರೆ. ಆರೋಪವು ಮೇಲ್ನೋಟಕ್ಕೆ ಸಾಬೀತಾಗುತ್ತದೆಯೇ ಎಂದು ನ್ಯಾಯಾಲಯವು ವಿಶ್ಲೇಷಿಸುವುದಕ್ಕೆ, ಚರ್ಚೆ ಮಾಡುವುದಕ್ಕೆ, ಸಾಕ್ಷ್ಯಾಧಾರಗಳನ್ನು ಕರೆಸುವುದಕ್ಕೆ ಕಾಗ್ನಿಝೆನ್ಸ್‌ಗೆ ತೆಗೆದುಕೊಂಡಿದ್ದೇವೆ ಎಂದು ನ್ಯಾಯಾಲಯವು ಹೇಳಿರುವುದನ್ನು ಹೊರತುಪಡಿಸಿದರೆ, ನ್ಯಾಯಾಲಯವು ಎಲ್ಲಿಯೂ ಸಹ ಇವರುಗಳು ಅಪರಾಧಿಗಳೆಂದು ಹೇಳಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನ್ಯಾಯಾಲಯವು ಆ ರೀತಿಯಾಗಿ ಹೇಳಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಮುಖ್ಯ ಸಚೇತಕರು ನನ್ನನ್ನು ಮಾತನಾಡಲು ಬಿಡಬೇಕು. ಅವರು ನ್ಯಾಯಾಧೀಶರೇ? ಅವರು ಈ ರೀತಿಯಾಗಿ ಮಾತನಾಡುತ್ತಾರೆ. There is a case. There is a cognizable offence registered. 'Convert the case as criminal offence' ಎಂದು ಹೇಳಿ, ನ್ಯಾಯಾಧೀಶರು ಪ್ರಕರಣವನ್ನು ತೆಗೆದುಕೊಂಡಿದ್ದಾರೆ. ಇದರ ವಿಚಾರಣೆಯು ನಡೆಯುತ್ತಿದೆ ಹಾಗೂ ಇನ್ನೂ ತೀರ್ಪು ಬಂದಿರುವುದಿಲ್ಲ. ಯಾವುದೇ ವ್ಯಕ್ತಿಯನ್ನು ಅಪರಾಧಿ ಎಂದು ನ್ಯಾಯಾಲಯವು ತೀರ್ಪು ನೀಡುವವರೆಗೆ, ಭೂಮಿಯ ಮೇಲೆ ಯಾರೂ ಸಹ ಅವರನ್ನು ಅಪರಾಧಿ ಎಂದು ಹೇಳುವ ಅಧಿಕಾರವಿಲ್ಲ. ಅವರು ಮಂತ್ರಿಯಾಗಿದ್ದ ಅವಧಿಯಲ್ಲಿ ಈ ಪ್ರಕರಣವು ಆಗಿಲ್ಲ. ಯಾರೋ 12-13 ವರ್ಷಗಳ ಹಿಂದೆ ಈ ದೂರನ್ನು ನೀಡಿದ್ದರು.

**(ಗೊಂದಲ)**

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, 2003ನೇ ಇಸವಿಯಲ್ಲಿ ಈ ದೂರು ದಾಖಲಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಪ್ರಕರಣದ ಮಾಹಿತಿಯನ್ನು ಚುನಾವಣೆಯಲ್ಲಿ ಸ್ಪರ್ಧಿಸುವ ಸಂದರ್ಭದಲ್ಲಿ ಅವರು ಚುನಾವಣಾ ಆಯೋಗದ ಮುಂದೆ ತಿಳಿಸಿರುತ್ತಾರೆ. ಯಾವ ಎಂ.ಎಲ್.ಎ.ಗಳ ವಿರುದ್ಧ ಪ್ರಕರಣಗಳು ದಾಖಲಾಗಿವೆ ಎನ್ನುವುದು ಚುನಾವಣಾ ಆಯೋಗಕ್ಕೆ ತಿಳಿದಿರುತ್ತದೆ. ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು ಅವರು ಮಂತ್ರಿ ಅಥವಾ ಎಂ.ಎಲ್.ಎ. ಆಗುವುದಕ್ಕೆ ಅರ್ಹರಲ್ಲ ಎಂದು ತಿಳಿಸಿದ್ದರೆ, ಅವರ ನಾಮನಿರ್ದೇಶನವು ಅವತ್ತಿನ ದಿನವೇ ತಿರಸ್ಕೃತಗೊಳ್ಳುತ್ತಿತ್ತು. The election laws are very clear. ನಮ್ಮಗಳ ವಿರುದ್ಧ ಯಾವುದೇ ಪ್ರಕರಣಗಳು ದಾಖಲಾಗಿದ್ದರೆ, ಅವುಗಳನ್ನು ನಾವು ಘೋಷಿಸುತ್ತೇವೆ. ಪ್ರಕರಣದಲ್ಲಿರುವವರೆಲ್ಲರೂ ಅಪರಾಧಿಗಳಾಗುತ್ತೇವೆಯೇ? ಪ್ರಶ್ನಿತ ಪ್ರಕರಣದಲ್ಲಿ ಅವರುಗಳು ಆರೋಪಿಗಳಾಗಿರುವುದು ನಿಜ; ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. But he is not punished by court. Please don't trial this court. Parallel court ಆಗಿ ಸಭಾಪತಿಯವರು ಇಲ್ಲಿ ನ್ಯಾಯಾಲಯವನ್ನು ನಡೆಸುವುದು ಬೇಡ. ದಯಮಾಡಿ ಇದನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಶಿಕ್ಷಾರ್ಹವೆಂದು ನ್ಯಾಯಾಲಯವು ತಿಳಿಸಿದೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ನಾನು ಮಾತನಾಡುವುದನ್ನು ಕೇಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, it is punishable. If he is found guilty, he is punishable.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, .......

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ......

**ಸಭಾಪತಿಯವರು:-** ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ; ನಾನು ಹೇಳುವುದನ್ನು ಕೇಳಿ. ಈಗ ನೀವು ಮಾತನಾಡುವುದು ಬೇಡ. ನಾನು ಹೇಳುತ್ತೇನೆ; ನೀವು ಆಮೇಲೆ ಮಾತನಾಡಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ.

**ಸಭಾಪತಿಯವರು:-** ನಾನು ಹೇಳುವುದನ್ನು ಕೇಳಿ. ಈ ಸದನದ ಬಗ್ಗೆ ನಿಮಗೆ ಕಿಮ್ಮತ್ತು ಮತ್ತು ಗೌರವವಿಲ್ಲವೇ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಕೇಳಿ; ನಂತರದಲ್ಲಿ ನೀವು ಏನಾದರೂ ತೀರ್ಮಾನವನ್ನು ನೀಡಿ. ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಇವರುಗಳು ಹೇಳಿರುವುದೆಲ್ಲವನ್ನೂ ನಾನು ಕೇಳಿಸಿಕೊಂಡಿದ್ದೇನೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರೂ ಸಹ ಸಮರ್ಥವಾಗಿ ಸದನಕ್ಕೆ ಕಾನೂನಿನ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಇದರ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರೂ ಸಹ ಹೇಳಿದ್ದಾರೆ. ಪ್ರಶ್ನಿತ ಪ್ರಕರಣದ ವಿವರಗಳ ಬಗ್ಗೆ ನಾವು ಚರ್ಚೆಗೆ ತೆಗೆದುಕೊಂಡಿಲ್ಲ. ಒಬ್ಬ ಸಾಮಾನ್ಯ ವ್ಯಕ್ತಿಯು ಸರ್ಕಾರದ ಒಬ್ಬ ಸಚಿವರಾಗಿದ್ದವರ ವಿರುದ್ಧ ನೀಡಿದಾಗ ದೂರಿನನ್ವಯ ಪ್ರಥಮ ವರ್ತಮಾನ ವರದಿಯು ದಾಖಲಾಗಲಿಲ್ಲ. ನಂತರ ದೂರುದಾರರು ನ್ಯಾಯಾಲಯಕ್ಕೆ ಹೋದಾಗ,

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1106)15-12-2021(01-50)bsd-ak

**ಶ್ರೀ ಮರಿತಿಬ್ಬೇಗೌಡ (ಮುಂದು)**

ಈ ವಿಚಾರ court ನಲ್ಲಿ ಚರ್ಚೆಯಾಗಿ ನ್ಯಾಯಾಧೀಶರು ಒಬ್ಬ ಸಚಿವರ ಮೇಲೆ F.I.R (First Information Report) ಮಾಡಬೇಕೆಂಬ ನಿರ್ದೇಶನ ಕೊಟ್ಟಿದ್ದಾರೆ. ದಿನಾಂಕ ೨೫-೧೧-೨೦೨೧ ರಂದು ಮಂತ್ರಿಗಳಾಗಿರುವವರ ಮೇಲೆ ಒಬ್ಬ ನ್ಯಾಯಾಧೀಶರು F.I.R ಹಾಕಿ Charge Sheet ಮಾಡಬೇಕು ಎಂದು ನಿರ್ದೇಶನ ಕೊಟ್ಟಿದ್ದಾರೆ. ಮಾನ್ಯ ಕಾನೂನು ಸಚಿವರು ಆರೋಪಿ ಮತ್ತು ಅಪರಾಧಿಗಳ ಇರುವ ವ್ಯತ್ಯಾಸವನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. Court ತೀರ್ಪು ಹೊರಬರದೇ ನಾವು ಅವರನ್ನು ಅಪರಾಧಿ ಎಂದು ಖಂಡಿತವಾಗಿ ಯಾರೂ ಹೇಳುವುದಿಲ್ಲ. ಆದರೆ ಇಲ್ಲಿ ನೈತಿಕತೆ ಪ್ರಶ್ನೆ ಬರುತ್ತದೆ. ಒಂದು ಸರ್ಕಾರದ ಸಚಿವ ಸಂಪುಟದ ಸಚಿವರ ಮೇಲೆ ಒಬ್ಬ ನ್ಯಾಯಾಧೀಶರು F.I.R ಹಾಕಿ ಎಂದು ನಿರ್ದೇಶನ ಕೊಟ್ಟ ಹಿನ್ನಲೆಯಲ್ಲಿ ಸಚಿವರ ಮೇಲೆ F.I.R ಆಗಿದೆ ಎಂದಾಗ ಅದರ ಬಗ್ಗೆ ಈ ಶಾಸನ ಸಭೆಯಲ್ಲಿ ಚರ್ಚೆ ಮಾಡಲು ಅವಕಾಶವನ್ನು ಕೇಳುತ್ತಿದ್ದೇವೆ. ಇದು ಸರ್ಕಾರದ ದೊಡ್ಡ ನೈತಿಕತೆ ಪ್ರಶ್ನೆಯಾಗಿದೆ. ನಾವು ನ್ಯಾಯಾಲಯದಲ್ಲಿರುವ case, ವಿಶ್ಲೇಷಣೆ ಬಗ್ಗೆ ಅಲ್ಲ. ದಯಮಾಡಿ ಇದಕ್ಕೆ ಅವಕಾಶ ಕಲ್ಪಿಸಬೇಕು.

**ಸಭಾಪತಿಯವರುಃ-** ನಾನು ಎರಡೂ ಕಡೆ ವಾದವನ್ನು ಕೇಳಿದ್ದೇನೆ. ನಿಲುವಳಿ ಸೂಚನೆಯನ್ನು ಮಂಡಿಸುವ ಹಕ್ಕಿನ ಮೇಲಿನ ನಿರ್ಬಂಧಗಳ ಕುರಿತು 'Practice and Procedure of Parliament' by M.N. Kaul and S.L. Shakdher ಪುಸ್ತಕದ ೭ನೇ ಆವೃತ್ತಿಯ ಪುಟ ಸಂಖ್ಯೆ ೫೬೪ರಲ್ಲಿ " ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿರುವ ಯಾವುದೇ ವಿಷಯದ ಮೇಲೆ ಚರ್ಚೆಗೆ ಅನುಮತಿಯನ್ನು ಕೋರುವ ನಿಲುವಳಿ ಸೂಚನೆಯು ಸ್ವೀಕಾರಾರ್ಹವಲ್ಲ" ಎಂದು ಹೇಳಿದ್ದಾರೆ. ಅದರ ಜೊತೆಗೆ ಅವರು ಮಂಡನೆ ಮಾಡುವಾಗ ಸರ್ಕಾರಕ್ಕೆ ಸಂಪೂರ್ಣ ಮಾಹಿತಿ ಬಂದಿರಲಿಲ್ಲ. ಸರ್ಕಾರಕ್ಕೆ ಮಾಹಿತಿ ಕೊಟ್ಟು, ಈ ವಿಷಯವು ಸದನದಲ್ಲಿ ಪ್ರಸ್ತಾಪವಾದಾಗ ಸರ್ಕಾರ ಈ ವಿಷಯ ಕೋರ್ಟಿನಲ್ಲಿರುವ ಬಗ್ಗೆ ಮಾಹಿತಿಯನ್ನು ಕೊಟ್ಟಿದೆ. It has gone into the record. **<u>ಈ ಹಿನ್ನೆಲೆಯಲ್ಲಿ ಪ್ರಕರಣವು ನ್ಯಾಯಾಲಯದಲ್ಲಿರುವುದರಿಂದ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ ೭೨ ರ ಪ್ರಕಾರ ನಿಲುವಳಿ ಸೂಚನೆಯಡಿ ಪ್ರಸ್ತಾಪಿಸಲು ಅರ್ಹವಾಗುವುದಿಲ್ಲವಾದ ಕಾರಣ ನಿಲುವಳಿ ಸೂಚನೆಗೆ ಅನುಮತಿಯನ್ನು ನಿರಾಕರಿಸಿದ್ದೇನೆ.</u>** ಈಗ ಸದನವನ್ನು ಮಧ್ಯಾಹ್ನ 3-00 ಗಂಟೆಯವರೆಗೆ ಮುಂದೂಡುತ್ತೇನೆ.

---

(1107) 15.12.2021 3.10 ಪಿಕೆ:ಆರ್‌ಎನ್

**(ಸದನವು ಮಧ್ಯಾಹ್ನ 2 ಗಂಟೆ 52 ನಿಮಿಷಗಳಿಗೆ ಮುಕ್ತಾಯಗೊಂಡು, ಭೋಜನ ವಿರಾಮದ ನಂತರ ಪುನಃ ಮಧ್ಯಾಹ್ನ 3-00 ಗಂಟೆಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠಾಸೀನರಾದರು)**

**ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಮುಂದುವರೆದ ಚರ್ಚೆ**

**"ಸರ್ಕಾರದಲ್ಲಿರುವ ಒಬ್ಬ ಹಾಲಿ ಮಂತ್ರಿ ಹಾಗೂ ಮಾಜಿ ಮಂತ್ರಿ ಇವರಿಬ್ಬರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬೇಕೆನ್ನುವ ಬಗ್ಗೆ.**

\- - - - - -

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಗಳೆ, ತಾವು ನಿಜವಾಗಲೂ ಕೂಡ ನಮಗೆ ನ್ಯಾಯವನ್ನು ಕೊಡಲಿಲ್ಲ. ಮಂತ್ರಿಗಳು ಮಾಡಿರುವ ಅಪರಾಧವನ್ನು ಎತ್ತಿ ತೋರಿಸಿದರೂ ಕೂಡ ಕೋರ್ಟ್ ಆರ್ಡರನ್ನು ತೋರಿಸಿದರೂ ಕೂಡ ನೀವು ನಮಗೆ ನ್ಯಾಯ ಕೊಡದೇ ಇರುವ ಕಾರಣಕ್ಕಾಗಿ ನಾವು ಬಾವಿಯೊಳಗಿದು ಧರಣಿ ಮಾಡುತ್ತೇವೆ.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎಂ.ನಾರಾಯಣಸ್ವಾಮಿಯವರನ್ನು ಹೊರತುಪಡಿಸಿ ಕಾಂಗ್ರೆಸ್ ಪಕ್ಷದ ಉಳಿದೆಲ್ಲಾ ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಸಭಾಪತಿಯವರು**:- ನಿಯಮ 68ರ ಅಡಿಯಲ್ಲಿನ ವಿಷಯದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಬೇಕು.

**ಶ್ರೀ ಕಾಂತರಾಜ್(ಬಿ.ಎಂ.ಎಲ್):-**ಮಾನ್ಯ ಸಭಾಪತಿಗಳೆ, ಸದನದಲ್ಲಿ ಒಬ್ಬರೂ ಮಂತ್ರಿಗಳಿಲ್ಲ, ಅಧಿಕಾರಿಗಳಿಲ್ಲ. ಎಷ್ಟು ಜನ ಮಂತ್ರಿಗಳಿದ್ದಾರೆ?

**ಶ್ರೀ ವಿ.ಸೋಮಣ್ಣ:-** ನಾನು ಮಂತ್ರಿಯಲ್ಲವೇ?

**ಶ್ರೀ ಕಾಂತರಾಜ್(ಬಿ.ಎಂ.ಎಲ್):-** ಮಾನ್ಯ ಸೋಮಣ್ಣನವರೊಬ್ಬರು ಇದ್ದಾರೆ.

**ಸಭಾಪತಿಯವರು:-** ಮಂತ್ರಿಗಳನ್ನು ಸದನಕ್ಕೆ ಕರೆಸಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ವಿ.ಸೋಮಣ್ಣ**:- ಬರುವುದಕ್ಕೆ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಹೌಸ್ ಆರ್ಡರ್‌ನಲ್ಲಿ ಇಲ್ಲ. ಹೇಗೆ ಮಾತನಾಡಲಿ.

**ಸಭಾಪತಿಯವರು:-** ಸದನ ಏಕೆ ಆರ್ಡರ್‌ನಲ್ಲಿಲ್ಲ ಎಂಬುದನ್ನು ವಿರೋಧ ಪಕ್ಷದ ನಾಯಕರಾಗಿ ನೀವೇ ಹೇಳಬೇಕು. ಯಾವುದೇ ವಿಚಾರದಲ್ಲಿ ಒಂದು ತೀರ್ಮಾನ ತೆಗೆದುಕೊಂಡ ನಂತರ ಮತ್ತೆ ಅದರ ವಿರುದ್ಧವಾಗಿ ನಡೆದುಕೊಳ್ಳುವುದು ಸರಿಯೇ ಎನ್ನುವುದನ್ನು ನೀವೇ ಹೇಳಿ ನೋಡೋಣ? ನಾನು ಇಂಥದ್ದನ್ನು ಒಪ್ಪುವುದಿಲ್ಲ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ**:-ಕೋರ್ಟ್‌ನವರು ಅವರ ಮೇಲೆ ಎಫ್‌ಐಆರ್ ಹಾಕಿ ಎಂದು ಹೇಳಿದ್ದಾರಲ್ಲ.

**ಸಭಾಪತಿಯವರು**:- ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಇದನ್ನೆಲ್ಲಾ ಒಪ್ಪುವುದಿಲ್ಲ. ನಾನು ಈಗಾಗಲೇ ತೀರ್ಮಾನವನ್ನು ಕೊಟ್ಟಿದ್ದೇನೆ. ನನಗೆ ಬಹಳಷ್ಟು ಜನರು ಸಲಹೆಯನ್ನು ಕೊಡಬಾರದು. ನಾನು ಎಲ್ಲಾ ವಿಚಾರಗಳನ್ನುಓದಿಯೇ ತೀರ್ಮಾನ ಹೇಳಿದೆ. ಮಾನ್ಯ ಕಾನೂನು ಸಚಿವರು ಅಥೆಂಟಿಕ್ ಆಗಿ ಹೇಳಿದ್ದು ದಾಖಲೆಗೆ ಹೋಗಿದೆ. ನಾನು ಎಲ್ಲಾ ರೂಲ್ಸ್-ರೆಗ್ಯುಲೇಷನ್ ನೋಡಿದ್ದೇನೆ. ಹೀಗೆಯೇ ಮಾಡಬೇಕೆಂದು ನೀವು ಹೇಳುವುದಕ್ಕಾಗುವುದಿಲ್ಲ. ನೀವು ಹೇಳಿದಂತೆ ಕುಣಿಯುವುದಕ್ಕೆ ಆಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೆ, ನಿಮಗೆ discretionary power ಇತ್ತು. ಆ power exercise ಮಾಡಿದ ಹಿನ್ನೆಲೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು.

**ಸಭಾಪತಿಯವರು:-** ಅದೆಲ್ಲಾ ಬೇಡ, ಈಗ ಮುಗಿದ ವಿಚಾರ.

**ಶ್ರೀ ವಿ.ಸೋಮಣ್ಣ(ವಸತಿ ಸಚಿವರು)**:-ಮಾನ್ಯ ಸಭಾಪತಿಗಳೆ, ತಾವೂ ಕೂಡ ಸವಿಸ್ತಾರವಾಗಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದೀರಿ. ಮಾನ್ಯ ಹರಿಪ್ರಸಾದ್‌ರವರು ಮಾತನಾಡಿದ್ದಾರೆ. ಮಾನ್ಯ ಎಂ.ನಾರಾಯಣಸ್ವಾಮಿಯವರಂತೂ ಏನೇನು ಮಾತನಾಡಬೇಕೋ ಅವೆಲ್ಲವನ್ನೂ ಮಾತನಾಡಿದ್ದಾರೆ. ಒಂದು ಸತ್ಸಂಪ್ರದಾಯವನ್ನು ತಾವು ಎತ್ತಿ ಹಿಡಿದಿದ್ದೀರಿ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಿರಿಯ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸದಸ್ಯರಾಗಿದ್ದು ಅವರು conclude ಮಾಡುವಾಗ ಯಾವರೀತಿ ಮಾತನಾಡಿದರು ಎನ್ನುವುದು ನಮಗೆ ಅರ್ಥವಾಗಿದೆ. ನಾನು ಕಾಂಗ್ರೆಸ್ ಪಕ್ಷದ ಸನ್ಮಿತ್ರರಲ್ಲಿ ಒಂದು ವಿನಂತಿ ಮಾಡಬಯಸುತ್ತೇನೆ. ವಿಶೇಷವಾಗಿ ಆಡಳಿತ ಪಕ್ಷ-ವಿರೋಧ ಪಕ್ಷ ಎಂದು ಹೇಳುವ ಬದಲಾಗಿ ಎಲ್ಲೋ ಒಂದು ಕಡೆ ಮೊಸರಿನಲ್ಲಿ ಕಲ್ಲನ್ನು ಹುಡುಕುವ ಕೆಲಸ ಮಾಡುವಾಗ, ಯಾವ ಯಾವ ಪ್ರಕರಣಗಳು ಯಾವ ಯಾವ ರೀತಿ ಇತ್ತು ಎನ್ನುವುದರ ಬಗ್ಗೆ ತಾವು ಬಿಡಿಸಿ ಹೇಳಿದ್ದೀರಿ. ಎಲ್ಲವೂ ಯಾವ ಯಾವ ರೀತಿ ಆಗಬೇಕೋ ಅದೆಲ್ಲವೂ ಆಗಿದೆ. ತಮ್ಮ ಮುಖಾಂತರ ಸಹೋದರ ಮಾನ್ಯ ಎಂ.ನಾರಾಯಣಸ್ವಾಮಿಯವರಿಗೆ ಮುಂದೆ ಒಳ್ಳೆಯ ಭವಿಷ್ಯ ಇದೆ. ಅವರು ನನಗೆ 25-30 ವರ್ಷದಿಂದ ಪರಿಚಯ. ಹಾಗಾಗಿ ನಾನು ಇಷ್ಟು ಮಾತ್ರ ಹೇಳುತ್ತೇನೆ. ಕಾನೂನಿಗಿಂತ ನಾವು ಯಾರು ದೊಡ್ಡವರಲ್ಲ. ನಾವಿಲ್ಲೇನು ಸತ್ಸಂಪ್ರದಾಯವನ್ನು ಹಾಕಿಕೊಟ್ಟಿದ್ದೇವೆಯೋ ಅದನ್ನು ಪಾಲನೆ ಮಾಡಬೇಕು. ಮಾನ್ಯ ಸಭಾಪತಿಗಳೆ, ಒಬ್ಬ ಹಿರಿಯರಾಗಿ ತಾವು ಅದರ ಘನತೆ-ಗಾಂಭೀರ್ಯವನ್ನು ತಿಳಿದಿದ್ದೀರಿ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಹರಿಪ್ರಸಾದ್ ಸಾಹೇಬರು ಲೋಕಸಭಾ ಸದಸ್ಯರಾಗಿದ್ದವರು, ತಮ್ಮದೇ ದೃಷ್ಟಿಕೋನವುಳ್ಳವರಾಗಿದ್ದಾರೆ, ಚಿಂತಕರಾಗಿದ್ದಾರೆ.

**ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರು ಬಾವಿಗೆ ಬಂದಿದ್ದಾರೆ ಎನ್ನುವುದು ನನಗೆ ವಿಚಿತ್ರ ಎನಿಸುತ್ತಿದೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಗಳೆ, ಈ ವಿಚಾರಲ್ಲಿ ರೂಲಿಂಗ್ ಆಗಿ, ಪ್ರತಿಯೊಂದೂ ಆಗಿ, ಎಲ್ಲವೂ ಮುಗಿದ ಮೇಲೆ ಸಭೆಯ ಕಲಾಪಗಳನ್ನು ನಡೆಸಬೇಕಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಆಸನಗಳಿಗೆ ತೆರಳಬೇಕೆಂದು ಕೇಳಿಕೊಳ್ಳುತ್ತೇನೆ. ತಾವುಗಳು ಏನೇನು ಬೇಕೋ ಅವೆಲ್ಲವನ್ನೂ ಮಾತನಾಡಿದ್ದೀರಿ. ಈಗಾಗಲೇ ಎಲ್ಲವನ್ನೂ ಹೇಳಿದ್ದೀರಿ. ಮತ್ತೆ ನಾಳೆ ಯಾವ ಯಾವ ಸಂದರ್ಭದಲ್ಲಿ ಯಾವರೀತಿ ಆಗುತ್ತದೆಯೋ ಗೊತ್ತಿಲ್ಲ. ಎಲ್ಲವನ್ನು ಇಲ್ಲಿ ತಂದು ಚರ್ಚೆ ಮಾಡುವುದು, ಕಾನೂನನ್ನು ಮೀರಿ ಏನನ್ನೋ ಮಾಡುವಂಥದ್ದು ಅವಶ್ಯಕತೆ ಇಲ್ಲ. ಮಾನ್ಯ ಸಭಾಪತಿಗಳೇ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ. ಧರಣಿಯಲ್ಲಿ ನಿರತರಾಗಿರುವ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಕ್ಕೆ ತೆರಳಬೇಕೆಂದು ಒಬ್ಬ ಸಚಿವನಾಗಿ ಕೇಳಿಕೊಳ್ಳುತ್ತೇನೆ.

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಗಳೆ,

**ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ನೀವು ಮೇಯರ್ ಆಗಿದ್ದವರು. ಚೇರ್ ಒಂದು ತೀರ್ಮಾನ ಕೊಟ್ಟ ಮೇಲೆ ಅದರ ವಿರುದ್ಧವಾಗಿ ಮಾತನಾಡುವುದು ಎಂತಹ ಪದ್ಧತಿ? ನೀವು ಮೇಯರ್ ಆಗಿದ್ದವರು, ಇದು ನಿಮಗೆ ಸರಿಯೆನಿಸುತ್ತದೆಯೇ? ನಾನು ಎಲ್ಲಾ ಕಾನೂನುಗಳನ್ನು ನೋಡಿ ತೀರ್ಮಾನ ಕೊಟ್ಟಿದ್ದೇನೆ. ನೀವು ಈ ರೀತಿ ಮಾಡಿದರೆ ಹೇಗೇ? ಸರ್ಕಾರದ ವಿಚಾರದಲ್ಲಿ ನೀವು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರೋಧ ಮಾಡಬಹುದು; ಆದರೆ ಸಭಾಪತಿಗಳ ರೂಲಿಂಗ್ ವಿರುದ್ಧ ಮಾತನಾಡುವುದು ಸರಿ ಎಂದು ನಿಮಗೆ ಅನಿಸುತ್ತದೆಯೇ? ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ನಿಷ್ಪಕ್ಷಪಾತವಾಗಿ, ನನ್ನ ವಿವೇಚನೆಗೆ ತಕ್ಕಂತೆ ಎಲ್ಲವನ್ನೂ ನೋಡಿದ್ದೇನೆ. ಯಾವಾಗ ಮಾನ್ಯ ಕಾನೂನು ಸಚಿವರು on record ಸದನದಲ್ಲಿ ಓದಿ ಹೇಳಿದರು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಚಿವರು ಏನು ಮಾತನಾಡಿದರೋ ಅದಕ್ಕೆ ನಾನು reply ಕೊಡಬೇಕು ಎಂದಿದ್ದೇನೆ.

**ಸಭಾಪತಿಯವರು:-** ನಿಮ್ಮ ಮರ್ಜಿ. ಮಾನ್ಯ ಹರಿಪ್ರಸಾದ್‌ರವರೇ ದಯಮಾಡಿ ಇದೆಲ್ಲಾ ಮಾಡುವುದು ಬೇಡ. ಸದನದ ಒಳಗೆ placards ಹಿಡಿದುಕೊಳ್ಳುವುದು, ಧಿಕ್ಕಾರ ಕೂಗುವುದು ಮಾಡಿದರೆ ಸದನದ ಮರ್ಯಾದೆ ತೆಗೆದ ಹಾಗೆ ಆಗುತ್ತದೆ. ಇಂಥದ್ದು ಮಾಡಬಾರದು ಎಂದು ಪದೇ ಪದೇ ಹೇಳಿದ್ದೇನೆ. ಸದನದ ಗೌರವ ಕಾಪಾಡಿ.

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಗಳೆ, ಸದನದ ಗೌರವವನ್ನು ಉಳಿಸಬೇಕೆಂಬುದೇ ನಮ್ಮ ಭಾವನೆ. PCR ಹಾಕಿರುವ ದೂರದಾರ, ಸರ್ಕಾರ ಯಾವರೀತಿ ಕ್ರಮ ಕೈಗೊಳ್ಳಬೇಕಾಗಿತ್ತೋ ಆ ಕ್ರಮಗಳನ್ನು ಸರಿಯಾಗಿ ತೆಗೆದುಕೊಂಡಿದ್ದರೆ PCR ಹಾಕುವ ಪ್ರಮಯವೇ ಬರುತ್ತಿರಲಿಲ್ಲ.

**ಸಭಾಪತಿಯವರು**:- ಈ ಕುರಿತು ಈಗಾಗಲೇ ತೀರ್ಮಾನ ವಾಗಿದೆ.

**ಶ್ರೀ ಪಿ.ಆರ್.ರಮೇಶ್**:- ಸರ್ಕಾರದವರು ಪ್ರಭಾವಿ ರಾಜಕೀಯ ವ್ಯಕ್ತಿಯನ್ನು ಉಳಿಸಬೇಕು ಎಂದು ಒಂದು ದೂರು ತೆಗೆದುಕೊಂಡು FIR ಹಾಕದೇ ಇರುವುದರಿಂದ ಒಬ್ಬ ಬಡ ದೂರುದಾರ ಇವತ್ತು ಕೋರ್ಟ್‌ಗೆ ಹೋಗಿದ್ದರ ಆಧಾರದ ಮೇಲೆ ನ್ಯಾಯಾಲಯದಿಂದ FIR ಹಾಕಲು ಆದೇಶ ಬಂದಿದೆ. ಆದೇಶವನ್ನು ಪಾಲಿಸಬೇಕು ಎನ್ನುವುದೇ ನಮ್ಮ ಉದ್ದೇಶವಾಗಿದೆ. **(ಗೊಂದಲ)**

**ಸಭಾಪತಿಯವರು:-** ಅದು ನಮಗೆ ಸಂಬಂಧಪಟ್ಟಿದಲ್ಲ; ಅದು ನಮಗೆ ಬರುವುದಿಲ್ಲ. ನಾನು ನಿಮಗೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿಲ್ಲ.

**ಶ್ರೀ ವಿ.ಸೋಮಣ್ಣ**:- ಮಾನ್ಯ ಸಭಾಪತಿಗಳೆ, ಮಾನ್ಯ ಎಂ. ನಾರಾಯಣಸ್ವಾಮಿಯವರು ವಿರೋಧ ಪಕ್ಷದ ಮುಖ್ಯ ಸಚೇತಕರೂ ಆಗಿದ್ದಾರೆ. ಅವರು ಒಂದು ಮಾತನ್ನು ಹೇಳಿದರು. ನಮ್ಮನ್ನು ಕರೆದು ಮಾತನಾಡಬಹುದಾಗಿತ್ತು ಎಂದು ಹೇಳಿದರು. ತಮಗೆ ಸಾಕಷ್ಟು ಅನುಭವ ಇದೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾವನೆ ವ್ಯಕ್ತಪಡಿಸಿರುವುದರಿಂದ, ಕಾನೂನು ಮತ್ತು ಸಂಸದೀಯ ಸಚಿವರನ್ನು ಎಲ್ಲವನ್ನೂ ಎಳೆಎಳೆಯಾಗಿ ಹೇಳಿರುವುದರಿಂದ ಮತ್ತೆ ಅದನ್ನು ಚರ್ಚೆ ಮಾಡುವುದು ಬೇಡ. ನಾನು ತಮಗೆ ವಿನಂತಿ ಮಾಡುತ್ತೇನೆ. ಯಾರಿಗೂ ಯಾವುದೂ ಶಾಶ್ವತ ಅಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಅನುಭವಿ ಸದಸ್ಯರುಗಳನ್ನು ನಾವು ಹತ್ತಿರದಿಂದಲೂ, ದೂರದಿಂದಲೂ ನೋಡಿದ್ದೇವೆ. ಕೆಲವರು ಅವರವರ ಸ್ಥಾನದಿಂದ ಇಳಿದರೂ ಕೂಡ ಆ ಗಾಂಭೀರ್ಯತೆ-ಗೌರವ ಉಳಿಸಿಕೊಂಡಿರುತ್ತಾರೆ. ನಾನೂ ಕೂಡ 35 ವರ್ಷದಿಂದ ನೋಡಿಕೊಂಡು ಬಂದಿದ್ದೇನೆ. ಮಾನ್ಯ ಸಭಾಪತಿಗಳೇ, ತಾವು ಮಾನ್ಯ ಎಂ. ನಾರಾಯಣ ಸ್ವಾಮಿಯವರನ್ನು ಕರೆಸಿ ಮಾತನಾಡಬೇಕಿತ್ತು ಎಂದು ಅವರು ಹೇಳುತ್ತಿದ್ದಾರೆ. ಅವರಿಗೆ ಅಷ್ಟೊಂದು ತಮ್ಮ ಹತ್ತಿರ ಮಾತನಾಡಲೇಬೇಕೆಂದರೆ 5 ನಿಮಿಷ ಸದನವನ್ನು ಮುಂದೂಡಿ, ಈ ವಿಚಾರವನ್ನು ಮುಕ್ತಾಯಗೊಳಿಸಬೇಕು.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸೋಮಣ್ಣನವರು ಒಳ್ಳೆಯ ವಿಚಾರ ಹೇಳಿದ್ದಾರೆ. 5-10 ನಿಮಿಷ ಸದನವನ್ನು ಮುಂದೂಡಬಹುದು.

**ಸಭಾಪತಿಯವರು:-** ನನ್ನ ಕಡೆ ಮಾನ್ಯ ಎಂ. ನಾರಾಯಣಸ್ವಾಮಿಯವರು ಬಂದು ಇದನ್ನು ಕೊಟ್ಟಾಗ, ನಾನು ಓದಿದೆ. ಈ ಹಿನ್ನೆಲೆಯಲ್ಲಿ ನಾನು ನಿಯಮಗಳ ಪುಸ್ತಕವನ್ನು ತೆಗೆದು ನೋಡಿದೆ. ಕೋರ್ಟ್‌ನಲ್ಲಿ ಇರುವ ವಿಷಯವನ್ನು ಇಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ ಎಂದು ತಿಳಿದುಕೊಂಡೆ. ಆದರೆ, ನಮ್ಮ ಕಡೆ authentic record ಇರುವುದಿಲ್ಲ. ಸದನದಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಕಾನೂನಾತ್ಮವಾಗಿ ಇರುವಂತಹ ವಿಷಯವನ್ನು ಓದಿ ಹೇಳಿದರು. ಕೋರ್ಟ್‌ನಲ್ಲಿ ಮ್ಯಾಟರ್ ಇದ್ದಾಗ ಸದನದಲ್ಲಿ ಆ ವಿಷಯ ಮಾತನಾಡುವುದಕ್ಕೆ ಬರುವುದಿಲ್ಲ ಎನ್ನುವುದು ಕೌಲ್ ಅಂಡ್ ಶಕ್ದರ್‌ರವರ Practice and Procedure of Parliament ಪುಸ್ತಕದಲ್ಲೂ ಇದೆ. ನಮ್ಮ ನಿಯಮಾವಳಿಗಳಲ್ಲೂ ಇದೆ. ಆದರೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮೇಲೆ ನಾನು ನನ್ನ ತೀರ್ಮಾನವನ್ನು ಹೇಳಿದ್ದೇನೆ. ನನ್ನ ತೀರ್ಮಾನದ ವಿರುದ್ಧ ಇವರು ಮತ್ತೆ ಇಲ್ಲಿ ಧರಣಿ ಮಾಡುತ್ತೇನೆಂದರೆ ಸರಿಯಲ್ಲ.

(ಮುಂದು)

(1108) 15-12-2021 3.20 DS-VK

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ನಿಂತು ಮಾತನಾಡುವುದು ಯಾವುದು ರೆಕಾರ್ಡ್‌ಗೆ ಹೋಗಬಾರದು.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, Practice and Procedure of Parliament ಏನು ಹೇಳುತ್ತದೆಂದರೆ, *"….The Speaker's rulings, as already stated, cannot be questioned except on a substantive motion. A member who protests against the ruling of the Speaker commits contempt of the House and the Speaker…."* ಪ್ರಶ್ನೆ ಮಾಡುವಂತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸದನ ಆರ್ಡರ್ ನಲ್ಲಿ ಇಲ್ಲ ಆದ್ದರಿಂದ ಹತ್ತು ನಿಮಿಷ ಸದನವನ್ನು ಮುಂದೂಡಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವೆಲ್ಲರೂ ತಿಳುವಳಿಕೆಯುಳ್ಳವರಾಗಿದ್ದೀರಿ. ನಾನು ಎಲ್ಲಾ ವಿಚಾರ ಮಾಡಿ ತೀರ್ಮಾನವನ್ನು ಕೊಟ್ಟಿದ್ದೇನೆ. ನನ್ನ ತೀರ್ಮಾನದ ವಿರುದ್ಧ ನಡೆದುಕೊಳ್ಳುವುದು ಸರಿಯಲ್ಲ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಮ್ಮ ವಿರುದ್ಧ ಅಲ್ಲ.

**Mr. CHAIRMAN:-** Whether it is right or wrong, ಒಂದು ಸಲ ತೀರ್ಮಾನವನ್ನು ಕೊಟ್ಟಿದ್ದೇವೆ. ತೀರ್ಮಾನ ಕೊಟ್ಟಾದ ಮೇಲೆ…….

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಮ್ಮ ವಿರುದ್ಧ ಅವರು ಬಾವಿಗೆ ಇಳಿದಿಲ್ಲ.

**ಸಭಾಪತಿಯವರು:-** ತಾವು ಪದ್ಧತಿ ಏನಿದೆ ಎಂಬುದನ್ನು ಹೇಳಿ.

**ಡಾ:ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರೇ ಅವರ ಜೊತೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಇದ್ದಾಗ ಇದನ್ನು ಯಾವುತ್ತು ಎತ್ತಲಿಲ್ಲ.

(ಗೊಂದಲ)

**ಸಭಾಪತಿಯವರು:-** ಬಾವಿಯಲ್ಲಿ ನಿಂತು ಮಾತನಾಡುವುದು ಯಾವುದು ಕಡತಕ್ಕೆ ಹೋಗಬಾರದು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, Practice and Procedure of Parliament ನಲ್ಲಿ ಇದೆ. *"….The Speaker's rulings, as already stated, cannot be questioned except on a substantive motion. A member who protests against the ruling of the Speaker*

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

*commits contempt of the House and the Speaker...."* ಇದು ಸಭಾಪತಿಯವರ ಆದೇಶವನ್ನು contempt ಮಾಡಿದ ಹಾಗೆ ಆಗುತ್ತದೆ ಎಂದು ಈ ರೂಲಿಂಗ್‌ನಲ್ಲಿದೆ. ಸದನ ಸರಿಯಾಗಿ ನಡೆಯಬಾರದೆನ್ನುವ ಉದ್ದೇಶ ಅವರಿಗಿದ್ದರೆ ಅವರು ಧರಣಿ ಮಾಡಲಿ. ಇದು ನಿಮ್ಮ ಆದೇಶದ ವಿರುದ್ಧವಾಗಿದೆ. ಹಾಗಾಗಿ ಮಾನ್ಯ ಸದಸ್ಯರುಗಳು ಸದನದ ಬಾವಿಯಿಂದ ಹೊರಗಡೆ ಬರಬೇಕು.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಈ ರೀತಿ ಮಾಡಿದರೆ ಮುಂದಿನ ಕ್ರಮ ಏನು ಎಂಬುದನ್ನು ನೀವೇ ಹೇಳಿ. ನೀವು ಅಲ್ಲಿಗೆ ಹೋದರೆ ನಾನು ಹೇಳಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಪೀಠದ ವಿರುದ್ಧ ಇಲ್ಲ, ಪೀಠದ ಪರವಾಗಿಯೇ ಇದ್ದೇವೆ.

**ಸಭಾಪತಿಯವರು:-** ಈ ರೀತಿ ಮಾಡಿದರೆ ನಾನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ನೋಡಿ.

**ಶ್ರೀ ಎಸ್.ಆರ್.ಪಾಟೀಲ್:-** ಈ ಬಗ್ಗೆ ತಮ್ಮ ಕಚೇರಿಯಲ್ಲಿ ಸಭೆಯನ್ನು ಕರೆಯಿರಿ, ಮಾತನಾಡೋಣ.

**ಸಭಾಪತಿಯವರು:-** ನೀವು ಇಷ್ಟೆಲ್ಲಾ ಮಾಡಿದ್ದೀರಿ, ನೀವು ಹೇಳಿದ ಹಾಗೆ ನಾನು ಕೇಳಬೇಕೇ, ಎಲ್ಲದ್ದಕ್ಕೂ ಒಂದು ಮಿತಿ ಇರಬೇಕು. ಮಾನ್ಯ ಯು.ಬಿ.ವೆಂಕಟೇಶ್‌ರವರೇ, ನಿಮ್ಮಂಥವರು ಹೀಗೆ ಮಾಡಿದರೆ ಹೇಗೆ? ಸ್ವಲ್ಪವಾದರೂ ಘನತೆ, ಗೌರವವಿರಬೇಕು. ನೀವು ಹೇಳಿದ ಹಾಗೆ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎನ್.ರವಿಕುಮಾರ್:-** ಈ ರೀತಿ ಮಾಡುವುದು ಎಲ್ಲರ ಸಮಯವನ್ನು ಹಾಳು ಮಾಡಿದಂತಾಗುತ್ತದೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರ. ಈ ಸಂಬಂಧವಾಗಿ ಈಗಾಗಲೇ ತಾವು ರೂಲಿಂಗ್ ಕೊಟ್ಟಿದ್ದೀರಿ. ಆ ರೂಲಿಂಗ್‌ಗೆ ನಾವೆಲ್ಲರೂ ಬದ್ಧರಾಗಿದ್ದೇವೆ. ಇದು ಸರ್ಕಾರದಲ್ಲೇ ಒಬ್ಬ ಸಚಿವರ ಮೇಲೆ ಇರತಕ್ಕಂಥ ಆರೋಪವಾಗಿರುವುದರಿಂದ, ಇದು ಸರ್ಕಾರದ ನೈತಿಕ ಪ್ರಶ್ನೆಯಾಗಿರುವುದರಿಂದ ತಮ್ಮ ರೂಲಿಂಗ್‌ನ್ನು ಪುನರ್ ಪರಿಶೀಲನೆ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಡಾ: ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಇದು ಸದನದ ಗೌರವವಲ್ಲ. ತಾವು ತೀರ್ಪನ್ನು ನೀಡಿದ ನಂತರ ಹೀಗೆ ಮಾಡಬಾರದು. ತಾವು ಈ ವಿಷಯದ ಮೇಲೆ ರೂಲಿಂಗ್ ಕೊಟ್ಟ ನಂತರ ಯಾರೂ ಸಹ ಈ ಬಗ್ಗೆ ಮಾತನಾಡುವುದಕ್ಕೆ ಅವಕಾಶವಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದೊಂದು ಗಂಭೀರವಾದ ವಿಚಾರವಾಗಿರುವುದರಿಂದ ಈಗಾಗಲೇ ವಿರೋಧ ಪಕ್ಷದ ನಾಯಕರುಗಳೆಲ್ಲರೂ ಹೇಳುವುದೇನೆಂದರೆ, ತಾವು ಪೀಠದಿಂದ ಕೊಟ್ಟಂತಹ ರೂಲಿಂಗ್‌ನ್ನು ಪುನರ್ ಪರಿಶೀಲನೆ ಮಾಡಬೇಕು, ಚರ್ಚೆಗೆ ಅವಕಾಶ ಕೊಡಬೇಕೆಂಬ ಮನವಿಯನ್ನು ಸದಸ್ಯರು ಬಾವಿಗೆ ಇಳಿದು ಮಾಡುತ್ತಿದ್ದಾರೆ. ಬೆಳಗಾವಿ ಅಧಿವೇಶನ ಸುಸೂತ್ರವಾಗಿ ನಡೆಯಬೇಕು. ಅದಕ್ಕೆ ನಮ್ಮೆಲ್ಲರ ಸಹಮತವಿದೆ. ಈ ಸದನಕ್ಕೆ ಯಾವುದೇ ರೀತಿಯ ಅಡ್ಡಿಯಾಗಬಾರದು. ಆದರೆ ಪ್ರಸ್ತಾಪ ಮಾಡಿರುವಂಥ ವಿಚಾರ ಬಹಳ ಪ್ರಮುಖವಾಗಿರುವುದರಿಂದ ದಯಮಾಡಿ ನಾನು ತಮ್ಮಲ್ಲಿ ಒಂದು ಮನವಿಯನ್ನು ಮಾಡುತ್ತೇನೆ. ಸದನವನ್ನು ೧೦ ನಿಮಿಷಗಳ ಕಾಲ ಮುಂದೂಡಿ ತಮ್ಮ ಕಚೇರಿಯಲ್ಲಿ ನಮ್ಮ ಸಭಾನಾಯಕರು, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ನಾಯಕರುಗಳನ್ನು ಕರೆದು ಮಾತನಾಡಿ, ಈ ಎಲ್ಲಾ ಚರ್ಚೆಗೆ ಅವಕಾಶ ಮಾಡಿಕೊಟ್ಟು ಇದಕ್ಕೆ ಒಂದು ಇತಿಶ್ರೀ ಹಾಡಬೇಕೆಂದು ನಾನು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇಲ್ಲಿಯವರೆಗೆ ನಡೆದಿರುವಂಥ ಎಲ್ಲಾ ಸತ್ಸಂಪ್ರದಾಯವನ್ನು ನಾವೆಲ್ಲರೂ ಸಹ ಗಮನಿಸಿದ್ದೇವೆ. ಇತಿಹಾಸ ಉದ್ದಕ್ಕೂ ಸಹ ವಿರೋಧ ಪಕ್ಷದ ನಾಯಕರಿದ್ದಾರೆ. ಒಂದು ಸಾರಿ ಪೀಠದಿಂದ ತೀರ್ಪನ್ನು ಕೊಟ್ಟ ನಂತರ ಅದನ್ನು ಹಾಗೆ ಪ್ರಶ್ನಿಸಿರುವಂಥ ಉದಾಹರಣೆಗಳೇ ಇಲ್ಲ. ಈ ಹಿನ್ನೆಲೆಯಲ್ಲಿ ನಾವು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಾವು ನೀಡಿದ ಆದೇಶವನ್ನು ಅನುಷ್ಠಾನ ಮಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಇಲ್ಲದೇ ಇದ್ದರೆ ಅದು ಅಪರಾಧವಾಗುತ್ತದೆ. ಇದನ್ನು ತಮ್ಮ ಗಮನಕ್ಕೆ ತರುತ್ತೇನೆ. ತಾವು ನಿರ್ಧಾರ ಮಾಡಿ.

**ಸಭಾಪತಿಯವರು:-** ತಾವು ನಿಯಮ ೩೨೬ ಮತ್ತು ೩೨೭ನ್ನು ಓದಿ ಗೊತ್ತಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಪೀಠಕ್ಕೆ ನಮ್ಮ ಪಕ್ಷದವರು ಕೊಡುವಷ್ಟು ಗೌರವವನ್ನು ಯಾರೂ ಸಹ ಕೊಡುವುದಿಲ್ಲ. ನಮಗೆ ತಮ್ಮ ಬಗ್ಗೆಯೂ ಸಹ ಬಹಳಷ್ಟು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಗೌರವವಿದೆ. ಇದು ಪೀಠದ ನಿರ್ಣಯದ ವಿರುದ್ಧವಾಗಿ ಬಾವಿಗೆ ಇಳಿದಿದ್ದೇವೆಂದು ತಾವು ಭಾವಿಸಬಾರದು. ಇದು ಸರ್ಕಾರದಲ್ಲಿರುವಂಥ ಒಬ್ಬ ಸಚಿವರು.....

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇದು ಎಂಥ ನ್ಯಾಯ? ಪೀಠ ಹೇಳಿದ್ದಕ್ಕೆ ನಾವು ಬಾವಿಗಿಳಿದಿಲ್ಲವೆಂದರೆ, ಪೀಠದ ಆದೇಶಗಳನ್ನು ಪಾಲನೆ ಮಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿ ಮಾತನಾಡಿದರೆ ಇದು ಯಾವ ನ್ಯಾಯ? ಬಾವಿಗಿಳಿದು ನಾವು ಬಾವಿಗಿಳಿದಿದ್ದಕ್ಕೆ ಈ ರೀತಿ ಭಾವಿಸಬಾರದು ಎಂದರೆ ಏನರ್ಥ? ನಿಮ್ಮ ಹಕ್ಕನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ಪೀಠದ ಆದೇಶವನ್ನು ಪಾಲನೆ ಮಾಡುವುದು ನಮ್ಮ ಜವಾಬ್ದಾರಿ ತಾನೆ. ಅವರುಗಳ ಹಕ್ಕನ್ನು ಯಾರೂ ಸಹ ಪ್ರಶ್ನೆ ಮಾಡುತ್ತಿಲ್ಲ. ಆದರೆ ನಿಮ್ಮ ಆದೇಶವನ್ನು ಪಾಲನೆ ಮಾಡುವುದು ಅವರ ಜವಾಬ್ದಾರಿ ತಾನೆ. ಇದು ಯಾವ ರೀತಿಯ ನ್ಯಾಯ?

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ಬಾರಿ ಆದೇಶವನ್ನು ಕೊಟ್ಟ ಮೇಲೆ ಬಾವಿಗೆ ಬರುವುದೆಂದರೆ ಅದು ಪೀಠಕ್ಕೆ ಕೊಟ್ಟ ಅಗೌರವವಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅವರು ಹಿರಿಯರು, ಇದನ್ನು ಸಮರ್ಥನೆ ಮಾಡುವುದಕ್ಕಾಗುವುದಿಲ್ಲ, ಇದು ಸರಿಯಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ನಾನು ಮಾತನಾಡಲೋ ಬೇಡವೋ ಹೇಳಿ.

**ಸಭಾಪತಿಯವರು:-** ನಾನೇನು ಮಾಡಲಿ ಹೇಳಿ. ನಿಮಗೆ ಮಾತನಾಡಿ ಎಂದು ಹೇಳಿಲ್ಲವೇ? ಅವರು ನೀವು ಎಲ್ಲರೂ ಮಾತನಾಡುತ್ತೀರಿ.

(ಮುಂದು)

**1109/15-12-2021/3-30/bkp-vk**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಮ್ಮ ಪೀಠಕ್ಕೆ ಅಪಾರವಾದ ಗೌರವ ಇದೆ. ನಿಮ್ಮ ಪೀಠದ ನಿರ್ಣಯದ ವಿರುದ್ಧ ನಮ್ಮ ಸದಸ್ಯರು ಬಾವಿಗೆ ಇಳಿದಿದ್ದಾರೆನ್ನುವ ತಪ್ಪು ಸಂದೇಶ ಹೊರಗಡೆ ಹೋಗಬಾರದು. ಅವರದ್ದು ಏನಿದೆ, ಎಂದರೆ ಈ ಸರ್ಕಾರದಲ್ಲಿ ಇರತಕ್ಕಂತಹ ಒಬ್ಬ ಮಂತ್ರಿಗಳ ಮೇಲೆ ನ್ಯಾಯಾಲಯ ಇಂತಿಂತಹ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

offence ಕೆಳಗೆ ಇವರಿಗೆ ಸಮನ್ಸ್ ನೀಡಿ ಎಂದಾಗ ಇಲ್ಲಿ ನೈತಿಕ ಜವಾಬ್ದಾರಿಯ ಪ್ರಶ್ನೆ ಬರುತ್ತದೆ. ಹಿಂದೆ ಲಾಲ್ ಬಹದ್ದೂರ್ ಶಾಸ್ತ್ರಿಯವರು ರೈಲ್ವೆ ಮಂತ್ರಿಗಳು ಆಗಿದ್ದಾಗ ರೈಲು ಅಪಘಾತವಾದಾಗ ತತಕ್ಷಣ ಅವರು owning to the moral responsibility ಎಂದು ಹೇಳಿ ನೈತಿಕ ಜವಾಬ್ದಾರಿ ಹೊತ್ತು ತಮ್ಮ ರೈಲ್ವೆ ಸಚಿವ ಸ್ಥಾನಕ್ಕೆ ರಾಜಿನಾಮೆ ಕೊಟ್ಟಂತಹ ಉದಾಹರಣೆ ಇದೆ. ಇಂತಹ ನೂರಾರು ಉದಾಹರಣೆಗಳು ಇರುವಾಗ ಉನ್ನತ ಸಂಪ್ರದಾಯಗಳು ಇರುವಾಗ ಅದೇ ಉನ್ನತ ಸಂಪ್ರದಾಯಗಳನ್ನು ನಾವು ಪಾಲನೆ ಮಾಡಿಕೊಂಡು ಬಂದಿರುತ್ತೇವೆ. ಇವರು ಏತಕ್ಕೆ ಪಾಲನೆ ಮಾಡಬಾರದು. ನನ್ನ ಮೇಲೆ ಅಪಾದನೆ ಬಂದಾಗ "Caesar's *Wife Must Be Above Suspicion"* ಎಂದು ನಾವು ಬಹಳಷ್ಟು ಮಾತನಾಡುತ್ತೇವೆ. ಅಂತಹ ಸಂದರ್ಭದಲ್ಲಿ ಅವರ ಮೇಲೆ ಗುರುತರವಾದ ಅಪಾದನೆ *tom, dick, harry* ಮಾಡಿದ್ದಲ್ಲ. *Metropolitan Magistrate* ಮಾಡಿದಂತಹದ್ದು. ಇವರ ಮೇಲೆ *cognizance* ತೆಗೆದುಕೊಳ್ಳುತ್ತೇನೆ, *issue summons to these five accused* ಎಂದು ಹೇಳುತ್ತಾರೆ. *Five accuse* ನಲ್ಲಿ ಒಬ್ಬರು ಮಂತ್ರಿ ಇದ್ದಾರೆ, ಒಬ್ಬರು ಹಾಲಿ ಶಾಸಕರು ಇದ್ದಾರೆ. ಇಂತಹ ಸಂದರ್ಭದಲ್ಲಿ *owning to the moral responsibility they should tender their resignation.* ಅವರು ರಾಜೀನಾಮೆ ಕೊಡಬೇಕಲ್ಲವೇ? ಉನ್ನತ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪೀಠದ ಆದೇಶವನ್ನು ಅನುಷ್ಠಾನ ಮಾಡುವುದಕ್ಕೆ ವಿರೋಧ ಪಕ್ಷದವರು ಸಿದ್ಧರಿಲ್ಲ. ಈ ರೀತಿಯಲ್ಲಿ ಸಲಹೆ ಕೊಡುತ್ತಿದ್ದರೆ ಯಾರು ಕೇಳಬೇಕು? ಮಾನ್ಯ ಸಭಾಪತಿಯವರೆ, ಅವರು ಸಲಹೆಗಳನ್ನು ಕೊಡಲಿ. ಆ ಸಲಹೆಗಳನ್ನು ಪಾಲನೆ ಮಾಡುವವರು ಯಾರು? ಸಭಾಪತಿಯವರ ಪೀಠದ ಆದೇಶವನ್ನು ಪಾಲನೆ ಮಾಡಬೇಕಾದುದು ಅವರ ಜವಾಬ್ದಾರಿ ಅಲ್ಲವೇ? ಅದನ್ನು ಪಾಲನೆ ಮಾಡದೇ ಇರುವುದು ಯಾವ ನ್ಯಾಯ, ಮರು ಪರಿಶೀಲನೆ ಮಾಡಬೇಕೆಂದು ಸಲಹೆ ಕೊಡುತ್ತಿರುವುದು ಯಾವ ನ್ಯಾಯ. ಮರು ಪರಿಶೀಲನೆಗೆ ಪ್ರಾವಿಷನ್ ಇದೆಯೇ?

**(ಗೊಂದಲ)**

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಈ ರೂಲ್ಸ್ ಬುಕ್ ಏತಕ್ಕೆ ಇರಬೇಕು? ಏಕೆ ಪ್ರಿಂಟ್ ಮಾಡಿಕೊಟ್ಟಿದ್ದಾರೆ? ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು. ನಮ್ಮ ಅಮೂಲ್ಯ ಸಮಯವನ್ನು ಹಾಳು ಮಾಡಲಿಕ್ಕೆ ನಮ್ಮ ಹಕ್ಕನ್ನು ಇವರು ಕಸಿದುಕೊಳ್ಳುತ್ತಿದ್ದಾರೆ.

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ತಮ್ಮ ಆದೇಶವನ್ನು ಮೊದಲು ಪಾಲನೆ ಮಾಡಲಿ. ಆನಂತರ ಮನವಿ ಮಾಡಲಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಬೆಳಗಾವಿ ಅಧಿವೇಶನವನ್ನು ಸುಸೂತ್ರವಾಗಿ ನಡೆಯಲಿಕ್ಕೆ ಬಿಡಬಾರದು ಎನ್ನುವ ಉದ್ದೇಶ ತಮಗೆ ಇದೆ ಎಂದು ನನಗೆ ಅನಿಸುತ್ತದೆ.

**ಸಭಾಪತಿಯವರು:-** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ನನಗೆ ಮಾತನಾಡಲಿಕ್ಕೆ ಬಿಡಿ.

**(ಗೊಂದಲ)**

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 326 ಮತ್ತು 327ರಡಿಯಲ್ಲಿ ಕ್ರಮ ಕೈಗೊಳ್ಳಬೇಕು. ತಮ್ಮನ್ನು ಪ್ರಶ್ನೆ ಮಾಡಿದರೆ, ತಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡುವುದು ಸರಿಯಲ್ಲ.

**ಸಭಾಪತಿಯವರು:-** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ನನಗೆ ಮಾತನಾಡಲಿಕ್ಕೆ ಬಿಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದನ್ನು ಮುಂದುವರಿಸಲಿಕ್ಕೆ ನೀವು ಬಿಡುತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿಯವರು ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ....

**ಸಭಾಪತಿಯವರು:-** ಶ್ರೀಯುತ ಪ್ರತಾಪಚಂದ್ರ ಶೆಟ್ಟಿಯವರೇ, ನಿಮಗೆ ಮಾತನಾಡಲಿಕ್ಕೆ ಯಾರು ಅವಕಾಶವನ್ನು ಕೊಟ್ಟರು? ದಯವಿಟ್ಟು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಇದರಲ್ಲಿ ಕೊಡುವುದು ಏನಿದೆ? ಕೇಳುವುದು ಅಷ್ಟೇ. ಕೊಡಲಿಕ್ಕೆ ಏನು, ಕೇಳುವುದಷ್ಟೆ. ನೀವು ಇದೇ ರೀತಿಯಲ್ಲಿ ಒಂದು ಸಾರಿಯಲ್ಲ, ಸಾವಿರ ಸಾರಿ ಮಾಡಿದ್ದೀರಿ. ಸಭಾಪತಿಯವರಿಗೆ ಎಷ್ಟು ಗೌರವ ಕೊಡಬೇಕು, ಕೊಡಬಾರದು ಎನ್ನುವುದನ್ನು ನೀವೇ ನಮಗೆ ಕಲಿಸಿರುವುದು. ನಿಮಗೆ ಯಾವ *morality* ಇದೆ. ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಯಾರ ಮೇಲೆ ಆದರೂ ಈ ರೀತಿಯಲ್ಲಿ *criminal offence* ಬಂದಾಗ ರಾಜಿನಾಮೆಯನ್ನು ಪಡೆಯದೇ ಇರತಕ್ಕಂತಹ ಒಂದು ಸಂದರ್ಭವನ್ನು ತಾವು ಹೇಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಪಡೆದುದ್ದನ್ನು ನೀವೇ ಹೇಳಿ.

**(ಗೊಂದಲ)**

**ಸಭಾಪತಿಯವರು:-** ನೋಡಿ, ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದರೆ ಹೇಗೆ?

**ಸಭಾಪತಿಯವರು:-** ಪಾಟೀಲ್‌ರವರೆ, ಈ ರೀತಿಯಲ್ಲಿ ಮಾತನಾಡಿದರೆ ಹೇಗೆ?

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೆ, ಈ ರೀತಿಯಲ್ಲಿ ಅವಕಾಶ ಕೊಟ್ಟಿದ್ದಕ್ಕೆ ಈ ಪರಿಸ್ಥಿತಿ ಬಂದಿದೆ.

**ಶ್ರೀಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದೆರಡು ನಿಮಿಷದಲ್ಲಿ ಮುಗಿಸುತ್ತೇನೆ.

**ಸಭಾಪತಿಯವರು:-** ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ರೀತಿಯಾದಂತಹ ನೈತಿಕ ಹೊಣೆ ಹೊತ್ತು ರಾಜಿನಾಮೆ ಕೊಡಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ನನ್ನದೇ ಉದಾಹರಣೆಯನ್ನು ಹೇಳಲಿಕ್ಕೆ ಬಯಸುತ್ತೇನೆ. ನಾನು ನಮ್ಮ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಾಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೆ. ನಮ್ಮ ಪಕ್ಷದ ವರಿಷ್ಠರು ಪಾಟೀಲ್‌ರವರೆ,

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ನಿಮ್ಮ ಉತ್ತರ ಕರ್ನಾಟಕದಲ್ಲಿ ಹೆಚ್ಚು ಸ್ಥಾನಗಳನ್ನು ತಂದುಕೊಡಬೇಕೆನ್ನುವ ಮಾತನ್ನು ಪದೇ ಪದೇ ಹೇಳುತ್ತಿದ್ದರು. ಆಗ ನಾನು ಆಯಿತು, ನಾನು ನನ್ನ ಶಕ್ತಿ ಮೀರಿ ಪ್ರಯತ್ನ ಮಾಡುತ್ತೇನೆಂದು ಹೇಳಿದೆ. ನನಗೆ ಉತ್ತರ ಕರ್ನಾಟಕದಲ್ಲಿ ಎರಡು ಬಾರಿ ಅದರಲ್ಲೂ 2018ರ ಚುನಾವಣೆಯಲ್ಲಿ ನಿರೀಕ್ಷಿತ ಸ್ಥಾನಗಳು ಬರಲಿಲ್ಲ. ನನಗೆ ಯಾರು ಹೇಳಲಿಲ್ಲ. Owning to the moral responsibility I tendered my resignation to our Madam Soniajiಗೆ ಕಳುಹಿಸಿ ಬಿಟ್ಟೆ. ರಾಜೀನಾಮೆಯನ್ನು ಕೊಡು ಎಂದು ಯಾರು ಹೇಳಲಿಲ್ಲ. ಈ ರೀತಿಯಲ್ಲಿ ಸದನದಲ್ಲಿ ಚರ್ಚೆಯಾಗಲಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದಕ್ಕೂ ಇದಕ್ಕೂ ಅನ್ವಯಿಸಿದರೆ ಹೇಗೆ? ಇದು ಯಾವ ನ್ಯಾಯ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** "ಪ್ರಥಮ ಚುಂಬನಂ ದಂತ ಭಗ್ನಂ" ಎನ್ನುವಂತಾಯಿತು.

**ಸಭಾಪತಿಯವರು:-** ಅವರು ಮಾತನಾಡಲಿ, ಸಭಾನಾಯಕರೆ, ತಾವು ಕುಳಿತುಕೊಳ್ಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್‌ರವರು ಸದನದ ಬಾವಿಯಿಂದ ಮಾತನಾಡಿದರು)**

**ಸಭಾಪತಿಯವರು:-** ಶ್ರೀಯುತ ಯು.ಬಿ. ವೆಂಕಟೇಶ್ ರವರೆ, ತಾವು ಈ ರೀತಿಯಲ್ಲಿ ಮಾತನಾಡಿದರೆ ಹೇಗೆ? ಇದೇ ರೀತಿ ಮುಂದುವರಿದರೆ ಹೊರಗಡೆ ಹಾಕುತ್ತೇವೆ. ಏನು ಹುಡುಗಾಟ ಮಾಡುತ್ತಿದ್ದೀರಾ? ನೀವು ಪದೇ ಪದೇ ಈ ರೀತಿ ಮಾಡುತ್ತಾ ಹೋದರೆ ಸದನವನ್ನು ಹೇಗೆ ನಡೆಸಬೇಕು?

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಭಾಪತಿಯವರೆ, ತಮ್ಮ ಪ್ರತಿ ಮಾತಿಗೂ ಸಹ ಅವರು ಉತ್ತರ ಕೊಡುತ್ತಾರೆ, ಇದು ಸಾಧ್ಯವಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಮ್ಮ ಪ್ರತಿ ಮಾತಿಗೂ ನಾವು ಗೌರವ ಕೊಡುತ್ತೇವೆ. ನಿಮ್ಮ ಮಾತಿಗೆ ತಲೆಬಾಗಿ ನಿಮ್ಮ ತೀರ್ಮಾನವನ್ನು ನಾವು ಒಪ್ಪುತ್ತೇವೆ. ಆದರೆ, ದಯಮಾಡಿ ನಮ್ಮ ಒಂದು ಮನವಿ ಏನಿದೆ, ಎಲ್ಲವನ್ನು ನಾವು ಪುನರಾವರ್ತನೆ ಮಾಡಲಿಕ್ಕೆ ಹೋಗುವುದಿಲ್ಲ. ದಯಮಾಡಿ ಈ ವಿಚಾರವನ್ನು ತಮ್ಮ ಪೀಠದಿಂದ ಮರು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಶೀಲನೆ ಮಾಡಬೇಕೆಂದು ಮನವಿ ಮಾಡುವ ಹಕ್ಕು ನಮಗೆ ಇದೆ. ತಾವು ಮರು ಪರಿಶೀಲನೆ ಮಾಡಬೇಕು. ಅದಕ್ಕಿಂತ ಪೂರ್ವದಲ್ಲಿ 10 ನಿಮಿಷಗಳ ಕಾಲ ಈ ಸದನವನ್ನು ಮುಂದೂಡಿ ನಮ್ಮನ್ನು, ಸಭಾನಾಯಕರನ್ನು, ಶ್ರೀಯುತ ಎಂ ನಾರಾಯಣ ಸ್ವಾಮಿಯವರನ್ನು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರನ್ನು ಹಾಗೂ ಇನ್ನಿತರ ಹಿರಿಯ ಸದಸ್ಯರನ್ನು ಕರೆದು ಚರ್ಚೆ ಮಾಡಿ ಇದನ್ನು ಇತ್ಯರ್ಥ ಮಾಡುವುದು ಒಳ್ಳೆಯದು.

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ದಯಮಾಡಿ ಕೇಳಿ, ನನಗೆ ಶ್ರೀಯುತ ಎಂ ನಾರಾಯಣ ಸ್ವಾಮಿಯವರು ಮತ್ತು ನೀವೆಲ್ಲರೂ ಸೇರಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟೆ. ನಂತರ ಸರ್ಕಾರ ಇದರ ಬಗ್ಗೆ ವಿವರಣೆಯನ್ನು ಕೊಟ್ಟಿದೆ. ತದನಂತರ ನಾನು ಎಲ್ಲವನ್ನು ಅಧ್ಯಯನ ಮಾಡಿ ಇದು ಪ್ರಸ್ತುತ ಕೋರ್ಟ್‌ನಲ್ಲಿದೆ ಎಂದು ನನಗೆ ಖಚಿತವಾಯಿತು. ಈ ಬಗ್ಗೆ ನಾನು ಒಂದು ರೂಲಿಂಗ್ ಕೊಟ್ಟಿದ್ದೇನೆ. ರೂಲಿಂಗ್ ಕೊಟ್ಟು ನಂತರ ನಾನು 42 ವರ್ಷಗಳಿಂದ ಈ ಸದನದಲ್ಲಿದ್ದೇನೆ. ಸಭಾಪತಿಯವರ ರೂಲಿಂಗ್ ವಿರುದ್ಧ ಇವತ್ತಿನವರೆಗೂ ಯಾರೊಬ್ಬರು ಸಹ ಹೋಗಿರುವುದನ್ನು ನಾನು ನೋಡಿಲ್ಲ. ಈ ವಿಚಾರವಾಗಿ ನಾನು ಇನ್ನು ಮುಂದೆ ಹೋಗಿ ಹೇಳುತ್ತೇನೆ.

ನಾನು ರೂಲಿಂಗ್ ಕೊಟ್ಟಿರುತ್ತೇನೆ. Whether it is right or wrong, ruling is ruling. ರೂಲಿಂಗ್ ಕೊಟ್ಟ ಮೇಲೆ ಇದರ ಮೇಲೆ ಚರ್ಚೆ ಮಾಡಬೇಕಾದರೆ, ಬೇರೆ ರೂಪದಲ್ಲಿ ಒಂದು ನೋಟೀಸ್ ಅನ್ನು ಕೊಡಿ. ನಾಳೆ ಈ ವಿಷಯ ಚರ್ಚೆಗೆ ಬಂದರೆ ಚರ್ಚೆ ಮಾಡಿ. ಈ ವಿಷಯದಲ್ಲಿ ನಾನು ಇದರಿಂದ ಹಿಂದೆ ಹೋಗಲಿಕ್ಕೆ ಸಾಧ್ಯವೇ ಇಲ್ಲ. ನಾನು ಯಾವುದೇ ರೀತಿಯಿಂದ ಅವಕಾಶ ಕೊಡುವುದಿಲ್ಲ. ನನ್ನ ತೀರ್ಮಾನ ಅಂತಿಮ ತೀರ್ಮಾನವಾಗಿರುತ್ತದೆ. ಅದರ ವಿರುದ್ಧ ಹೋದರೆ ನಾನೇನು ಮಾಡಲಿಕ್ಕೆ ಆಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, 10 ನಿಮಿಷಗಳ ಕಾಲ ಸದನವನ್ನು ಮುಂದೂಡಿ. ಕೆಲವೊಂದು ವಿಚಾರಗಳನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ತಮ್ಮ ಕೊಠಡಿಗೆ ನಾವುಗಳು ಬರುತ್ತೇವೆ. ನಾವೆಲ್ಲರೂ ಸೇರಿ ಚರ್ಚೆ ಮಾಡೋಣ.

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಮಾತನಾಡುತ್ತೀರಾ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ಕಡೆಯವರಿಗಿಂತ ನಿಮ್ಮ ಮೇಲೆ ನಮಗೆ ಹೆಚ್ಚು ಗೌರವ ಇದೆ. ಪೀಠದ ಬಗ್ಗೆ ಗೌರವ ಇದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ನೀವು ಈ ಬಗ್ಗೆ ಮರುಪರಿಶೀಲನೆ ಮಾಡಿ ಎಂದು ಹೇಳುತ್ತಿದ್ದೀರಿ. ನಾನು ವಿಚಾರ ಮಾಡುತ್ತೇನೆ. ಬಾವಿಯಿಂದ ಹೊರಗಡೆ ಬನ್ನಿ. ವಿಚಾರ ಮಾಡಿ ರೂಲಿಂಗ್ ಕೊಡುತ್ತೇನೆ. ಈಗ ಸದ್ಯ ಹೇಳುವುದಿಲ್ಲ. ನನಗೆ ಸಮಯ ಬೇಕು. ನಾನು ಈ ಬಗ್ಗೆ ವಿಚಾರ ಮಾಡಬೇಕಾಗುತ್ತದೆ ಹಾಗೂ ಚರ್ಚೆ ಮಾಡಬೇಕಾಗುತ್ತದೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಐದು ನಿಮಿಷ ಸದನವನ್ನು ಮುಂದೂಡಿ ಎಂದು ಹೇಳುತ್ತಿದ್ದಾರೆ. ಅದನ್ನು ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, 5 ನಿಮಿಷ ಸದನವನ್ನು ಮುಂದೂಡಿ. ಇದರ ಬಗ್ಗೆ ನಮ್ಮ ಮನವಿ ಇದೆ. ನೀವು ಹಾಗೆ adamant ಆಗಬಾರದು. ಹಿರಿಯ ಸಚಿವರಾದ ವಿ.ಸೋಮಣ್ಣನವರು ಸಹ ಹೇಳಿದರು. ನಾನು ಸಹ ಹೇಳುತ್ತೇನೆ. Hardly for five minutes or ten minutes you adjourn the House. ಇದನ್ನು ಇತ್ಯರ್ಥಗೊಳಿಸೋಣ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸದನವನ್ನು ಮುಂದೂಡುವ ಅವಶ್ಯಕತೆ ಇಲ್ಲ. ಅವರು ವಿನಾಕಾರಣ ಬಾವಿಗೆ ಬಂದಿದ್ದಾರೆ. ಸದನಕ್ಕೆ ತೊಂದರೆ ಮಾಡುತ್ತಿದ್ದಾರೆ. ಸದನವನ್ನು ಮುಂದೂಡಬಾರದು. ಉತ್ತರ ಕರ್ನಾಟಕದ ಸಮಸ್ಯೆಗಳಿವೆ. ಅದಕ್ಕೆ ಸಮಯವನ್ನು ಉಪಯೋಗ ಮಾಡಬೇಕಾಗಿದೆ.

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ತಮ್ಮ ರೂಲಿಂಗ್ ಅನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲವೆಂದು ತಾವು ಪುನರುಚ್ಚಾರ ಮಾಡಿದ್ದೀರಿ. ಈ ರೀತಿ ಮಾಡಿದರೆ ಪೀಠಕ್ಕೆ ಗೌರವ ಬರುವುದಿಲ್ಲ. ಇವರು ನಮ್ಮ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಇವರಿಗೆ ಯಾವ ಹಕ್ಕು ಇದೆ? ಉತ್ತರ ಕರ್ನಾಟಕದಲ್ಲಿ ಕೋವಿಡ್-19 ಸಮಯದಲ್ಲಿ, ಸುವರ್ಣ ಸೌಧದಲ್ಲಿ ನಾವು ಅಧಿವೇಶನ ಮಾಡುವಾಗ ವಿನಾಕಾರಣ ಈ ರೀತಿ ಕಾಲಹರಣ ಮಾಡಿದರೆ ಜನರು ಏನು ತಿಳಿದುಕೊಳ್ಳುತ್ತಾರೆ? ಇದು ಒಂದು ವಿಷಯ ನಿಯಮಾವಳಿಗಳಲ್ಲಿ ಅವಕಾಶ ಇಲ್ಲವೆಂದರೂ ಸಹ ತಾವು ಸಾಕಷ್ಟು ಅವರಿಗೆ ಅವಕಾಶ ಮಾಡಿಕೊಟ್ಟಿದ್ದರೂ ಇವರು ತಮ್ಮ ರೂಲಿಂಗ್ ವಿರುದ್ಧ ಹೋದರೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 326 ಮತ್ತು 327ರಡಿಯಲ್ಲಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಆದ್ದರಿಂದ ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, 5 ನಿಮಿಷ ಸಭೆಯನ್ನು ಮುಂದೂಡಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ವಿ.ಸೋಮಣ್ಣ(ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದು ಅತಿರೇಕವಾಯಿತು. ತಾವು ಈ ಬಗ್ಗೆ ಒಂದು ರೂಲಿಂಗ್ ಕೊಟ್ಟಾಗಿದೆ. ಅದು ಕೂಡ ಪೂರ್ಣವಾಗಿ ಮುಕ್ತಾಯವಾಗಿದೆ. ಆದರೂ ಸಹ ಎಲ್ಲೋ ಒಂದು ಕಡೆ ಉದ್ದೇಶಪೂರ್ವಕವಾಗಿ ಕಾನೂನಿನಲ್ಲಿ ಇಲ್ಲದೇ ಇರುವುದನ್ನು ಮತ್ತು ಸಭಾಪತಿಯವರ ರೂಲಿಂಗ್ ಅನ್ನು ಸಹ ದಿಕ್ಕರಿಸುತ್ತೇವೆಂದು ಹೇಳುತ್ತಿದ್ದಾರೆ. ನಾನು ಸಹ ಈ ಸದನದಲ್ಲಿ ಎರಡು ಬಾರಿ ಇದ್ದೆ. ದಯವಿಟ್ಟು ಇದು ಒಳ್ಳೆಯದಲ್ಲ. ಈ ಬಗ್ಗೆ ವಿರೋಧಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ. ಅವರು ಹಿರಿಯರಿದ್ದಾರೆ. ಸಭಾಪತಿಯವರು ಸಹ ಇದನ್ನು ತುಂಬಾ ತೀಕ್ಷ್ಣವಾಗಿ ತೆಗೆದುಕೊಂಡು ಇದರ ಬಗ್ಗೆ ಯಾವ ಯಾವ ರೀತಿ ಚರ್ಚೆಯಾಗಬೇಕಾಗಿದೆ. ಆ ರೀತಿ ಚರ್ಚೆಯಾಗಿದೆ. ಮತ್ತೆ ಪದೇ ಪದೇ ಅದನ್ನು ಮಾಡಿ. ಮುಂದಿನ ನಮ್ಮ ಕಾರ್ಯಕಲಾಪಗಳಿಗೆ ಅಡ್ಡಿ ಮಾಡುವುದು ಎಷ್ಟರಮಟ್ಟಿಗೆ ಸರಿ ಎನ್ನುವುದಕ್ಕೆ ಯೋಚನೆ ಮಾಡಬೇಕು. ತಾವು ಏನು ತೀರ್ಮಾನ ತೆಗೆದುಕೊಂಡಿದ್ದೀರಿ. ಅದಕ್ಕೆ binding ಆಗಬೇಕು.

(ಮುಂದು

(1110) 15.12.2021 03.40 ಎಸ್‌ವಿ-ಬಿಎನ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ.ಸೋಮಣ್ಣ (ಮುಂದು):-**

ತಾವು ನೀಡಿರುವ ತೀರ್ಮಾನಕ್ಕೆ ನಾವು ಬದ್ಧರಾಗಿದ್ದು, ಮತ್ತೊಮ್ಮೆ ತಾವು ವಿರೋಧ ಪಕ್ಷದವರಿಗೆ ಸ್ಪಷ್ಟ ಸೂಚನೆಯನ್ನು ನೀಡಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿಮ್ಮ ನಿರ್ಧಾರಕ್ಕೆ ನಾವು ಬದ್ಧರಿದ್ದೇವೆ. ಅದರ ಬಗ್ಗೆ ಎರಡು ಮಾತಿಲ್ಲ. ನಮ್ಮ ಮಾತಿಗಾದರೂ ತಾವು ಗೌರವ ನೀಡಬೇಕು. 5-10 ನಿಮಿಷಗಳವರೆಗೆ ಸದನವನ್ನು ಮುಂದೂಡಿದರೆ ಏನೂ ಆಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ಬಾರಿ ಸದನದಲ್ಲಿ ಸಭಾಪತಿಯವರು ತೀರ್ಮಾನ ಕೊಟ್ಟ ನಂತರ ಆ ತೀರ್ಮಾನವನ್ನು ಮರು ಪರಿಶೀಲನೆ ಮಾಡುವ ಕೆಲಸಕ್ಕೆ ನಾನು ಹೋಗುವುದಿಲ್ಲ. ಸಭೆಯನ್ನು ಮುಂದೂಡುವುದಿಲ್ಲ. ತಾವೆಲ್ಲರೂ ತಮ್ಮ ಸ್ಥಾನಗಳಿಗೆ ತೆರಳಿ ಚರ್ಚೆಯನ್ನು ಪ್ರಾರಂಭ ಮಾಡಿ. ಸದನವನ್ನು ಮುಂದೂಡುವುದು ಸಾಧ್ಯವೇ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ತಮಗೆ ಸೇರಿರುವ ವಿಷಯ. ನಾವು ಇನ್ನು ತಮಗೆ ಏನೂ advice ಮಾಡುವುದಕ್ಕೆ ಹೋಗುವುದಿಲ್ಲ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**(ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರು ಪುನಃ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 327ರ ಪ್ರಕಾರ ಯಾರು ತಮ್ಮ ಆದೇಶವನ್ನು ಅನುಷ್ಠಾನ ಮಾಡುವುದಿಲ್ಲವೋ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ತಮಗೆ ಅಧಿಕಾರವಿದೆ. ಆ ಅಧಿಕಾರವನ್ನು ಅನುಷ್ಠಾನಗೊಳಿಸಬೇಕೆಂದು ತಮ್ಮಲ್ಲಿ ನಾನು ವಿನಂತಿಸುತ್ತೇನೆ. ಸಭಾಪತಿಯವರು ತೀರ್ಪು ಕೊಟ್ಟ ನಂತರವೂ ಈ ರೀತಿ ಬಾವಿಗಿಳಿದಿದ್ದನ್ನು ನಾವೆಂದೂ ನೋಡಿಲ್ಲ.

**ಡಾ: ತೇಜಸ್ವಿನಿ ಗೌಡ:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 327ರ ಪ್ರಕಾರ ತಾವು ಕ್ರಮ ಕೈಗೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ನೀಡಿದ ತೀರ್ಪನ್ನು ವಿರೋಧಿಸಿ ಬಾವಿಗಿಳಿದು ಆರ್ಭಟ ಮಾಡುವುದನ್ನು ಸಹಿಸಿದರೆ ಯಾವ ಸಮಯದಲ್ಲಿಯೂ ಕೂಡ ಸದನವನ್ನು ನಡೆಸಲು ಸಾಧ್ಯವಾಗುವುದಿಲ್ಲ.

**ಡಾ:ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಅವರಿಗೆ ವಿಚಾರ ಬೇಡ, ಪ್ರಚಾರ ಬೇಕು. ತಾವು ಕ್ರಮ ಕೈಗೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಯಾವ ಸಂಪ್ರದಾಯ? ನಾವು ವಿರೋಧ ಪಕ್ಷದಲ್ಲಿದ್ದಾಗ ವಾದ ಮಾಡಿದ್ದೇವೆ, ಚರ್ಚೆ ಮಾಡಿದ್ದೇವೆ. ಆದರೆ ಸಭಾಪತಿಯವರ ತೀರ್ಪನ್ನು ವಿರೋಧ ಮಾಡಿ ಬಾವಿಗಿಳಿಯಲೇ ಇಲ್ಲ. ಮೊದಲು ಸಭಾಪತಿಯವರಾಗಿದ್ದವರ ಬಳಿ ಬೇಕಾದರೆ ಕೇಳಿ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್ ಅವರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇವರು ಒಂದು ರೀತಿಯ ಹೊಸ ಪರಂಪರೆಯನ್ನು ಹುಟ್ಟುಹಾಕುತ್ತಿದ್ದಾರೆ.

**ಡಾ:ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಪೀಠ ನೀಡಿರುವ ತೀರ್ಪಿನ ವಿರುದ್ಧ ವಾಗ್ವಾದ ಮಾಡಲು ನಿಯಮಗಳಲ್ಲಿ ಅವಕಾಶವಿಲ್ಲ. ಇಬ್ಬರು ಶಾಸಕರು ಇಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಅವರ ಹಕ್ಕನ್ನು ಮೊಟಕುಗೊಳಿಸುವುದಕ್ಕೆ ಸಾಧ್ಯವಿಲ್ಲ. ಈ ಸದನದಲ್ಲಿ ಯಾವ ವ್ಯಕ್ತಿ ಹಾಜರಿಲ್ಲವೋ ಅವರನ್ನು ಆರೋಪಿ ಎಂದು ಹೇಳಲು ಸಾಧ್ಯವಿಲ್ಲ. ಮಾನ್ಯ ಮಂತ್ರಿಯವರ ಜೊತೆಗೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನಿಬ್ಬರು ಶಾಸಕರ ಹೆಸರಿದೆ. ಅವರು ಈ ಸದನಕ್ಕೆ ಬರಲು ಅವಕಾಶವಿದೆಯೇ? ಅವರು ಭ್ರಷ್ಟರೆಂದು Court ಹೇಳಬೇಕು. ನಮ್ಮ ಅಧಿಕಾರ ದುರುಪಯೋಗ ಮಾಡಿಕೊಳ್ಳಲು ಸಾಧ್ಯವಿಲ್ಲ. ಇನ್ನಿಬ್ಬರು ಶಾಸಕರು ಇಲ್ಲಿ ಯಾವ ರೀತಿ ಬರುತ್ತಾರೆ? ಇದು ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆಯುತ್ತಿರುವ ಸದನ. ಪೀಠವನ್ನು ಅಪಮಾನ ಮಾಡಿದರೆ ತಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

**(ಗೊಂದಲ)**

**(ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಹಾಗೂ ಭ್ರಷ್ಟ ಮಂತ್ರಿ ರಾಜೀನಾಮೆ ಕೊಡಲೇಬೇಕು ಎಂಬ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮ್ಮಂತಹ ಹಿರಿಯ ನಾಯಕರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ.

**ಸಭಾಪತಿಯವರು:-** ಸದನದಲ್ಲಿ ಯಾರಾದರೂ ಪೀಠದ ಮಾತನ್ನು ಕೇಳಬೇಕಲ್ಲವೇ?

**(ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಲೇ ಇದ್ದರು)**

**ಸಭಾಪತಿಯವರು:-** ಯಾರೂ ಮಾತನಾಡಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಕರ್ನಾಟಕ ವಿಧಾನ ಪರಿಷತ್ತಿನ <u>ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ</u> 327ರ ಪ್ರಕಾರ ಸಭಾಪತಿಯವರ ಆದೇಶವನ್ನು ಉಲ್ಲಂಘನೆ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬ ಪ್ರಸ್ತಾವನೆಯನ್ನು ಈ ಮೂಲಕ ನಾನು ಮಂಡಿಸುತ್ತಿದ್ದೇನೆ.

> 327. ಸದಸ್ಯರನ್ನು ಕೆಲಕಾಲ ಸದನಕ್ಕೆ ಬರದಂತೆ ತಡೆ ಹಿಡಿಯುವುದು:- (1) ಸಭಾಪತಿಯವರು ತಾವು ಅವಶ್ಯವೆಂದು ಭಾವಿಸಿದ ಪಕ್ಷದಲ್ಲಿ ಯಾರೇ ಸದಸ್ಯರು ಸಭಾಪತಿಯವರ ಆಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾರೋ ಅಥವಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯನ್ನುಂಟು ಮಾಡುವುದರ ಮೂಲಕ ಸದನದ ನಿಯಮಗಳಿಗೆ ವಿರೋಧವಾಗಿ ವರ್ತಿಸುತ್ತಾರೋ ಆ ಸದಸ್ಯರ ಹೆಸರನ್ನು ಸದನಕ್ಕೆ ತಿಳಿಸಬಹುದು.
>
> (2) ಆ ರೀತಿ, ಸಭಾಪತಿಯವರು ಒಬ್ಬ ಸದಸ್ಯರ ಹೆಸರೆತ್ತಿ ತಿಳಿಸಿದ ಪಕ್ಷದಲ್ಲಿ ಆ ಕೂಡಲೇ ಆ ಸದಸ್ಯರು ಅಧಿವೇಶನದ ಉಳಿದ ಕಾಲದಲ್ಲಿ ಅಥವಾ ಸಭಾಪತಿಯವರು ನಿರ್ದಿಷ್ಟಗೊಳಿಸಬಹುದಾದಂತಹ ಅಧಿವೇಶನದ ಒಂದು ಭಾಗದವರೆಗೆ ಸದನಕ್ಕೆ ಬರಬಾರದಂತೆ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**(ಗೊಂದಲ)**

**ಸಭಾಪತಿಯವರು:-** ಸದನದಲ್ಲಿ ಸಭಾನಾಯಕರು ನಿಯಮ 327(2)ರಂತೆ ಕ್ರಮ ತೆಗೆದುಕೊಳ್ಳಬೇಕೆಂದು ಮಂಡಿಸಿದ್ದಾರೆ. ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ನಾನು ಮತ್ತೊಮ್ಮೆ ವಿನಂತಿ ಮಾಡುತ್ತೇನೆ. ಇಂದಿನ ದಿನದ ಮಟ್ಟಿಗೆ ಸದನದ ಬಾವಿಯಲ್ಲಿರುವ ಎಲ್ಲರನ್ನೂ ಸದನದಿಂದ ಹೊರಹಾಕುತ್ತಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಸಭಾಪತಿಗಳ ನಿರ್ಣಯವನ್ನು ಈ ರೀತಿ ಉಲ್ಲಂಘನೆ ಮಾಡಿದರೆ ಮೇಲ್ಮನೆಗೆ ಏನು ಕಿಮ್ಮತ್ತು ಉಳಿಯುತ್ತದೆ? ಅವರು ಸಂವಿಧಾನವನ್ನು ಸರಿಯಾಗಿ ಓದಿಕೊಳ್ಳಬೇಕು.

**(ಕಾಂಗ್ರೆಸ್ ಸದಸ್ಯರು ಬಾವಿಯಲ್ಲಿ ನಿಂತು ಪುನಃ ಘೋಷಣೆಗಳನ್ನು ಕೂಗಲಾರಂಭಿಸಿದರು)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದೇನಾ ಅವರು ಸಂವಿಧಾನಕ್ಕೆ ಕೊಡುವ ಗೌರವ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ನಿಮ್ಮ ಮುಂದೆ ಇರುವುದು ಸರ್ಕಾರದ ಪ್ರಶ್ನೆಯಲ್ಲ, ಪೀಠದ ಪ್ರಶ್ನೆ. ಪೀಠ ರೂಲಿಂಗ್ ಕೊಟ್ಟಿದ್ದರೂ, ಅದಕ್ಕೆ ಅಗೌರವ ಕೊಟ್ಟು ತಿರಸ್ಕಾರ ಮಾಡುವ ಹಂತಕ್ಕೆ ಸದನ ಹೋಗಬಾರದು. ನಾವು ಯಾರೂ ಶಾಶ್ವತ ಅಲ್ಲ, ಈ ವ್ಯವಸ್ಥೆ ಶಾಶ್ವತ. ವ್ಯವಸ್ಥೆಗೆ ನಾವು ಗೌರವ ಕೊಟ್ಟು ಉಳಿಸದೆ ಹೋದರೆ ಮುಂದೇನು ಗತಿ? ಮಾನ್ಯ ಪಾಟೀಲರು, ಮಾನ್ಯ ಹರಿಪ್ರಸಾದ್ ಅವರು ಮಾತನಾಡುವಾಗ ಸಭಾಪತಿಯವರು ತಮ್ಮ ವಿವೇಚನಾನುಸಾರ ರೂಲಿಂಗ್ ನೀಡಬೇಕೆಂದು ಹೇಳಿದ್ದಾರೆ. ರೂಲಿಂಗ್ ಕೊಟ್ಟಿರುವುದನ್ನು ಧಿಕ್ಕರಿಸಿದರೆ ಪೀಠಕ್ಕೆ ಉಳಿಯುವ ಗೌರವವಾದರೂ ಏನು? Do they expect the Chair to give ruling in accordance with them. ಇದು ಬಹಳ ಅತಿಯಾಯಿತು. ಇದನ್ನು ಸಹಿಸುವುದಕ್ಕಾಗುವುದಿಲ್ಲ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1111) 15-12-2021 (3.50) ಕೆಜಿ – ಬಿಎನ್ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು):-**

ಮಾನ್ಯ ಸಭಾಪತಿಯವರೇ, ಈ ಸಭೆಯನ್ನು ಅವರು random ಆಗಿ ತೆಗೆದುಕೊಂಡು ಹೋಗುತ್ತಾರೆಯೇ? ಅವರು ಈ ಸಭೆಯನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ? ನಾವಿಲ್ಲಿ ಅವರು ಹೇಳಿದ್ದನ್ನೆಲ್ಲಾ ಕೇಳಬೇಕೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪಾಟೀಲ್‌ರವರೇ, ತಾವು ವಿರೋಧ ಪಕ್ಷದ ನಾಯಕರಾಗಿದ್ದೀರಿ, ಇದು ಪದ್ಧತಿಯೇ ಹೇಳಿ? ನಿಮಗೆ ಎಷ್ಟು ಬಾರಿ ಹೇಳಬೇಕು. ನಿಮಗೆ ಎಷ್ಟು ಬಾರಿ ಹೇಳಿದರೂ ಸಹ ಕೇಳಲಿಲ್ಲವೆಂದರೆ, ಈ ಸದನವನ್ನು ಹೇಗೆ ನಡೆಸಬೇಕು?

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷ, ಪ್ರತಿ ಪಕ್ಷ ಎನ್ನುವುದಲ್ಲ. Discipline ಇರಬೇಕು. ಈ ಸಭೆ ನಿಯಮಾಳಿಗಳ ಪ್ರಕಾರ ನಡೆಯಬೇಕು. ತಾವು ruling ಕೊಟ್ಟಿದ್ದೀರಿ. Ruling ಅನ್ನು ತಿರಸ್ಕರಿಸಿದ್ದಾರೆ action ತೆಗೆದುಕೊಳ್ಳಿ. ಏನು ಆಗುವುದಿಲ್ಲ. Action ತೆಗೆದುಕೊಳ್ಳಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ನಾನು ಅವರಿಗೆ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಹೇಳಿ ಕಳುಹಿಸಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮೌನವನ್ನು ವಹಿಸಿದರೆ ಏನರ್ಥ? ಇದರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮುಖ್ಯ ಪಾತ್ರವನ್ನು ವಹಿಸಬೇಕು. ಬಾವಿಯಲ್ಲಿ ಧರಣಿ ನಿರತರಾಗಿರುವ ಸದಸ್ಯರನ್ನು ಬಾವಿಯಿಂದ ಹೊರಗಡೆ ಕರೆದುಕೊಂಡು ಹೋಗುವಂತೆ ಹೇಳಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ರೀತಿ ಮಾಡಿದರೆ ನಾಳೆ House ನಡೆಸುವುದಕ್ಕೆ ಆಗುತ್ತದೆಯೇ?

**(ವಿರೋಧ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿದ್ದು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು )**

**(ಗೊಂದಲ)**

**ಸಭಾಪತಿಯವರು:-** **ಇವತ್ತಿನ ಸದನ ಮುಗಿಯುವವರೆಗೆ ತಮ್ಮೆಲ್ಲರನ್ನು ಸದನದಿಂದ ಹೊರಗಡೆ ಹಾಕಿದ್ದೇನೆಂದು ಮತ್ತೊಮ್ಮೆ ಹೇಳುತ್ತಿದ್ದೇನೆ. ದಯಮಾಡಿ ತಾವೆಲ್ಲರೂ ಇವತ್ತಿನ ಸದನ ಮುಗಿಯವರೆಗೆ ಹೊರಗಡೆ ಹೋಗಿ. ಸದನದಿಂದ ಹೊರಗೆ ಹೋಗಬೇಕು.**

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ (ಸದನದ ಬಾವಿಯಲ್ಲಿ ನಿಂತು ಮಾತನಾಡಿದರು):-** ಮಾನ್ಯ ಸಭಾಪತಿಯವರೇ, ತಾವು ಇಲ್ಲಿಂದ ವಿಷಯ ಆಚೆಗೆ ಹೋಗುವುದು ಬೇಡವೆಂದು ಹೇಳುತ್ತಿದ್ದೀರಿ. ಆದರೆ, ಮಾಧ್ಯಮಗಳ ಮುಖಾಂತರ ಎಲ್ಲಾ ಹೋಗುತ್ತಿದೆ. ಇಲ್ಲಿ ಹೋಗುತ್ತಿಲ್ಲ. ಆದರೆ, ಅಲ್ಲಿ ಹೋಗುತ್ತಿದೆ.

**ಸಭಾಪತಿಯವರು:-** ಸಿ.ಎಂ.ಇಬ್ರಾಹಿಂರವರೇ, ಹೋಗಲಿ ಬಿಡಿ. ಏನು ಮಾಡುವುದು? ನಿಮ್ಮದ್ದು ಎಲ್ಲಾ ಗೊತ್ತಾಗಲಿ. ತಾವು ಈ ಹಿಂದೆ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದಂತಹವರು ಹಿರಿಯರಿದ್ದೀರಿ. ತಾವು ವಿಚಾರ ಮಾಡಿ. ನಾನು ಹೇಳಿದ್ದೇನೆ. ನಾನು ಪದೇ ಪದೇ ಹೇಳಿದಾಗಲೂ ಸಹಿತ ಅದನ್ನು obey ಮಾಡದಿದ್ದರೆ, ಹೇಗೆ ಸದನವನ್ನು ನಡೆಸಬೇಕು ಹೇಳಿ? ತಿರುಗಿ ತಿರುಗಿ ಮಾತನಾಡಿದರೆ ಏನು ಮಾಡಬೇಕೆಂದು ಹೇಳಿ.

**ಶ್ರೀ ಸಿ.ಎಂ.ಇಬ್ರಾಹಿಂ (ಸದನದ ಬಾವಿಯಲ್ಲಿ ನಿಂತು ಮಾತನಾಡಿದರು):--** ಮಾನ್ಯ ಸಭಾಪತಿಯವರೇ, ಈಗ ಅವರು FIR ಇದೆ, Criminal case ಇದೆ ಎಂದು ಒಪ್ಪಿಕೊಂಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಇಬ್ರಾಹಿಂರವರೇ, ಅದು ಬೇರೆ. ಅದರ ಸಂಬಂಧ ಇಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಆದೇಶ ಕೊಟ್ಟಿದ್ದೀರಿ. ಇದು close ಆಗಿದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಬಾವಿಯಲ್ಲಿ ಧರಣಿ ನಿರತರಾಗಿರುವಂತಹ ಸದಸ್ಯರು ಯಾರು ಮಾತನಾಡಬಾರದು . ಒಂದು ವೇಳೆ ಮಾತನಾಡಿದರೆ ಅದು ದಾಖಲೆಗೆ ಹೋಗುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಅವರಿಗೆ well ನಿಂದ ಆಚೆಗೆ ಹೋಗಬೇಕೆಂದು, ಇಲ್ಲವೆಂದರೆ, ಸದನದಿಂದ ಆಚೆಗೆ ಹೋಗಬೇಕೆಂದು ಹೇಳಿದ್ದೀರಿ. ತಮ್ಮ ಆದೇಶವನ್ನು ಅವರು ಪಾಲನೆ ಮಾಡಬೇಕು.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಯಾರೂ ಅವರಂತೆ ದಗಲ್‌ಬಾಜಿಗಳಲ್ಲ. ನಾವು ಯಾರು ಸರ್ಕಾರದಲ್ಲಿ ದಗಲ್‌ಬಾಜಿಗಳಿಲ್ಲ. ನಾವು ಅವರಂತೆ ಬಂದು ಇಲ್ಲಿ ಕುಳಿತುಕೊಂಡಿದ್ದೇವೆ. ನಾವು ಇಲ್ಲಿಗೆ ದಗಲ್‌ಬಾಜಿ ಕೆಲಸ ಮಾಡುವುದಕ್ಕೆ ಬಂದಿಲ್ಲ.

**(ಗೊಂದಲ)**

**ಶ್ರೀ ಸುನೀಲ್ ಕುಮಾರ್ (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದೆ. ಅವರು ಜನಪರವಾದಂತಹ ವಿಷಯಗಳ ಬಗ್ಗೆ ಚರ್ಚೆ ಮಾಡಲಿ. ಉತ್ತರ ಕರ್ನಾಟಕ ಭಾಗದ ಎಷ್ಟೋ ವಿಷಯಗಳಿವೆ, ಅದರ ಬಗ್ಗೆ ಚರ್ಚೆ ಮಾಡಲಿ. ಅವರು ವೈಯಕ್ತಿಕ ವಿಷಯಗಳನ್ನು ಹಿಡಿದುಕೊಂಡು ಸದನಕ್ಕೆ ಬರಬಾರದು.

**(ಗೊಂದಲ)**

**(ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ನಜೀರ್‌ರವರು ಲೂಟಿ ಮಾಡುವುದಕ್ಕೆ ತಂದು, ತಂದು ಕೊಟ್ಟಿದ್ದಾರೆ. ದಯಮಾಡಿ ಅವರನ್ನು ಸದನದಿಂದ ಹೊರಗಡೆ ಕಳುಹಿಸಬೇಕು.

**(ಗೊಂದಲ)**

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಡಾ|| ತೇಜಸ್ವಿನಿ ಗೌಡರವರು ಸಭಾಪೀಠವನ್ನು ಅಲಂಕರಿಸಿದರು)**

**ವೈಸ್ ಛೇರ್ಮನ್‌ರವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವೀಗ ನೆರವಿಗೆ ಬರಬೇಕು. ತಾವು ಈ ಸದನದಲ್ಲಿ ಹಿರಿಯರು. ತಾವು ನಮಗೆಲ್ಲರಿಗೂ ಮಾರ್ಗದರ್ಶನ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿರುವವರು. ನಾವು ತಮ್ಮ ಒಳ್ಳೆಯ ಪರಂಪರೆಗಳನ್ನು ಪಾಲಿಸಬೇಕಾದವರು. ತಾವು ಪ್ರತಿಪಕ್ಷದ ನಾಯಕರಾಗಿದ್ದೀರಿ, ದಯವಿಟ್ಟು ಈ ಪೀಠ ಕೊಟ್ಟಂತಹ ruling ಅನ್ನು ಗೌರವಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲಿ ವಿರೋಧ ಪಕ್ಷದ ನಾಯಕರು ಬಾವಿಯಿಂದ ಅವರ ಪೀಠಕ್ಕೆ ತೆರಳಿದರು)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಇವರಿಗೆ ಮಾತನಾಡೋಣವೆಂದು ಹೇಳಿದೆ. ಆದರೆ, ಅವರು ಕೇಳುವುದಕ್ಕೆ ತಯಾರಿ ಇಲ್ಲ. ನಾನು ಏನು ಮಾಡಲಿ?

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ಪೀಠ ಕೊಟ್ಟಂತಹ ruling ಅನ್ನು ಗೌರವಿಸಬೇಕೆಂದು ಮತ್ತು ಅನುಷ್ಠಾನಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಮತ್ತೊಮ್ಮೆ ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ಈ ಪೀಠ ನಿಯಮಾವಳಿಗಳಲ್ಲಿ ಅವಕಾಶ ಇಲ್ಲದಿದ್ದರೂ ಸಹ ಮಾನ್ಯ ಸದಸ್ಯರು ಎತ್ತಿದಂತಹ.. ತಾವುಗಳೂ ಅತ್ಯಂತ ಹಿರಿಯರು, ಹೆಚ್ಚಿನ ಅನುಭವಿಗಳು, ಅನೇಕ ಸದನಗಳನ್ನು ನೋಡಿ ಬಂದಿರುವಂತಹವರು ಇದ್ದೀರಿ. ನಮ್ಮ Rule book ಪ್ರಕಾರ, word to word ಶಬ್ದಾರ್ಥದಲ್ಲಿ ಹೋಗಿದ್ದರೆ, ಚರ್ಚೆಗೆ ಎತ್ತಿಕೊಳ್ಳುವುದಕ್ಕೆ ಅವಕಾಶ ಇರಲಿಲ್ಲ. ಆದರೂ ಸಹ, ಕೆಲವು ಪರಂಪರೆ ಹಾಗೂ ಯಾರೋ ಒಬ್ಬ ಸದಸ್ಯರು ಈ ಸದನದಲ್ಲಿ ಒಂದು ವಿಚಾರವನ್ನು ಎತ್ತಿದಾಗ, ಅವರ ಸದ್ಭಾವನೆಯನ್ನು ಮತ್ತು ಅವರ ಸಮಾಜಿಕ ಕಳಕಳಿಯನ್ನು ಗೌರವಿಸಬೇಕೆಂದು ಮಾನ್ಯ ಸಭಾಪತಿಯವರಿಗೆ ಇರುವಂತಹ ವಿವೇಚನಾ ಅಧಿಕಾರವನ್ನು ಉಪಯೋಗ ಮಾಡಿ ಈ ಸದನದ ಅತ್ಯಂತ ಹಿರಿಯ ಸದಸ್ಯರಾದ ಹಾಗೂ ಮಾನ್ಯ ಸಭಾಪತಿಗಳಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಅವಕಾಶವನ್ನು ಮಾಡಿಕೊಟ್ಟರು. Ruling party ಯವರು ಎಷ್ಟೇ ಪ್ರತಿರೋಧವನ್ನು ತೋರಿದರೂ ಸಹ, ಅವರನ್ನು convince ಮಾಡಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟಿರುವುದನ್ನು ನಾವು ಯಾವತ್ತಿಗೂ ಸಹ ಗೌರವಿಸಬೇಕು. ಈಗಾಗಲೇ ವಿಷಯವನ್ನು ಪ್ರಸ್ತಾಪ ಮಾಡಿ ಆಗಿದೆ. ಮಾನ್ಯ ಕಾನೂನು ಸಚಿವರೇ ಬಂದು, ಅವರ ವಿಚಾರದಾರೆಗಳನ್ನು ಹೇಳಿದ್ದಾರೆ. ಪ್ರತಿ ಪಕ್ಷದ ನಾಯಕರು ಹಾಗೂ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ಅವರು ಅಷ್ಟು ಮಾತನಾಡಿದ ಮೇಲೆಯೂ ಕೂಡ, ಈ ವಿಷಯ ಪ್ರಸ್ತಾಪ ಮಾಡಿದ ಮೇಲೆಯೂ ಸಹ, ಮತ್ತು ಇನ್ನಿಬ್ಬರ ಸಚಿವರ ಜೊತೆಗೆ ನಾನು ಗಮನಿಸಿದಂತೆ, ಇನ್ನೊಂದು ಅಂಶ ಇನ್ನಿಬ್ಬರು ಶಾಸಕರು ಎಂದು ಇದೆ.

(ಮುಂದು)

(1112) 15-12-2021 (4.00) ಎಂವಿ-ಜಿಆರ್

(ವೈಸ್ ಛೇರ್ಮನ್‌ರವರ ಉಪಸ್ಥಿತಿ)

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಮತ್ತು ಸದಸ್ಯರಾದ ಮಾನ್ಯ ಸಿ.ಎಂ.ಇಬ್ರಾಹಿಂರವರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**ವೈಸ್ ಛೇರ್ಮನ್ (ಮುಂದು):-**

ಆ ಶಾಸಕರು ಈ ಸದನಕ್ಕೆ ಬಂದು ಅವರನ್ನು ಅವರು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆಯೇ? ನಮ್ಮ ನಿಯಮದಲ್ಲಿ ಯಾವ ವ್ಯಕ್ತಿಗೆ ಬಂದು ಸದನದಲ್ಲಿ ತನ್ನನ್ನು ತಾನು ಚರ್ಚೆ ಮಾಡಿಕೊಳ್ಳುವ ಅವಕಾಶವಿಲ್ಲ. ದುರುಪಯೋಗ ಮಾಡಿಕೊಳ್ಳುವುದಕ್ಕೆ ಮತ್ತು ಈ ಸದನವನ್ನು ದುರುಪಯೋಗ ಮಾಡಿಕೊಂಡು, ಅವರ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ನಮ್ಮ ಸಂಸದೀಯ ಪರಂಪರೆಯಲ್ಲಿ ಅವಕಾಶವಿಲ್ಲ.

**(ಗೊಂದಲ)**

**ವೈಸ್ ಛೇರ್ಮನ್:** ಇದು ಕೋರ್ಟ್ ಅಲ್ಲ. ಈಗ ನಾನು ಕೊನೆಯದಾಗಿ ವಿನಂತಿ ಮಾಡುತ್ತಿದ್ದೇನೆ. ಅವಕಾಶ ಕೊಡಲಾಗಿದೆ, ನೀವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಸರ್ಕಾರಕ್ಕೂ ಕೂಡ ನಿಮ್ಮ ಕಾಳಜಿ ಮತ್ತು ಆತಂಕ ತಲುಪಿದೆ. ಅವರೂ ಕೂಡ ವಿನಂತಿ ಮಾಡಿದ್ದಾರೆ. ಕೊನೆಯದಾಗಿ ಈ ಪೀಠದಿಂದ ಮನವಿ ಮಾಡುತ್ತಿದ್ದೇನೆ, ಕಲಾಪವನ್ನು ಸುಸೂತ್ರವಾಗಿ ನಡೆಸೋಣ. ಅದನ್ನು ತಾವುಗಳು ಇನ್ನೊಂದು ರೀತಿಯಲ್ಲಿ ಪ್ರಸ್ತಾಪ ಮಾಡಿ. ಈಗ ಮಾನ್ಯ ಸಭಾಪತಿಯವರು ರೂಲಿಂಗ್ ಅನ್ನು ಕೊಟ್ಟಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ದಯವಿಟ್ಟು ಸ್ವಲ್ಪ ನನ್ನ ಮಾತನ್ನು ಕೇಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ದಯಮಾಡಿ ಕ್ಷಮಿಸಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿ.ಸೋಮಣ್ಣನವರು ಮನವಿ ಮಾಡಿದರು. ಈಗ ನಾನು ಮನವಿ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**(ಗೊಂದಲ)**

**ವೈಸ್ ಛೇರ್ಮನ್:-** ದಯವಿಟ್ಟು ಈಗ ಕಾನೂನು ಸಚಿವರು ಮಾತನಾಡುತ್ತಿದ್ದಾರೆ.

**ಶ್ರೀ ವಿ.ಸೋಮಣ್ಣ (ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು suspend ಆಗಿದ್ದಾರೆ. ಈಗ ಅದು ಆಗಿ ಹೋಗಿದೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರೆಲ್ಲರನ್ನು ಸಹ ಹೊರಗಡೆ ಹೋಗಿ ಎಂದು ಹೇಳಲಾಗಿದೆ. ಇವತ್ತಿನ ಮಟ್ಟಿಗೆ ಅವರನ್ನು suspend ಮಾಡಲಾಗಿದೆ ಎಂದು ಹೇಳಲಾಗಿದೆ. There is no question of discussion. ಈಗ ಅವರು ಹೊರಗಡೆ ಹೋಗಬೇಕು ಅಷ್ಟೆ. ಈಗ ವಿರೋಧ ಪಕ್ಷದ ನಾಯಕರೂ ಸೇರಿದಂತೆ ಅವರುಗಳೆಲ್ಲರೂ ಹೊರಗಡೆ ಹೋಗಬೇಕೆಂದು ಹೇಳಿದ್ದಾರೆ. ಈಗ ವಿರೋಧ ಪಕ್ಷದ ನಾಯಕರು ಅಲ್ಲಿಗೆ ಹೋಗಿ ನಿಂತುಕೊಳ್ಳುವಂತಹ ಅಧಿಕಾರವಿಲ್ಲ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಯಾರಿಗೂ ಅಧಿಕಾರವಿಲ್ಲ.

**(ಈ ಹಂತದಲ್ಲಿ ಮಾನ್ಯ ವೈಸ್ ಛೇರ್ಮನ್‌ರವರು ಈ ಸಂದರ್ಭದಲ್ಲಿನ ಯಾವುದೇ ಹೇಳಿಕೆಗಳು ಕಡತಕ್ಕೆ ಹೋಗಬಾರದೆಂದು ಆದೇಶಿಸಿದರು)**

**ವೈಸ್ ಛೇರ್ಮನ್:-** ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಈಗ ಏನು ಸುವರ್ಣ ವಿಧಾನ ಸೌಧದಲ್ಲಿ ಕರ್ನಾಟಕ ರಾಜ್ಯದ ಜನತೆಯ ಸಂಕಷ್ಟಗಳನ್ನು ಚರ್ಚೆ ಮಾಡುವುದಕ್ಕೋಸ್ಕರ ಈ ಕಲಾಪವನ್ನು ಇಂತಹ ಕೋವಿಡ್-19 ಸಂದರ್ಭದಲ್ಲಿ ನಡೆಸುತ್ತಿದ್ದೇವೆ. **<u>ಇಂತಹ ಸನ್ನಿವೇಶದಲ್ಲಿ ಸದನದ ನಿಯಮಾವಳಿಗಳನ್ನು ಗಾಳಿಗೆ ತೂರಿ ಸಭಾಪೀಠಕ್ಕೆ ಅಗೌರವ ತೋರಿ, ಈ ಸತ್ಸಂಪ್ರದಾಯಕ್ಕೆ ಅಗೌರವ ತೋರಿದ ಸಲುವಾಗಿ ಅಮಾನತುಗೊಂಡ ಎಲ್ಲಾ ಮಾನ್ಯ ಸದಸ್ಯರು ಈ ಸದನದಿಂದ ಹೊರಗೆ ಹೋಗಬೇಕೆಂದು ನಾನು ಪೀಠದಿಂದ ಆದೇಶವನ್ನು ಕೊಡುತ್ತಿದ್ದೇನೆ.</u>**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ವೈಸ್ ಛೇರ್ಮನ್:-** **ಈ ಸದನದಲ್ಲಿ ವಿನಾಕಾರಣ ಸಭಾಪತಿಯವರ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ, ಈಗ ನಾನು ಹೆಸರಿಸುತ್ತಿರುವ ಮಾನ್ಯ ಸದಸ್ಯರುಗಳು ತಿರಸ್ಕಾರದಿಂದ ವರ್ತಿಸುತ್ತಿದ್ದಾರೆ ಮತ್ತು ವಿಧಾನ ಪರಿಷತ್ತಿನ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆ ಉಂಟು ಮಾಡುವುದರ ಮೂಲಕ ಪರಿಷತ್ತಿನ ನಿಯಮಗಳಿಗೆ ವಿರೋಧವಾಗಿ ವರ್ತಿಸುತ್ತಿದ್ದಾರೆ. ಆದುದರಿಂದ, ನಾನು ಈಗ ಹೆಸರಿಸುತ್ತಿರುವ ಮಾನ್ಯ ಸದಸ್ಯರುಗಳನ್ನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 327(1) ಮತ್ತು (2)ರ ಅನ್ವಯ ಈ ದಿನದ ಕಾರ್ಯಕಲಾಪದಲ್ಲಿ ಪಾಲ್ಗೊಳ್ಳದಂತೆ ಹಾಗೂ ಸಭೆಯಿಂದ ಹೊರಗೆ ಉಳಿಯಲು ಆಜ್ಞೆ ಮಾಡುತ್ತೇನೆ.**

01. ಶ್ರೀ ಎಸ್.ಆರ್.ಪಾಟೀಲ್
02. ಶ್ರೀ ಎಂ.ನಾರಾಯಣಸ್ವಾಮಿ
03. ಶ್ರೀ ಬಿ.ಕೆ.ಹರಿಪ್ರಸಾದ್
04. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
05. ಶ್ರೀ ಸಿ.ಎಂ.ಇಬ್ರಾಹಿಂ
06. ಶ್ರೀ ನಸೀರ್ ಅಹಮದ್
07. ಶ್ರೀ ಆರ್.ಬಿ.ತಿಮ್ಮಾಪೂರ
08. ಶ್ರೀ ಬಸವರಾಜ ಪಾಟೀಲ ಇಟಗಿ
09. ಶ್ರೀ ಯು.ಬಿ.ವೆಂಕಟೇಶ್
10. ಶ್ರೀ ಅರವಿಂದ ಕುಮಾರ ಅರಳಿ
11. ಶ್ರೀ ಎಂ.ಎ.ಗೋಪಾಲಸ್ವಾಮಿ
12. ಶ್ರೀ ಸಿ.ಎಂ.ಲಿಂಗಪ್ಪ
13. ಶ್ರೀಮತಿ ವೀಣಾ ಅಚ್ಚಯ್ಯ
14. ಶ್ರೀ ಪಿ.ಆರ್.ರಮೇಶ್
15. ಶ್ರೀ ಕೆ.ಹರೀಶ್ ಕುಮಾರ್

ಈ ಎಲ್ಲಾ ಸದಸ್ಯರುಗಳನ್ನು ಸದನದಿಂದ ಹೊರಗೆ ಹೋಗುವಂತೆ ಆದೇಶ ಮಾಡುತ್ತಿದ್ದೇವೆ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಸದನದಿಂದ ನಿರ್ಗಮಿಸಿದರು)**

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರುಗಳು ಘೋಷಣೆಯನ್ನು ಕೂಗಬಾರದು. ಮಾನ್ಯ ಸದಸ್ಯರುಗಳಿಗೆ ಸದನದಲ್ಲಿ ಇರುವುದಕ್ಕೆ ಆಸೆ ಇದೆ. ಆದರೆ, ಯಾವುದೋ ಒಂದು ಶಕ್ತಿ ನಿಮ್ಮನ್ನು ನಿಯಂತ್ರಣ ಮಾಡುತ್ತಿದೆ. ಘೋಷಣೆಯನ್ನು ಕೂಗಬೇಡಿ, ಘೋಷಣೆಯನ್ನು ಕೂಗುವಂಥದ್ದಲ್ಲ. ಮುಂದೊಂದು ದಿನ ಇದೆಲ್ಲವೂ ದಾಖಲೆಗೆ ಹೋಗುತ್ತದೆ. ನಾನು ಎಷ್ಟು ಬಾರಿ ಘೋಷಣೆಯನ್ನು ಕೂಗಬೇಡಿ ಎನ್ನುವುದು ಸಹ ದಾಖಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

(1113) 15.12.2021 04.10 LL-GR

(ವೈಸ್ ಚೇರ್ಮನ್‌ರವರ ಉಪಸ್ಥಿತಿ)

**ವೈಸ್ ಛೇರ್ಮನ್ (ಮುಂದು):-**

ದಯಮಾಡಿ, ನಾವು ಸದನವನ್ನು ಗೌರವಿಸೋಣ. ಈ ಸದನವನ್ನು ನಾವು ನೀವೇ ಸೇರಿ ಮಾಡಿರತಕ್ಕಂಥದ್ದು. ಈ ನಿಯಮಾವಳಿಗಳ ಅನುಸರಣೆ ಮಾಡುವುದಕ್ಕಾಗಿಯೇ ಅದನ್ನು ಮಾಡಿಕೊಂಡಿದ್ದೇವೆ. ಅವುಗಳನ್ನು ಗೌರವಿಸುವುದಕ್ಕಾಗಿಯೇ ಮಾಡಿಕೊಂಡಿರುತ್ತೇವೆ. ಘೋಷಣೆ ಕೂಗುವುದಕ್ಕೆ ಹೊರಗಡೆ ಅವಕಾಶ ಇದೆ. ಸದನದ ಒಳಗಡೆ ಚರ್ಚೆ ಮಾಡುವುದಕ್ಕೆ ತಮ್ಮ ಸಮಯವನ್ನು ಸದುಪಯೋಗ ಮಾಡಿಕೊಳ್ಳಿ. ಚರ್ಚೆ ಮಾಡೋಣ. ಈಗಾಗಲೇ ಈ ವಿಷಯದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಅದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಿ. ಇದು ಚಿಂತಕರ ಛಾವಡಿ, ಮಹಾರಾಜರಿಂದ ರಚಿಸಲ್ಪಟ್ಟಿರತಕ್ಕಂತಹ ಮೇಲ್ಮನೆಯ ಗೌರವದ ಬಗ್ಗೆ, ಮೇಲ್ಮನೆಯ ಗೌರವವನ್ನು ಎತ್ತಿ ಹಿಡಿಯಿರಿ. ಕರ್ನಾಟಕ ವಿಧಾನ ಪರಿಷತ್ತಿಗೆ ಅದರದ್ದೇ ಆದ ಗೌರವ ಇದೆ, ಇತಿಹಾಸ ಇದೆ. ಇಡೀ ಭಾರತದಲ್ಲಿ ಕರ್ನಾಟಕ ವಿಧಾನ ಪರಿಷತ್ತನ್ನು ಒಳ್ಳೆಯ ಆದರ್ಶಗಳಿಗಾಗಿ ಹೆಸರಿಸುತ್ತಾರೆ. ಅದಕ್ಕೆ ಗೌರವ ಕೊಡೋಣ. ಘೋಷಣೆ, ಪ್ರತಿಭಟನೆಗೆ ಸದನದ ಹೊರಗಡೆ ಅವಕಾಶ ಇದೆ. ಘೋಷಣೆ, ಪ್ರತಿಭಟನೆ ರೂಪದಲ್ಲಿ ಸರ್ಕಾರವನ್ನು ಎಚ್ಚರಿಸುವುದಕ್ಕೆ ಸದನದ ಒಳಗಡೆ ಅವಕಾಶ ಇರುವುದಿಲ್ಲ. ಅದಕ್ಕೆ ಸದನದ ಹೊರಗಡೆ ಅವಕಾಶ ಇದೆ. ಬೇರೆಯವರ ಸಮಯವನ್ನು ದುರುಪಯೋಗ ಮಾಡಿಕೊಳ್ಳಬಾರದು. ಕಲಾಪವನ್ನು ಕೆಡಿಸಬಾರದು. ಅದು ಸತ್ಸಂಪ್ರದಾಯವಲ್ಲ. ಈ ಸದನದ ಒಳಗಡೆ ಬರಬೇಕಾದರೆ, ಚಿಂತಕರ ಛಾವಡಿ ಬರಬೇಕಾದರೆ ಅನೇಕ ರೀತಿಯ ಕಷ್ಟಪಟ್ಟು ಪ್ರತಿಯೊಬ್ಬರು ಈ ಸದನಕ್ಕೆ ಬಂದಿರುತ್ತೀರಿ. ಶಿಕ್ಷಕರನ್ನು, ಸ್ಥಳೀಯ ಸಂಸ್ಥೆಗಳನ್ನು, ಕಲಾವಿದರನ್ನು, ವಿಧಾನಸಭೆಯನ್ನು ಪ್ರತಿನಿಧಿಸಿ ತಾವು ಇಲ್ಲಿಗೆ ಬಂದಿರುತ್ತೀರಿ. ಅನೇಕ ಬಾರಿ ಕೆಳಮನೆಗೆ ಮಾದರಿಯಾಗುವಂತಹ ಚರ್ಚೆಗಳು ಇಲ್ಲಿ ನಡೆದಿರುತ್ತವೆ. ಈ ರೀತಿಯ ವರ್ತನೆಗಳಿಂದ ಅದಕ್ಕೆಲ್ಲಾ ಚ್ಯುತಿ ಬರುತ್ತದೆ. ಅದೆಲ್ಲವನ್ನು ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಈ ಮೇಲ್ಮನೆಯ ಕೊಡುಗೆಗಳೆಲ್ಲಾ ಮರೆತು ಹೋಗುತ್ತದೆ. ಯಾವುದೋ ಒಂದು ಕ್ಷಣದಲ್ಲಿ ನಿಮ್ಮ ಆವೇಶಕ್ಕೆ ಬಲಿಯಾಗಬೇಡಿ.

**(ಈ ಹಂತದಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ವೈಸ್ ಛೇರ್ಮನ್:-** ಮುಂದೆ ಬರತಕ್ಕಂತಹವರು ಇದೇ ರೀತಿ ಮಾಡಿದರೆ ಈ ಸದನದ ಅವಶ್ಯಕತೆ ಉಳಿಯುವುದೇ ಇಲ್ಲ. ಈಗಾಗಲೇ ಈ ಸದನದ ಅವಶ್ಯಕತೆ ಬಗ್ಗೆ ಚರ್ಚೆ ಶುರುವಾಗಿದೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮುಂದೊಂದು ದಿನ ಈ ಸದನದ ಅವಶ್ಯಕತೆ ಇರುವುದಿಲ್ಲ. ಬೀದಿಯಲ್ಲಿ ಮಾಡುವ ಪ್ರತಿಭಟನೆಗೆ ಈ ಸದನವನ್ನು ಉಪಯೋಗ ಮಾಡಿಕೊಳ್ಳುವುದಾದರೆ, ಈ ಸದನದ ಅವಶ್ಯಕತೆ ಬಗ್ಗೆ ಸಾರ್ವಜನಿಕವಾಗಿ ಚರ್ಚೆ ಜಾಸ್ತಿಯಾಗುತ್ತದೆ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ 'ಭೂತದ ಬಾಯಿಯಲ್ಲಿ ಭಗವದ್ಗೀತೆ' ಎಂಬ ಘೋಷಣೆಯನ್ನು ಕೂಗುತ್ತಿದ್ದರು)**

**ವೈಸ್ ಚೇರ್ಮನ್:-** ಭೂತಗಳು ಇಲ್ಲಿಗೆ ಬರುವ ಹಾಗಿಲ್ಲ. ಭೂತಗಳಿಗೆ ಈ ಸದನದಲ್ಲಿ ಅವಕಾಶ ಕೊಟ್ಟಿರುವುದಿಲ್ಲ. ಭಗವದ್ಗೀತೆಯ ಸಾರವನ್ನು ಬಲ್ಲವರು ಈ ರೀತಿ ಹೇಳುವುದಿಲ್ಲ. ಭಗವದ್ಗೀತೆಯನ್ನು ವಿರೋಧ ಮಾಡುವುದಕ್ಕೂ ವ್ಯಕ್ತಿ ಸ್ವಾತಂತ್ರ್ಯ ಇದೆ. ಭಗವದ್ಗೀತೆಯನ್ನು ವಿರೋಧ ಮಾಡುವುದಕ್ಕೂ ಅಭಿವ್ಯಕ್ತಿ ಸ್ವಾತಂತ್ರ್ಯ ಕೊಟ್ಟಿರುವುದು ಈ ಸದನ ಮತ್ತು ಸಂವಿಧಾನ. ಅದಕ್ಕೆ ತಾವೆಲ್ಲರೂ ಗೌರವ ಕೊಡಿ. ಸಂವಿಧಾನಕ್ಕೆ ಗೌರವ ಕೊಡಿ. ಡಾ: ಬಿ.ಆರ್. ಅಂಬೇಡ್ಕರ್‌ರವರಿಗೆ ಗೌರವ ಕೊಡಿ. ನೀವೇ ಮಾಡಿರುವಂತಹ ನಿಯಾಮವಳಿಗಳಿಗೆ ಗೌರವ ಕೊಡಿ. ಸದನ ನ್ಯಾಯಾಲಯವಲ್ಲ. ಇಲ್ಲಿ ಬರುವ ಆರೋಪಗಳಿಗೆ ಅಪರಾಧಿಗಳೆಂದು ಘೋಷಣೆ ಮಾಡುವ ಅವಕಾಶ ಈ ಸದನಕ್ಕೆ ಇಲ್ಲ. ದಯಮಾಡಿ ಅರ್ಥ ಮಾಡಿಕೊಳ್ಳಿ. ಸರ್ಕಾರ ನಿಮ್ಮ ಅವಹಾಲನ್ನು ಕೇಳಿದೆ. ನಿಯಮಾವಳಿಗಳನ್ನು ಮೀರಿ, ಮಾನ್ಯ ಸಭಾಪತಿಯವರು ಚರ್ಚೆಗೆ ಅವಕಾಶ ಕೊಟ್ಟಾಗಿದೆ. ಅಮಾನತ್ತುಗೊಂಡವರು ನೀವು. ಇಲ್ಲಿ ನೀವು ಪ್ರತಿಭಟನೆ ಮಾಡುವುದಕ್ಕೆ ಅಥವಾ ಕೂಗುವುದಕ್ಕೆ ನಿಯಮಾವಳಿಗಳಲ್ಲಿ ಅವಕಾಶವೇ ಇಲ್ಲ. ಇದು ಬೀದಿಯಲ್ಲ. ರೆಕಾರ್ಡ್ ಆಗಲೇಬೇಕೆಂದು ನಾನು ಹೇಳುತ್ತಿದ್ದೇನೆ. ಇದು ಬೀದಿಯಲ್ಲ. ಇದು ಸುವರ್ಣಸೌಧ. ಶ್ರೀಮತಿ ರಾಣಿ ಚೆನ್ನಮ್ಮನವರ, ಸಂಗೊಳ್ಳಿ ರಾಯಣ್ಣನವರ ತ್ಯಾಗ, ಬಲಿದಾನಗಳಿಂದ ಬಂದಿರುವಂತಹ ವೀರ ಭೂಮಿ ಇದು. ಇದು ಘೋಷಣೆ ಕೂಗುವುದಕ್ಕೆ ಅಲ್ಲ ಕಟ್ಟಿರುವಂಥದ್ದು. ಇದು ಘೋಷಣೆ ಕೂಗುವುದಕ್ಕೆ ಕಟ್ಟಿರುವ ಸದನ ಅಲ್ಲ. ಇದು ಉತ್ತರ ಕರ್ನಾಟಕದ ಜನತೆಯ ಕಷ್ಟಗಳನ್ನು ಚರ್ಚೆ ಮಾಡುವುದಕ್ಕೆ ಈ ಸದನವನ್ನು ಉಪಯೋಗ ಮಾಡಿಕೊಳ್ಳಬೇಕು. ಸಭಾಪತಿಯವರ ಪೀಠಕ್ಕೆ ಸವಾಲು ಮಾಡುವಂತಹ ಈ ವರ್ತನೆಯನ್ನು ನಾವು ಯಾವತ್ತೂ ಪುರಸ್ಕಾರ ಮಾಡುವುದಿಲ್ಲ. ಗಾಂಧೀಜಿಯವರೇ ಹೇಳಿದ್ದು, ಭಗವದ್ಗೀತೆಯನ್ನು ಗಾಂಧೀಜಿಯವರು ಅನುಸರಿಸುತ್ತಿದ್ದರು. ಅದಕ್ಕೆ ಗೌರವ ಕೊಡಿ. ಮಹಾತ್ಮ ಗಾಂಧೀಜಿಯವರನ್ನು ನೆನಪು ಮಾಡಿಕೊಳ್ಳಿ. ಪೀಠದ ಆದೇಶವನ್ನು ಪಾಲನೆ ಮಾಡಬೇಕು. ಸದನದ ಬಾವಿಯಲ್ಲಿರುವ ಸದಸ್ಯರುಗಳು ಈ ದಿನದ ಮಟ್ಟಿಗೆ ನೀವೆಲ್ಲರೂ ಅಮಾನತ್ತುಗೊಂಡಿದ್ದೀರಿ. ಸದನದ ಹೊರಗಡೆ ಹೋಗಬೇಕೆಂದು ಆದೇಶ ಮಾಡಲಾಗಿದೆ. ಈ ಸದನದ ಸತ್ಸಮಯವನ್ನು ಹಾಳು ಮಾಡುವುದಕ್ಕೆ ತಮಗೆ ಹಕ್ಕಿರುವುದಿಲ್ಲ. ಈ ಸದನದ ಸಮಯವನ್ನು ಹಾಳು ಮಾಡದೇ, ಕಲಾಪ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಮುಂದೆ ಬರತಕ್ಕಂತಹವರು ಇದೇ

ರೀತಿ ಪುನರಾವರ್ತನೆ ಮಾಡಿದರೆ, ಈ ಸದನವೇ ಇರುವುದಿಲ್ಲ. ಅದನ್ನು ನಾನು ಮತ್ತೆ ಮತ್ತೆ ಹೇಳುತ್ತಿದ್ದೇನೆ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್‌ರವರು ಮಾತನಾಡುತ್ತಿದ್ದರು)**

**ವೈಸ್ ಚೇರ್ಮನ್:-** ತಾವು ಹಿರಿಯರು. ಮಾನ್ಯ ವೆಂಕಟೇಶ್‌ರವರು ತಾವು ಲೀಡ್ ತೆಗೆದುಕೊಳ್ಳಬೇಕು. ಭಗವದ್ಗೀತೆಯ ಬಗ್ಗೆ ಒಂದು ಚೂರು ಆದರೂ ಈಗ ಮಾನ್ಯ ಸದಸ್ಯರಿಗೆ ಹೇಳಿಕೊಡಿ. ತಮ್ಮ ಪಕ್ಕದಲ್ಲಿರುವವರಿಗೆ ಭಗವದ್ಗೀತೆಯ ಸಾರಾಂಶವನ್ನಾದರೂ ಸ್ವಲ್ಪ ಹೇಳಿಕೊಡಿ. ಘೋಷಣೆ ಕೂಗುವುದರ ಬದಲು ಉಪಯೋಗ ಆಗುತ್ತದೆ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ನಸೀರ್ ಅಹ್ಮದ್‌ರವರು ಮಾತನಾಡುತ್ತಿದ್ದರು)**

**ವೈಸ್ ಚೇರ್ಮನ್:-** ಮಾನ್ಯ ನಸೀರ್‌ರವರೇ, ಭಗವದ್ಗೀತೆಯ ಸಾರ ಕೇಳಿಸಿಕೊಳ್ಳಿ. ಈಗ ಒಳ್ಳೆಯ ಸಮಯ. ಸದನದ ಬಾವಿಯಿಂದ ಮಾತನಾಡಬಾರದು. ತಾವು ಅಮಾನತ್ತಿನಲ್ಲಿದ್ದೀರಿ. ತಾವು ನಿಯಮಾವಳಿಗಳನ್ನು ಉಲ್ಲಂಘನೆ ಮಾಡುತ್ತಿದ್ದೀರಿ. ಸದನದ ಬಾವಿಯೊಳಗಿಂದ ಮಾತನಾಡಬಾರದು. ತಮಗೆ ನಿಯಮಾವಳಿಗಳೇ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡುತ್ತಿದ್ದರು)**

**ವೈಸ್ ಚೇರ್ಮನ್:-** ಮಾನ್ಯ ಹರಿಪ್ರಸಾದ್‌ರವರೇ ತಾವು ಕೂಡ ಅಮಾನತ್ತುಗೊಂಡಿದ್ದೀರಿ. ಹಾಗಾಗಿ, ತಮಗೆ ಮಾತನಾಡಲು ಅವಕಾಶ ಇರುವುದಿಲ್ಲ. ಅದು ರೆಕಾರ್ಡ್‌ಗೆ ಹೋಗಕೂಡದು. <u>**ಅಮಾನತ್ತುಗೊಳಗಾದವರು ಯಾರೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗಬಾರದು.**</u>

**(ಮಾನ್ಯ ವೈಸ್‌ಚೇರ್ಮನ್‌ರವರ ಆದೇಶಾನುಸಾರ ಅಮಾನತ್ತಿಗೆ ಒಳಗಾದವರು ಮಾತನಾಡಿರುವುದನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಸಿ.ಎಂ. ಇಬ್ರಾಹಿಂ(ಸದನದ ಬಾವಿಯಿಂದ):-** ಮಾನ್ಯ ಸಭಾಪತಿಯವರೇ, ಸದನದಲ್ಲಿ ನಾವು ಮಾತನಾಡಿದ್ದು ಕಡತಕ್ಕೆ ಹೋಗದಿದ್ದರೂ ಕೂಡ, ಮಾಧ್ಯಮದ ಮುಖಾಂತರ ಸಾರ್ವಜನಿಕರು ನೋಡುತ್ತಿದ್ದಾರೆ.

**ವೈಸ್ ಚೇರ್ಮನ್:-** ಮಾನ್ಯ ಸಭಾಪತಿಯವರೇ, ಮೇಲಿನವರು(ಮಾಧ್ಯಮದವರು) ನೋಡಬೇಕಾಗಿರುವುದು ಬಹಳ ಮುಖ್ಯ. ಮಾಧ್ಯಮ ಸ್ನೇಹಿತರು ನೋಡಬೇಕೆನ್ನುವುದೇ ನಮ್ಮ ಉದ್ದೇಶ. ತಾವು ಹಿರಿಯರು ಹೇಗೆ ನಡೆದುಕೊಳ್ಳುತ್ತಿದ್ದೀರಿ ಎಂದು ನೋಡಬೇಕೆನ್ನುವುದೇ ನಮ್ಮ

ಉದ್ದೇಶ. ಅದನ್ನು ಅವರು ನೋಡಲಿ. ನೋಡಬೇಕು. Seeing is believing. ನೋಡಬೇಕು ನಿಮ್ಮನ್ನು. ಚೆನ್ನಾಗಿ ನೋಡಲಿ. ಇದರಿಂದಾಗಿ, ಅವರು ತಮ್ಮ ಮನಸ್ಸಿನಲ್ಲಿ ಒಂದು ವರ್ಡ್ ಇಟ್ಟುಕೊಳ್ಳುತ್ತಾರೆ. ಹಾಗಾಗಿ, ಅವರು ನೋಡಲಿ. ಯಾರು ಮಾತನಾಡಬಾರದು. ತಾವು ಅಮಾನತ್ತು ಆಗಿದ್ದೀರಿ. ಇಲ್ಲಿ ಭಾಷಣ ಮಾಡುವುದಕ್ಕೆ ಇದು ಪಬ್ಲಿಕ್ ಮೀಟಿಂಗ್ ಅಲ್ಲ. ತಾವು ಎಲ್ಲಾ ರೀತಿಯ ಎಲ್ಲೆಯನ್ನು ಮೀರುತ್ತಿದ್ದೀರಿ. ತಾವು ಎಲ್ಲಾ ರೀತಿಯನ್ನು ಎಲ್ಲೆಯನ್ನು ಮೀರುತ್ತಿದ್ದೀರಿ. ತಾವು ಈ ಸದನಕ್ಕೆ ಅಗೌರವ ತೋರುತ್ತಿದ್ದೀರಿ. ಇದಕ್ಕೆ ಏತಕ್ಕೆ ಸದನಕ್ಕೆ ಬರುತ್ತೀರಿ? ಇದಕ್ಕೆ ಎಲೆಕ್ಟ್ ಆಗಿ ಬರಬೇಕಾಗಿಲ್ಲ. ಇದನ್ನು ಆಚೆ ಮಾಡಬೇಕಾಗಿರುವಂಥದ್ದು. ಈ ಭಾಷಣ ಆಚೆ ಮಾಡಬೇಕು. ತಮ್ಮ ಭಾಷಣಕ್ಕೆ ಇಲ್ಲಿ ಅವಕಾಶ ಇರುವುದಿಲ್ಲ. ಅದನ್ನು ತಾವು ಹೊರಗಡೆ ಹೋಗಿ ಮಾಡಿ.

(ಮುಂದು)

(1114) 15.12.2021 4.20 YL-MD (ವೈಸ್‌ಛೇರ್ಮನ್‌ರವರ ಉಪಸ್ಥಿತಿ)

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂರವರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಸದನದ ಭಾವಿಯಲ್ಲಿ ಧರಣಿ ನಿರತರಾಗಿದ್ದರು)**

**(ಗೊಂದಲ)**

**ವೈಸ್‌ಛೇರ್ಮನ್:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು ಅದರಲ್ಲಿ ನಿಯಮ 326 - ಸದಸ್ಯರು ಸದನದ ಹೊರಗೆ ಹೋಗಬೇಕೆಂದು ಆದೇಶ ಮಾಡುವುದು ಮತ್ತು ನಿಯಮ 327 - ಸದಸ್ಯರನ್ನು ಕೆಲಕಾಲ ಸದನಕ್ಕೆ ಬರದಂತೆ ತಡೆಹಿಡಿಯುವುದು.

ಹಾಗಾಗಿ ಸದನದಿಂದ ಅಮಾನತುಗೊಂಡಿದ್ದೀರಿ, ಸದನದಿಂದ ಗೌರವಯುತವಾಗಿ ಬಾವಿಯಲ್ಲಿರುವ ಮಾನ್ಯ ಸದಸ್ಯರುಗಳು ಹೊರಗೆ ಹೋಗಬೇಕು.

**(ಗೊಂದಲ)**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಮಾನ್ಯ ನಸೀರ್ ಅಹ್ಮದ್‌ರವರು ಮಾತನಾಡುತ್ತಿದ್ದರು)**

**ವೈಸ್‌ಛೇರ್ಮನ್:-** ಸದನದ ಬಾವಿಯಲ್ಲಿರುವ ಮಾನ್ಯ ಸದಸ್ಯರುಗಳು ಯಾರೇ ಮಾತನಾಡಿದರು ಕಡತಕ್ಕೆ ಹೋಗಬಾರದು. ಕರ್ನಾಟಕದ ವಿಧಾನ ಪರಿಷತ್ತಿನಲ್ಲಿ ಸಭಾಪತಿಯವರ ಪೀಠದಲ್ಲಿ ಸಭಾಪತಿಯವರಾಗಲಿ ಅಥವಾ ಯಾರೇ ಆ ಪೀಠದಲ್ಲಿ ಕುಳಿತುಕೊಂಡಿದ್ದಾಗ ಪಕ್ಷಾತೀತವಾಗಿ ನಡೆದುಕೊಂಡಿದ್ದಾರೆ, ಯಾವುದೇ ಪಕ್ಷ ಅಧಿಕಾರದಲ್ಲಿದಾಗಲೂ ಸಭಾಪತಿ ಪೀಠದಿಂದ ದುರುಪಯೋಗವಾಗಿಲ್ಲ. ಆದುದರಿಂದ ಆ ರೀತಿಯ ಶಬ್ದಗಳನ್ನು ಬಳಕೆ ಮಾಡಬಾರದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂರವರು ತಮ್ಮ ಸ್ಥಾನದಿಂದ ಹೊರಗಡೆ ನಿಂತು ಮಾತನಾಡುತ್ತಿದ್ದರು)**

ಮಾನ್ಯ ಇಬ್ರಾಹಿಂರವರೇ, ಬಾವಿಯ ಹೊರಗಡೆಯಿಂದ ಒಂದು ಒಳ್ಳೆಯ ಪ್ರವಚನವನ್ನು ಮಾಡಿ. ನಮ್ಮ ಮಾರ್ಷಲ್‌ಗಳು ಹೊರಗಡೆ ತಮಗೆ ಕಾಫಿ, ಟೀ ನೀಡಿ, ಉಪಚಾರ ಮಾಡುತ್ತಾರೆ. ಅವರಿಗೆ ಒಂದು ಪ್ರಶಿಕ್ಷಣ ಕೊಡಿ. ಮಾನ್ಯ ಆಯನೂರು ಮಂಜುನಾಥ್‌ರವರೆ ತಾವು ಮಾತನಾಡಿ.

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆ ಕೂಗುತ್ತಿದ್ದರು)**

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಆ ಪೀಠದಿಂದ ರೂಲಿಂಗ್ ನೀಡಲಾಗಿದ್ದು, ನಂತರವೂ ಇಷ್ಟು ತಮಾಷೆಯನ್ನು ನೋಡುತ್ತಾ, ಪೀಠ ಸುಮ್ಮನೆ ಕುಳಿತುಕೊಳ್ಳಬಾರದು, ಕ್ರಮವನ್ನು ಜಾರಿಗೊಳಿಸಬೇಕು. ಕೆಲವರಿಗೆ ಬುದ್ಧಿ ಹೇಳುವ ಅವಶ್ಯಕತೆ ಸಹ ಇಲ್ಲ. ಮಾರ್ಷಲ್‌ಗಳಿದ್ದಾರೆ ಅವರುಗಳನ್ನು ಕರೆಸಿ ಹೊರಗೆ ಹಾಕಿಸಿ. ಆದೇಶವನ್ನು ಜಾರಿ ಮಾಡಬೇಕು ಹಾಗೂ ಆದೇಶಕ್ಕೆ ಗೌರವ ಬರಬೇಕು. ಇಂತಹ ತಮಾಷೆ ಬಹಳ ಹೊತ್ತು ನಡೆಯಬಾರದು. ದಯವಿಟ್ಟು ಹೊರಗೆ ಕಳುಹಿಸಿ.

**(ಗೊಂದಲ)**

**ವೈಸ್‌ಛೇರ್ಮನ್:-** ದಯವಿಟ್ಟು ಅಮಾನತುಗೊಂಡಿರುವ ಸದಸ್ಯರು ಹೊರಗೆ ಹೋಗಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಆದೇಶ ಉಲ್ಲಂಘನೆಯಾಗುತ್ತಿದೆ. ಪೀಠವು ತಮಾಷೆ ನೋಡಿಕೊಂಡು ಕುಳಿತಿದೆಯೇ? ಮಾರ್ಷಲ್‌ಗಳನ್ನು ಕರೆಯಿರಿ.

**(ಗೊಂದಲ)**

**ವೈಸ್‌ಛೇರ್ಮನ್:-** ದಯವಿಟ್ಟು ಅಮಾನತುಗೊಂಡಿರುವ ಸದಸ್ಯರು, ನಾನು ಹೆಸರನ್ನು ಉಲ್ಲೇಖಿಸಿದ ಸದಸ್ಯರು ಹೊರಗೆ ಹೋಗಿ. **(ಗೊಂದಲ)** ಇಂತಹ ಹಠ ಏತಕ್ಕೆ? ತಮ್ಮನ್ನು ಅಮಾನತುಗೊಳಿಸಿದ ಮೇಲೆ ಇಂತಹ ಹಠ ಏತಕ್ಕೆ?

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ತೀರ್ಮಾನವನ್ನು ಜಾರಿಗೊಳಿಸಿರುವುದು ಸದನ ನಡೆಸುವುದಕ್ಕೋಸ್ಕರ. ಈ ತಮಾಷೆ ನಿಲ್ಲುವವರೆಗೂ ಪೀಠ ನೋಡುತ್ತಾ ಕುಳಿತುಕೊಳ್ಳಬಾರದು, ಕೊನೆಗೊಳಿಸಬೇಕು. ಆದೇಶವನ್ನು ಜಾರಿಗೊಳಿಸುವುದು ಪೀಠದ ಕೆಲಸ. ತಮ್ಮ ಆದೇಶವನ್ನು ಪಾಲಿಸಲಿಲ್ಲವೆಂದರೆ, ಪೀಠಕ್ಕೆ ಅವಮಾನವಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

**ವೈಸ್‌ಛೇರ್ಮನ್:-** ಇತರೆ ಸದಸ್ಯರುಗಳ ಭಾವನೆಗಳನ್ನು, ಹಕ್ಕನ್ನು ಗೌರವಿಸಬೇಕು. ಇತರೆ ಸದಸ್ಯರು ಯಾರು ಸದನದಲ್ಲಿ ಚರ್ಚೆ ಮಾಡಲು ಬಂದಿದ್ದಾರೆ, ಕಲಾಪದಲ್ಲಿ ಭಾಗವಹಿಸಲು ಬಂದಿದ್ದಾರೆ, ಅವರ ಕರ್ತವ್ಯಕ್ಕೆ ಲೋಪವಾಗದ ರೀತಿ ತಾವು ಯಾವುದೇ ರೀತಿಯಲ್ಲಿ ಅಡಚಣೆ ಮಾಡಬಾರದು, ಅದು ಸೌಜನ್ಯವಲ್ಲ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಆದೇಶವನ್ನು ಜಾರಿ ಮಾಡಿ ಎಂದು ನಾವು ಏನಾದರೂ ಬಾವಿಯೊಳಗೆ ಬರಬೇಕೇ? ಅಥವಾ ಆದೇಶವನ್ನು ಜಾರಿ ಮಾಡುತ್ತೀರಾ?

**ವೈಸ್‌ಛೇರ್ಮನ್:-** ಮಾನ್ಯ ಸದಸ್ಯರೆ, ಅದರ ಅವಶ್ಯಕತೆ ಇಲ್ಲ. ಆಡಳಿತ ಪಕ್ಷದವರು ಸ್ವಲ್ಪ ಸಮಾಧಾನ ಮಾಡಿಕೊಳ್ಳಬೇಕು. ಹಳೆಯ ಚಾಳಿ ಬಂದಿದೆ. ಎಲ್ಲಾ ಕಡೆಯು ಅದು ಹರಡಿದೆ. ಇನ್ನು ಮುಂದೆ ಆದರೂ ಅದು ನಿಲ್ಲಬೇಕು.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:-** ಬಾವಿಯಲ್ಲಿರುವ ಮಾನ್ಯ ಸದಸ್ಯರನ್ನು ಹೊರಗೆ ಕಳುಹಿಸಲಿಲ್ಲವೆಂದರೆ, ನಾವು ಬಾವಿಗೆ ಬಂದು ಅವರನ್ನು ಹೊರಗೆ ಕಳುಹಿಸಬೇಕಾಗುತ್ತದೆ. ಆದೇಶವನ್ನು ಜಾರಿಗೊಳಿಸಿ, ಈ ತಮಾಷೆ ಒಳ್ಳೆಯದಲ್ಲ, ಸಂಪ್ರಾದಾಯಿಕವಾಗಿಲ್ಲ.

**ವೈಸ್‌ಛೇರ್ಮನ್:-** ನಾವು ಸಂಯಮದ ಎಲ್ಲಾ ಎಲ್ಲೆಯನ್ನು ತೋರುತ್ತಿದ್ದೇವೆ. ನಿಯಮದ ಪ್ರಕಾರ ಸದಸ್ಯರು ಏರು ಧ್ವನಿಯಲ್ಲಿ ಬಾವಿಯಿಂದ ಮಾತನಾಡುವಂತಿಲ್ಲ, ಜೋರಾಗಿ ಕೂಗುವಂತಿಲ್ಲ, ಕಾರ್ಯಕಾಲಪದಿಂದ ತಾವು ಅಮಾನತುಗೊಂಡಿದ್ದೀರಿ, ಮಾತನಾಡುವ ಹಾಗಿಲ್ಲ. ಮಾತನಾಡುವುದು ಶೋಭೆಯಲ್ಲ. **(ಗೊಂದಲ)** ತಮ್ಮ ಸ್ಥಾನದಲ್ಲಿ ನಿಲ್ಲದೇ ಬಾವಿಯಲ್ಲಿ ನಿಂತು ಮಾತನಾಡಬಾರದು **(ಗೊಂದಲ)** ತಮ್ಮ ಸ್ಥಾನವನ್ನು ಬಿಟ್ಟು ಬೇರೆ ಕಡೆ ನಿಂತು ಪ್ರಶ್ನೆ ಸಹ ಕೇಳುವ ಹಾಗಿಲ್ಲ ಎಂಬುದು ತಮಗೂ ಗೊತ್ತಿದೆ. ನಿಗದಿತ ಸ್ಥಾನವನ್ನು ಬಿಟ್ಟು ಏನು ಮಾಡುವಂತಿಲ್ಲ **(ಗೊಂದಲ)** ತಾವು ಪೀಠದ ಕಡೆ ಉದ್ದೇಶ ಮಾಡಿ ತಮ್ಮ ಸ್ಥಾನದಿಂದ ಮಾತನಾಡಬೇಕೇ ಹೊರತು ಬಾವಿಯಲ್ಲಿ ನಿಂತು ಮಾತನಾಡಬಾರದು. ಪೀಠಕ್ಕೆ ಗೌರವ ಕೊಡಿ. ತಾವೆಲ್ಲರೂ ಸೇರಿ ಮಾಡಿರುವಂಥ ಪೀಠ ಇದ್ದಾಗಿದ್ದು, ಆ ಸಭಾಪತಿ ಪೀಠಕ್ಕೆ ಗೌರವ ನೀಡಿ. **(ಗೊಂದಲ)** ಸದನದಲ್ಲಿ ಯಾರೂ ಮಾತನಾಡದೇ ಇರುವಾಗ ನಿಶಬ್ಧವಾಗಿರಬೇಕೆಂದು ನಿಯಮ ಇದೆ. ನಾನು ಆ ನಿಯಮವನ್ನು ಹೇಳುತ್ತಿದ್ದೇನೆ. ನಾವು ಕಿರಿಯರಾಗಿ ನಮ್ಮ ಹಿರಿಯ ಸದಸ್ಯರಿಗೆ ಆ ನಿಯಮವನ್ನು ಹೇಳಿಕೊಡುವಂಥ ಅಸಹಾಯಕತೆಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ನಮ್ಮನ್ನು ದೂಡುವುದು ಬೇಡ **(ಗೊಂದಲ)** ಭೂತಗಳು ಯಾರು ಈ ಸದನದ ಒಳಗೆ ಬರಲು ಸಾಧ್ಯವಿಲ್ಲ. ಏಕೆಂದರೆ, ಅದೃಶ್ಯಕಾಯಗಳು ಇಲ್ಲಿ ಬರಲು ಸಾಧ್ಯವಿಲ್ಲ (**ಗೊಂದಲ)** ಸದನದಲ್ಲಿ ಘೋಷಣೆ ಕೂಗಬಾರದು. ಮಾಧ್ಯಮಗಳ ಮೂಲಕ ನಾಡಿನ ಜನ ತಮ್ಮ ಧ್ವನಿಯನ್ನು ಕೇಳಿಸಿಕೊಳ್ಳುತ್ತಿದ್ದಾರೆ, ನಾಡಿನ ಜನರು ನೋಡಲಿ. ಬೆಳಗಾವಿಯ ಸುವರ್ಣಸೌಧದಲ್ಲಿ ಕುಳಿತು ಮೇಲ್ಮನೆಯಲ್ಲಿ ಯಾವ ರೀತಿ ಕಲಾಪ ನಡೆಸುತ್ತಿದ್ದೀರಿ ಎಂಬುದನ್ನು ನಾಡಿನ ಜನರು ನೋಡುತ್ತಿದ್ದಾರೆ. ಈ ಪೀಠಕ್ಕೆ, ಆದೇಶಕ್ಕೆ ಮತ್ತು ನಿಯಮಾವಳಿಗಳಿಗೆ ಗೌರವ ಕೊಡುವುದಿಲ್ಲ. Dictatorship ನಡೆಯುವುದಿಲ್ಲ. ಸಭಾಪತಿ ಪೀಠ dictatorship ಗೆ yield ಆಗುವುದಿಲ್ಲ **(ಗೊಂದಲ)** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು 303 ರಲ್ಲಿ ಸದಸ್ಯರು ಪಾಲಿಸಬೇಕಾದ ನಿಯಮಗಳು ಅದರಲ್ಲಿ 16ನೇ ಅಂಶದಂತೆ ಸದನದಲ್ಲಿ ಬಾವುಟಗಳು, ಲಾಂಛನಗಳು ಅಥವಾ ಯಾವುದೇ ನಿಶಾನೆಗಳನ್ನು ಪ್ರದರ್ಶಿಸತಕ್ಕದ್ದಲ್ಲ.

ಫಲಕಗಳನ್ನು ಪ್ರದರ್ಶನ ಮಾಡಬೇಡಿ, ಅದು ನಿಯಮಾವಳಿಗೆ ವಿರುದ್ಧವಾಗಿದೆ **(ಗೊಂದಲ)** ಅಂದರೆ ಮಾತದಾನ ಮಾಡಿದವರೆಲ್ಲಾ 420 ಗಳು ಎಂದು ಅರ್ಥವೇ? ಒಂದು ಸರ್ಕಾರವನ್ನು ಪ್ರಜಾಸತಾತ್ಮಕ ರೀತಿಯಲ್ಲಿ ಮತದಾನದ ಮೂಲಕ ಚುನಾವಣೆ ಮಾಡಿ ಇಲ್ಲಿ ತಂದರೆ, ಅಂತಹ ಶಬ್ದಗಳು ಸದನದೊಳಗೆ ಶೋಭೆ ತರುತ್ತದೆಯೇ?

(ಮುಂದು)

(1115) 15-12-2021 / 4.30 SK-MD

(ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ವೈಸ್ ಛೇರ್ಮನ್ (ಮುಂದು):-**

ಬಹುಮತವಿರುವ ಚುನಾಯಿತ ಸರ್ಕಾರ. ಚುನಾವಣೆ ಆಗಿಲ್ಲದಿದ್ದರೆ ಈ ಸದನಕ್ಕೆ ಬರುವುದಕ್ಕೆ ಆಗುತ್ತದೆಯೇ? ಶಬ್ದ ಪ್ರಯೋಗ ಮಾಡುವುದು ಈ ಸದನಕ್ಕೆ ಗೌರವ ತರುತ್ತದೆಯೇ? ಈ ಸದನದಲ್ಲಿ ಎಷ್ಟೋ ಒಳ್ಳೆ ವಿಚಾರಗಳು ಚರ್ಚೆ ಮಾಡುವುದಿತ್ತು.

ಇಷ್ಟು ಹೊತ್ತು ಸದನದ ಸಮಯವನ್ನು ವ್ಯರ್ಥ ಮಾಡಿದ್ದು ಮತ್ತು ಸದನದ ಸಮಯವನ್ನು ಗೌರವಿಸಿದವರಿಗೆ ಈ ಕಳಂಕ ಏತಕ್ಕೆ ಅಂಟಬೇಕು. ಕಲಾಪ ನಡೆಸಬೇಕೆಂದು ಕುಳಿತಿರುವವರಿಗೆ ಈ ಕಳಂಕ ಏಕೆ ಅಂಟಬೇಕು. ಅಮಾನತ್ತುಗೊಂಡ ಮಾನ್ಯ ಸದಸ್ಯರು ಹೊರಗೆ ಹೋಗಿ ಘೋಷಣೆ ಕೂಗಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವು ಘೋಷಣೆ ಕೂಗಿ ಸುಸ್ತಾಗಿದ್ದೀರಿ ಮತ್ತು ಧಣಿದಿದ್ದೀರಿ. ನನಗೆ ಬಹಳ ಬೇಸರವಾಗುತ್ತಿದೆ. ಇಲ್ಲಿಂದ ಹೊರಗಡೆ ಹೋದರೆ, ಪಾನೀಯ ವ್ಯವಸ್ಥೆಯನ್ನಾದರೂ ಮಾಡಿಸಬಹುದು.

**(ಗೊಂದಲ)**

ಈ ಸದನದಲ್ಲಿ ಮಾತಿನಿಂದಲೇ ಗೆಲ್ಲಬೇಕು. ಮಾತಿನ ಯುದ್ಧ ಮಾಡಿದರೆ ಮಾತ್ರ ಇಲ್ಲಿ ಗೆಲ್ಲುವುದಕ್ಕೆ ಆಗುತ್ತದೆ. ತಾವು ಅದನ್ನು ಕಳೆದುಕೊಂಡಿದ್ದೀರಿ.

**(ಗೊಂದಲ)**

ಮಾನ್ಯ ಆಯನೂರು ಮಂಜುನಾಥರವರೇ ಮತ್ತು ಮಾನ್ಯ ಸುನೀಲ್‌ರವರೇ ತಾವು ಭಗವದ್ಗೀತೆಯ ಬಗ್ಗೆ ಮಾತನಾಡುತ್ತೀರಾ. ನನಗೆ ಕೇಳುವುದಕ್ಕೆ ಆಸಕ್ತಿ ಉಂಟಾಗಿದೆ. ತಾವು ಭಗವದ್ಗೀತೆಯ ಸಾರವನ್ನಾದರೂ ಸ್ವಲ್ಪ ಹೇಳಿ, ಅದನ್ನಾದರೂ ಪ್ರತಿಭಟನೆಯಲ್ಲಿ ಧರಣಿಯಲ್ಲಿ ನಿರತರಾದವರು ಕೇಳಿಸಿಕೊಳ್ಳಲಿ.

**(ಗೊಂದಲ)**

ಇದು ಒಳ್ಳೆಯ debate ಆಗಿದ್ದು, ಅಧಿಕಾರಿ ವರ್ಗ ಮತ್ತು ಮಾಧ್ಯಮ ವರ್ಗವಾದರೂ ಸ್ವಲ್ಪ ಕೇಳಿಸಿಕೊಳ್ಳಲಿ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಾಪಚಂದ್ರ ಶೆಟ್ಟಿ ಮತ್ತು ಮಾನ್ಯ ಗೋಪಾಲಸ್ವಾಮಿಯವರ ಅವಧಿ ಮುಗಿಯುತ್ತಾ ಬಂದಿದೆ. ಕೊನೆ ದಿನ ಸ್ವಲ್ಪ ಕೂಗಬೇಕೆಂದು ಕೂಗುತ್ತಿದ್ದಾರೆ. ತಾವು ಸ್ವಲ್ಪ ಸುಧಾರಿಸಿಕೊಳ್ಳಿ. ಮೂರು ಜನ ಸದಸ್ಯರ ಅವಧಿ ಮುಗಿಯುತ್ತಾ ಬರುತ್ತಿದೆ. ಅವರು ಮತ್ತೆ ಸದನದೊಳಗೆ ಬರುವುದಕ್ಕಾಗುವುದಿಲ್ಲವೆಂದು ಮಾನ್ಯ ಸದಸ್ಯರುಗಳಾದ ಶ್ರೀ ನಾರಾಯಣಸ್ವಾಮಿ, ಶ್ರೀ ಗೋಪಾಲಸ್ವಾಮಿ ಹೋರಾಟ ಮಾಡುತ್ತಿದ್ದಾರೆ. ತಾವು ಇದರ ಮಧ್ಯೆ ಮಾತನಾಡಬೇಡಿ. ಅವರು ಎಷ್ಟು ಬೇಕಾದರೂ ಮಾತನಾಡಲಿ.

**(ಗೊಂದಲ)**

**ವೈಸ್ ಛೇರ್ಮನ್:-** ತಾವು ಭಗವದ್ಗೀತೆಯ ಬಗ್ಗೆ ಮಾತನಾಡಿ. ಮಾನ್ಯ ಸಭಾನಾಯಕರು ಮತ್ತು ಪ್ರತಿ ಪಕ್ಷದ ನಾಯರು ಬರುವವರೆಗೂ ಈ ಸದನದ ಸಮಯವನ್ನಾದರೂ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದುಪಯೋಗಪಡಿಸಿಕೊಳ್ಳೋಣ. ಭಗವದ್ಗೀತೆಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವುದಕ್ಕೆ ನನಗೆ ಆಸಕ್ತಿ ಉಂಟಾಗಿದೆ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ:-** ಮಾನ್ಯ ಸಭಾಪತಿಯವರೇ, ಅಪರೂಪಕ್ಕೆ ಭೂತ್ಗಗಳು ಭಗವದ್ಗೀತೆಯ ಸ್ಮರಣೆ ಮಾಡುತ್ತಿವೆ.

**(ಗೊಂದಲ)**

**ವೈಸ್ ಛೇರ್ಮನ್:-** ಭೂತಗಳು ಭಗವದ್ಗೀತೆಯನ್ನು ಬೇಡುತ್ತವೆಯಾ. ತಾವು ಭಗವದ್ಗೀತೆಯ ಬಗ್ಗೆ ಮಾತನಾಡಿ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ:-** ಮಾನ್ಯ ಸಭಾಪತಿಯವರೇ, ಈ ಭೂತಗಳಿಗೆ ತಾವು ಏಕೆ ಉತ್ತರ ಕೊಡುತ್ತಿದ್ದೀರಾ. **(ಗೊಂದಲ)** ಅದು ಅಪಭ್ರಂಶದ ಮಾತುಗಳನ್ನು ಹೇಳುತ್ತಿವೆ. ಅವು ಒಪ್ಪಿಕೊಂಡಿವೆ. **(ಗೊಂದಲ)** ಈಗ ಗೂಟ ಹೊಡೆದುಕೊಂಡು ಕಿತ್ತುಕೊಂಡು ಹೋಗಿವೆಯೆಲ್ಲಾ.

**(ಗೊಂದಲ)**

**ವೈಸ್ ಛೇರ್ಮನ್:-** ಭಗವದ್ಗೀತೆಯ ಕಾಲದಲ್ಲಿ ಪ್ರಜಾಪ್ರಭುತ್ವ ಇತ್ತು. ಅದರ ಸಾರವನ್ನಾದರೂ ತಾವು ಸ್ವಲ್ಪ ಹೇಳಿ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ:-** ಮಾನ್ಯ ಸಭಾಪತಿಯವರೇ, ಅವರನ್ನು ಬಿಟ್ಟು ಬಿಡಿ.

**(ಗೊಂದಲ)**

**ವೈಸ್ ಛೇರ್ಮನ್:-** ಭಗವದ್ಗೀತೆ ಹೇಳುವುದಕ್ಕೆ ಒಳ್ಳೆಯ ಅವಕಾಶ ಸಿಗುತ್ತಿದೆ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ:-** ಪೀಠದಲ್ಲಿ ಸ್ವಲ್ಪ ಹೊತ್ತು ಮೌನವಾಗಿ ಇದ್ದು ಬಿಡಿ. ಅವರನ್ನು ಹೊರಗೆ ಹಾಕಿ. ಅವರು ಏನು ಮಾಡುತ್ತಾರೋ, ಮಾಡಲಿ. ಇವೆರಡರಲ್ಲಿ ಯಾವುದಾದರೂ ಒಂದು ಮಾಡಿ. **(ಗೊಂದಲ)** ಮಾನ್ಯ ಕುಮಾರಸ್ವಾಮಿಯವರ ಕಾಲನ್ನು ಹಿಡಿದುಕೊಂಡು ಸರ್ಕಾರ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ ಕಾಂಗ್ರೆಸ್‌ಗೆ ಇಲ್ಲದೇ ಇರುವ ಸ್ವಾಭಿಮಾನ ಮತ್ತು ಗೌರವ ಈಗ ಇದಕ್ಕಿದ್ದ ಹಾಗೇ ಜಾಗೃತವಾಗಿ ಬಿಟ್ಟಿದೆಯೇ? ಕಡಿಮೆ ಇದ್ದವನು ಹೆಗಲ ಮೇಲೆ ಕೂರಿಸಿಕೊಂಡು ಸವಾರಿ ಮಾಡಿಸಿಕೊಳ್ಳಬೇಕಾದರೆ, ಇಲ್ಲದೇ ಇರುವ ನಿಯಮಾವಳಿ ಮತ್ತು ಸ್ವಾಭಿಮಾನ ..... ನಾನು ಸದನದ ಭಾವಿಯಲ್ಲಿ ನಿಂತುಕೊಂಡು ಮಾತನಾಡಬಾರದು. ನಾನು ಸ್ಥಾನದಲ್ಲಿ ನಿಂತುಕೊಂಡು ಮಾತನಾಡಬೇಕು ಎನ್ನುವುದು ಧರಣಿ ನಿರತ ಸದಸ್ಯರುಗಳಿಗೆ ನಿಯಮಾವಳಿಗಳು ಗೊತ್ತಿಲ್ಲವೇ.

**ವೈಸ್ ಛೇರ್ಮನ್:-** ಯಾವುದೂ ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಸಭಾಪತಿಯವರು:-** ಒಂದು ನಿಮಿಷ. ದಯವಿಟ್ಟು ತಮಗೆಲ್ಲರಿಗೂ ಎಷ್ಟು ಬಾರಿ ಹೇಳಿದರೂ ಕೇಳಲಿಲ್ಲ. ಈ ಹಿನ್ನೆಲೆಯಲ್ಲಿ ಸದನವನ್ನು ನಡೆಸುವುದು ಬಹಳ ಕಷ್ಟದ ಕೆಲಸವಾಗಿರುವುದರಿಂದ ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಾಯಂಕಾಲ 4 ಗಂಟೆ 35 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 16ನೇ ಡಿಸೆಂಬರ್ ಮಾಹೆ 2021ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

**<><><>**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"